ಸಂಪುಟ: 05 ಸಂಚಿಕೆ: 240 ಪುಟಗಳು: 08 ಶುಕ್ರವಾರ 14 ನವೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಒಂದು ಒಳ್ಳೆಯ ಪುಸ್ತಕ ನೂರು ಉತ್ತಮ ಸ್ನೇಹಿತರಿಗೆ ಸಮ. ಆದರೆ, ಒಬ್ಬ ಒಳ್ಳೆಯ ಸ್ನೇಹಿತ ಒಂದು ಗ್ರಂಥಾಲಯಕ್ಕೆ ಸಮಾನ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಬಾಬ್ರಿ ಮಸೀದಿ ಧ್ವಂಸಕ್ಕೆ ಪ್ರತೀಕಾರದ ಭಾಗವೇ ದೆಹಲಿ ಸ್ಫೋಟ

• ಉದಯವಾಹಿನಿ, ನವದೆಹಲಿ

ದೆಹಲಿ ಬಾಂಬ್ ಸ್ಫೋಟದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ (ಇ.ಡಿ.) ಮಹತ್ವದ ವಿಚಾರವೊಂದನ್ನು ಪತ್ತೆ ಹಚ್ಚಿದೆ. 1992ರ ಡಿ. 6ರಂದು ನಡೆದಿದ್ದ ಬಾಬ್ರಿ ಮಸೀದಿ ಧ್ವಂಸಕ್ಕೆ ಪ್ರತೀಕಾರವಾಗಿ ಈ ವರ್ಷದ ಡಿ. 6ರಂದು ದೇಶದ ನಾನಾ ಭಾಗಗಳಲ್ಲಿ ಒಟ್ಟು 32 ಕಡೆ ಸ್ಫೋಟಗಳನ್ನು ನಡೆಸಲು ಉಗ್ರರು ಯೋಜಿಸಿದ್ದರು ಎಂಬ ವಿಚಾರ ಬಹಿರಂಗವಾಗಿದೆ.

ಅಲ್ - ಫಲಾಹ್ ವಿಶ್ವವಿದ್ಯಾಲಯಕ್ಕೆ ಕೇಂದ್ರದಿಂದ ಬರುತ್ತಿದ್ದ ಅನುದಾನಗಳನ್ನು ಕುಕೃತ್ಯಗಳಿಗೆ ಬಳಸಲಾಗುತ್ತಿತ್ತೇ ಎಂಬುದರ ವಿಚಾರವಾಗಿ ಇ.ಡಿ. ತನಿಖೆ ನಡೆಸುತ್ತಿದೆ.

ಅದೇ ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಹಾಗೂ ದೆಹಲಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಆರೋಪಿಗಳು ಆಗಿರುವ ವೈದ್ಯರ ತಂಡಕ್ಕೆ ವಿಶ್ವವಿದ್ಯಾಲಯದಿಂದ ಹಣ ಹೋಗುತ್ತಿತ್ತೇ ಎಂಬುದನ್ನು ಇ.ಡಿ. ತನಿಖೆಗೊಳಪಡಿಸಿದೆ.



ದೆಹಲಿ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿರುವವರು, ಡಾ. ಮುಝುಮ್ಮಿಲ್, ಡಾ. ಆದಿಲ್, ಉಮರ್ ಮತ್ತು ಶಾಹೀನ್ ಅವರುಗಳು ಸ್ಫೋಟಕಗಳನ್ನು ಖರೀದಿಸಲು 20ರಿಂದ 23 ಲಕ್ಷ ರೂ.ಗಳನ್ನು ವ್ಯಯಿಸಿದ್ದಾರೆ. ಆದರೆ, ಈ ಹಣ ಎಲ್ಲಿಂದ ಬಂತು ಎಂಬುದು ಈಗ ಇ.ಡಿ. ಅಧಿಕಾರಗಳ ಮುಂದಿನ ಪ್ರಶ್ನೆ. ಇದನ್ನೇ ತನಿಖೆ ನಡೆಸಲು ಇ.ಡಿ. ಅಧಿಕಾರಿಗಳು ಮುಂದಾದಾಗ, ಈ ಎಲ್ಲಾ ಉಗ್ರರು ಬಾಬ್ರಿ ಮಸೀದಿ ಪ್ರತೀಕಾರಕ್ಕೆ ಕಾಯುತ್ತಿದ್ದಾರೆ ಎಂದು ಹೇಳಿದ್ದಾರೆ.

**ಅಲ್ ಫಲಾಹ್ ವಿವಿ ಅಧಿಕೃತ ವೆಬ್ ಸೈಟ್ ಸ್ಥಗಿತ:** ದೆಹಲಿ ಬಾಂಬ್ ಸ್ಫೋಟ ಪ್ರಕರಣದ ಆರೋಪಿಗಳೊಂದಿಗೆ ಸಂಪರ್ಕ ಹೊಂದಿರುವ ಆರೋಪ ಎದುರಿಸುತ್ತಿರುವ ಹರ್ಯಾಣದ ಫರೀದಾಬಾದ್‌ನಲ್ಲಿರುವ ಅಲ್ ಫಲಾಹ್ ವಿಶ್ವವಿದ್ಯಾಲಯ ತನ್ನ ವೆಬ್‌ಸೈಟ್ ಅನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ವೆಬ್‌ಸೈಟ್‌ನಲ್ಲಿ ತಪ್ಪು ಮಾಹಿತಿ ಪ್ರಕಟಿಸಿದ್ದಕ್ಕಾಗಿ ನ್ಯಾಕ್ ವಿಶ್ವವಿದ್ಯಾಲಯಕ್ಕೆ ನೋಟಿಸ್ ಜಾರಿ ಮಾಡಿತ್ತು. ವಿ.ವಿ.ಯು ತನ್ನ ವೆಬ್‌ಸೈಟ್‌ನಲ್ಲಿ ತಮಗೆ 'ಎ' ಗ್ರೇಡ್ ಸಿಕ್ಕಿದೆ ಎಂದು ಸುಳ್ಳು ಘೋಷಣೆ ಮಾಡಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ನ್ಯಾಕ್, ವಿ.ವಿ.ಯ ಮಾನ್ಯತೆಯನ್ನು ರದ್ದುಗೊಳಿಸುವುದಾಗಿ ಎಚ್ಚರಿಕೆ ನೀಡಿದ ಬಳಿಕ, ಈ ವಿಶ್ವವಿದ್ಯಾಲಯವು ತನ್ನ ವೆಬ್ ಸೈಟ್ ಕಾರ್ಯಾಚರಣೆಯನ್ನು ನಿಲ್ಲಿಸಿದೆ.

**ಭಯೋತ್ಪಾದಕ ಗುಂಪಿನ ಪ್ರಮುಖ ಕೇಂದ್ರ**

**ಅಲ್-ಫಲಾಹ್ ವಿವಿ ಹಾಸ್ಟೆಲ್ ಕೊಠಡಿಯೇ ಉಗ್ರರ ಅಡ್ಡೆ:** ಹರಿಯಾಣದ ಅಲ್-ಫಲಾಹ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಹಾಸ್ಟೆಲ್ ಕೊಠಡಿಯು ವೈಟ್ ಕಾಲರ್ ಭಯೋತ್ಪಾದಕ ಗುಂಪಿನ ಪ್ರಮುಖ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು ಎಂದು ತನಿಖಾ ತಂಡವು ಮಾಹಿತಿ ನೀಡಿದೆ. ತನಿಖೆಯ ಪ್ರಕಾರ, ಈ ಭಯೋತ್ಪಾದಕರು ಅದೇ ಕೊಳಕು ಕೊಠಡಿಯಲ್ಲಿ ಸೇರಿ, ಎಲ್ಲೆಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸಬೇಕು, ಹಾಗೆಯೇ ಸ್ಫೋಟಕ ವಸ್ತುಗಳನ್ನು ಯಾರಿಗೂ ತಿಳಿಯದಂತೆ ಹೇಗೆ ಸಾಗಿಸಬೇಕು ಎಂಬ ವಿಚಾರಗಳ ಬಗ್ಗೆ ಸಭೆಗಳನ್ನು ನಡೆಸುತ್ತಿದ್ದರು ಎನ್ನಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ದೆಹಲಿಯ ರ‍್ಯಾಡಿಸನ್ ಹೋಟೆಲ್ ಬಳಿ ಸ್ಫೋಟ:** ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಕಾರು ಬಾಂಬ್ ಸ್ಫೋಟದ ಘಟನೆಯಿಂದ ನಲುಗಿರುವ ರಾಷ್ಟ್ರ ರಾಜಧಾನಿಯಲ್ಲಿ ಮತ್ತೊಂದು ಸ್ಫೋಟದ ಸುದ್ದಿ ಹರಿದಾಡಿ ಜನರಲ್ಲಿ ಆತಂಕ ಸೃಷ್ಟಿಸಿತ್ತು. ಮಹಿಪಾಲ್ ಪುರದಲ್ಲಿರುವ ರ‍್ಯಾಡಿಸನ್ ಹೋಟೆಲ್ ಬಳಿ ಬಸ್ ಟೈಯರ್ ಸ್ಫೋಟಗೊಂಡಿದ್ದು, ಇದರಿಂದ ಉಂಟಾದ ಭಾರಿ ಶಬ್ದದಿಂದಾಗಿ ಜನರು ಅದನ್ನು ಮತ್ತೊಂದು ಬಾಂಬ್ ಸ್ಫೋಟವೆಂದು ತಪ್ಪಾಗಿ ಭಾವಿಸಿದ್ದರು. ವಿಷಯ ತಿಳಿದ ಕೂಡಲೇ ದೆಹಲಿ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ.

## ವನ್ಯಪ್ರಾಣಿ ದಾಳಿ ತಡೆಗೆ ಡ್ರೋನ್ ಬಳಸಿ: ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಮಾನವ-ವನ್ಯಪ್ರಾಣಿ ಸಂಘರ್ಷ ತಪ್ಪಿಸಲು ಡ್ರೋಣ್ ಕ್ಯಾಮರಾಗಳ ನಿಗಾ ಹೆಚ್ಚಿಸಿ, ಕೃಪಾಕರ ಸೇನಾನಿ-ಸಂಜಯ್ ಗುಬ್ಬಿ ಸೇರಿದಂತೆ ತಜ್ಞರ ಜೊತೆ ಚರ್ಚಿಸಿ ವೈಜ್ಞಾನಿಕ ಮಾರ್ಗಗಳನ್ನು ರೂಪಿಸಿ ಎನ್ನುವ ಸೂಚನೆಗಳನ್ನು ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಗತ್ಯ ಸಿಬ್ಬಂದಿ, ಅನುದಾನ ಸೇರಿ ಸರ್ಕಾರದಿಂದ ಎಲ್ಲಾ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ವಯಸ್ಸಾದ ಕಾರಣಕ್ಕೆ ಮತ್ತು ಹೊಸ ಯುವ ಹುಲಿಗಳ ದಾಳಿಯಿಂದ ಗಾಯಗೊಂಡ ಹಾಗೂ ಇನ್ನಿತರೆ ಕಾರಣಗಳಿಂದ ಅರಣ್ಯ ಪ್ರದೇಶದಿಂದ ಹೊರಗೆ ಸಂಚರಿಸುತ್ತಿರುವ 15-20 ಹುಲಿಗಳನ್ನು ಡ್ರೋಣ್ ಕ್ಯಾಮರಾ ನೆರವಿನಿಂದ ತಕ್ಷಣ ಹಿಡಿಯಲು ಕ್ರಮ ಜರುಗಿಸಿ ಎನ್ನುವ ಸೂಚನೆ ನೀಡಿದರು. ಈಗಾಗಲೇ ಎಂಟು ಕುಮ್ಕಿ ಆನೆಗಳನ್ನು ಕಾರ್ಯಾಚರಣೆಗೆ ಬಳಸಲಾಗುತ್ತಿದ್ದು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ಮತ್ತು ಸ್ಕ್ವಾಡ್ ಗಳ ಸಂಖ್ಯೆಯನ್ನು ಸಂಘರ್ಷ ಪೀಡಿತ ಅರಣ್ಯ ಪ್ರದೇಶದಲ್ಲಿ ಬಳಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು. ಈ ಬಗ್ಗೆ ಸಮಗ್ರ ಚರ್ಚೆ ನಡೆಸಿದ ಬಳಿಕ ಸಿಎಂ, ಮಾನವ ವನ್ಯ ಜೀವಿ ಸಂಘರ್ಷ ನಿಯಂತ್ರಣಕ್ಕೆ ಈ ಕೆಳಗಿನ ಎಂಟು ಅಂಶದ ಕಾರ್ಯಕ್ರಮಕ್ಕೆ ಅಸ್ತು ಎಂದರು.

## ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಾಜು ಕಾಗೆ ಹೇಳಿಕೆ ಅಸಮಂಜಸ

• ಉದಯವಾಹಿನಿ, ಬೆಂಗಳೂರು

ಉತ್ತರಕರ್ನಾಟಕ ಪ್ರತ್ಯೇಕ ರಾಜ್ಯ ಆಗಬೇಕು ಎಂದು ಶಾಸಕ ರಾಜು ಕಾಗೆ ನೀಡಿರುವ ಹೇಳಿಕೆ ಅಸಮಂಜಸ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿಲ್ಲ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ಕಾಗೆ ಅವರಿಗೆ ಅಸಮಾಧಾನ ಇರಬಹುದು. ಆದರೆ ನಮ್ಮ ಸರ್ಕಾರ ಪ್ರಾದೇಶಿಕ ಅಸಮತೋಲನ ನಿವಾರಿಸಲು ಎಲ್ಲಾ ರೀತಿಯ ಪ್ರಯತ್ನ ನಡೆಸುತ್ತಿದೆ ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲವು ವಾರಗಳ ಹಿಂದಷ್ಟೇ ಕೃಷ್ಣಾ ಮೇಲ್ದಂಡೆ ಮೂರನೇ ಹಂತ ಯೋಜನೆಗೆ 50 ಸಾವಿರ ಕೋಟಿ ಕೊಡುವುದಾಗಿ ಭರವಸೆ ನೀಡಿದ್ದಾರೆ. ಇದು ಮುಖ್ಯಮಂತ್ರಿಯವರಿಗೆ ನಮ್ಮ ಭಾಗದ ಕುರಿತು ಇರುವ ಕಾಳಜಿಯನ್ನು ತೋರಿಸುತ್ತದೆ ಎಂದರು.

ಎಂಟು ಅಂಶದ ಕಾರ್ಯಕ್ರಮಕ್ಕೆ ಅಸ್ತು ಎಂದರು. ಅಖಂಡ ಕರ್ನಾಟಕಕ್ಕಾಗಿ ಉತ್ತರ ಕರ್ನಾಟಕದ ಭಾಗವೂ ಸೇರಿ ಎಲ್ಲಾ ಭಾಗದ ಜನರು ಹೋರಾಟ ಮಾಡಿದ್ದರ ಪರಿಣಾಮ ಕರ್ನಾಟಕ ರಾಜ್ಯ ಜನ್ಮ ತಳೆಯಿತು. ಅವರ ತ್ಯಾಗವನ್ನು ವ್ಯರ್ಥ ಮಾಡಬಾರದು ಎಂದು ಪಾಟೀಲ ತಿಳಿಸಿದರು.

## ಬೆಂಗಳೂರು ರಸ್ತೆಗಳ ಕಸ ಗುಡಿಸಲು 613 ಕೋಟಿ ರೂ. ಬಾಡಿಗೆ?

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವತಿಯಿಂದ ಬೆಂಗಳೂರು ವ್ಯಾಪ್ತಿಯಲ್ಲಿ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಸ್ವಚ್ಛತೆಗಾಗಿ 46 ಯಾಂತ್ರಿಕ ಕಸಗುಡಿಸುವ ಯಂತ್ರಗಳನ್ನು ಏಳು ವರ್ಷಗಳ ಅವಧಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಅದಕ್ಕಾಗಿ ಒಟ್ಟು ರೂ. 613.25 ಕೋಟಿಗಳ ಅಂದಾಜು ಮೊತ್ತವನ್ನು ಮೀಸಲಿಡಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಅಂತರ್ಜಾಲದ ಮಾಹಿತಿಯ ಪ್ರಕಾರ, ಒಂದು ಸಾಮಾನ್ಯ ಕಸ ಗುಡಿಸುವ ಯಂತ್ರದ ಬೆಲೆ 20ರಿಂದ 40 ಲಕ್ಷ ರೂ. ಇದೆ. ದೊಡ್ಡದಾದ ಸ್ವೀಪರ್ ಮೆಷೀನ್‌ಗಳುಳ್ಳ ಲಾರಿಗಳ ಬೆಲೆ 80 ಲಕ್ಷ ರೂ. ಗಳಿಂದ 90 ಲಕ್ಷ ರೂ.ವರೆಗೆ ಇದೆ. ಒಂದು ಕೋಟಿ ರೂ. ಎಂದಿಟ್ಟುಕೊಳ್ಳೋಣ. ಸಂಪುಟದ ನಿರ್ಧಾರದ ಪ್ರಕಾರ, ಈಗ 45 ಮೆಷೀನ್ ಗಳನ್ನು ಕೊಳ್ಳಲು ನಿರ್ಧರಿಸಲಾಗಿದೆ. ಒಂದೊಂದು ಮೆಷೀನ್ ಗೆ 1 ಕೋಟಿ ರೂ. ಎಂದು ಲೆಕ್ಕ ಇಟ್ಟರೂ 45 ಕೋಟಿ ರೂ.ಗಳನ್ನು ಖರ್ಚು ಮಾಡಿದರೆ 45 ಮೆಷೀನ್ ಗಳು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಸ್ವತ್ತಾಗುತ್ತದೆ.





> ರೈತರ ಜೊತೆ ಐದು ಬಾರಿ ಮಾತುಕತೆ ನಡೆಸಿದ್ದೇವೆ. 3,250 ರೂಪಾಯಿ ನೀಡಲು ಮಾಲೀಕರು ಒಪ್ಪಿಕೊಂಡಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ರೈತರು ಪ್ರತಿಭಟನೆ ಮಾಡಲಿ. ಸರ್ಕಾರ ರೈತರ ಪರವಾಗಿ ಕೆಲಸ ಮಾಡುತ್ತಿದೆ. ಅವರ ಸಮಸ್ಯೆಗಳನ್ನು ಆಲಿಸಿ, ಮಾಲೀಕರ ಬಳಿ ಮಾತುಕತೆ ನಡೆಸಲಾಗಿದೆ
>
> -ಆರ್‌ಬಿ ತಿಮ್ಮಾಪುರ್, ಸಚಿವ

**ಟ್ರಾಕ್ಟರ್‌ಗಳು ಧಗ ಧಗ ಮುಧೋಳ ಭುಗಿಲೆದ್ದ ರೈತರ ಆಕ್ರೋಶ**

**ಕಬ್ಬಿಣದ ಕಡಲೆ ಆದ ಕಬ್ಬು: ರಾಜ್ಯ ಸರ್ಕಾರವೇ ನೇರ ಹೊಣೆ**

**ಇಂಚಿಂಚೂ ಕಾರಣ ಬಿಚ್ಚಿಟ್ಟ ಕೇಂದ್ರ ಸರ್ಕಾರ**

# ಸಿಗಲಿಲ್ಲ ಬೆಲೆ ಹೊತ್ತಿದ ಜ್ವಾಲೆ

**ಬೆಂಕಿ ಹಚ್ಚಿ ಆಕ್ರೋಶ**

ಬೆಳಗಾವಿಯಲ್ಲಿ ಧಗಧಗಿಸಿದ್ದ ಕಬ್ಬಿನ ಜ್ವಾಲೆ ತಣ್ಣಗಾಗುತ್ತಿದ್ದಂತೆ ಬಾಗಲಕೋಟೆಯ ಮುಧೋಳದಲ್ಲಿ ಕಬ್ಬು ಕಿಡಿ ಹೊತ್ತಿಕೊಂಡಿತ್ತು. ಸರ್ಕಾರ ನಿಗದಿ ಪಡಿಸಿದ 3300 ರೂಪಾಯಿಗೆ ವಿರೋಧ ವ್ಯಕ್ತಪಡಿಸಿದ್ದ ಮುಧೋಳ ರೈತರು ಕಳೆದೊಂದು ವಾರದಿಂದ ಪ್ರತಿಭಟನೆ ನಡೆಸಿದ್ದರು. ಮುಧೋಳ ಪಟ್ಟಣವನ್ನ ಬಂದ್ ಮಾಡಿದ್ದರು. ಸಕ್ಕರೆ ಕಾರ್ಖಾನೆ ಮಾಲೀಕರೇ ಮಾತುಕತೆ ಬರಬೇಕು. ಪ್ರತಿ ಟನ್ ಕಬ್ಬಿಗೆ 3 ಸಾವಿರದ 500 ರೂಪಾಯಿ ನೀಡಬೇಕು ಅಂತಾ ಪಟ್ಟು ಹಿಡಿದಿದ್ದರು. ಆದರೆ ಆಕ್ರೋಶದ ಕಟ್ಟೆ ಹೊಡೆದಿದೆ. ನಮ್ಮ ಜೊತೆಗೆ ಕಾರ್ಖಾನೆ ಮಾಲೀಕರು ಮಾತುಕತೆಗೆ ಬಂದಿಲ್ಲ ಅಂತಾ ಕೆಲ ರೈತರು ಸಿಟ್ಟಾಗಿದ್ದರು. ಸಮೀರವಾಡಿ ಬಳಿಯ ಗೋದಾವರಿ ಕಾರ್ಖಾನೆ ಮೆರವಣಿಗೆ ಹೊರಟಿದ್ದರು. ಬೆಳಗ್ಗೆಯಿಂದಲೇ ಟ್ರ್ಯಾಕ್ಟರ್ ರ‍್ಯಾಲಿ ಮಾಡಿದ್ದರು. ಸಮೀರವಾಡಿಯ ಗೋಧಾವರಿ ಕಾರ್ಖಾನೆಗೆ ರೈತರು ಮುತ್ತಿಗೆ ಹಾಕಲು ಹೊರಟಿದ್ದರು. ಆಗ ಕಾರ್ಖಾನೆಗೆ ಕಬ್ಬು ಸಾಗಿಸುತ್ತಿದ್ದ ಟ್ರ್ಯಾಕ್ಟರ್‌ನ ಕಂಡು ಅದನ್ನ ನೆಲಕ್ಕುರುಳಿಸಿ ಬೆಂಕಿ ಹಚ್ಚಿದ್ದಾರೆ.



**50ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿಗೆ ಬೆಂಕಿ**


• ಉದಯವಾಹಿನಿ, ಬಾಗಲಕೋಟೆ

ರಾಜ್ಯದಲ್ಲಿ ಕಬ್ಬು ಬೆಳೆಗಾರರ ಹೋರಾಟ ತೀವ್ರಗೊಂಡಿದೆ. ಬಾಗಲಕೋಟೆಯ ಮುಧೋಳದ ಮಾಹಾಲಿಂಗಪುರ ಪಟ್ಟಣ ಬಳಿಯ ಸಂಗಾನಟ್ಟಿ ಕ್ರಾಸ್ ಬಳಿ ಕಬ್ಬಿನ ಟ್ರ್ಯಾಕ್ಟರ್ ಟ್ರೇಲರ್ ಪಲ್ಟಿ ಮಾಡಿ ಕಬ್ಬಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. 50ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ್ದು, ಸಾವಿರಾರು ಟನ್ ಕಬ್ಬು ಬೆಳೆ ಭಸ್ಮವಾಗಿದೆ. ಆರಂಭದಲ್ಲಿ ನಿಪ್ಪಾಣಿ- ಮಹಾಲಿಂಗಪುರ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆಗಿತ್ತು. ಪ್ರತಿ ಟನ್ ಕಬ್ಬಿಗೆ 3,500 ರೂ. ಕೊಡಬೇಕೆಂದು ಆಗ್ರಹಿಸಿದ್ದ ರೈತರು, ಸೈದಾಪುರ ಸಕ್ಕರೆ ಕಾರ್ಖಾನೆಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಆ ಬಳಿಕ ತಾಳ್ಮೆ ಕಳೆದುಕೊಂಡ ರೈತರು ಮಹಲಿಂಗಪುರ-ನಿಪ್ಪಾಣಿ ರಸ್ತೆಯಲ್ಲಿರುವ ಸೈದಾಪುರ ಸಕ್ಕರೆ ಕಾರ್ಖಾನೆ ಅವರಣದಲ್ಲಿನ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. 50ಕ್ಕೂ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿ ಕಣ್ಣೀರಿಟ್ಟಿದ್ದಾರೆ. ಇದರಿಂದ ಸಾವಿರಾರು ಟನ್ ಕಬ್ಬು ಸುಟ್ಟು ಭಸ್ಮವಾಗಿದೆ. ಸ್ಥಳದಲ್ಲಿ 200ಕ್ಕೂ ಅಧಿಕ ಟ್ರ್ಯಾಕ್ಟರ್ ಗಳನ್ನ ನಿಲ್ಲಿಸಲಾಗಿತ್ತು.

ಇನ್ನೂ ಕಬ್ಬಿಗೆ ಬೆಂಬಲ ಬೆಲೆ ಹೆಚ್ಚಿಸುವಂತೆ ಆಗ್ರಹಿಸಿ ಬೆಳಗಾವಿಯಲ್ಲಿ ರೈತರ ಪ್ರತಿಭಟನೆಯ ವೇಳೆ ಕಲ್ಲು ತೂರಿದ ಆರು ಆರೋಪಿಗಳನ್ನು ಬಂಧಿಸಲಾಗಿದೆ. ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಟೋಲ್ ಬಳಿ ನವೆಂಬರ್ 7ರಂದು ಘಟನೆ ನಡೆದಿತ್ತು. ರೈತರ ಹೋರಾಟದಲ್ಲಿ ಕಿಡಿಗೇಡಿಗಳು ಸೇರಿದ್ದಾರೆ ಎಂದು ಮಾಹಿತಿ ಸಿಕ್ಕಿತ್ತು. ಕೆಲವರನ್ನು ವಶಕ್ಕೆ ಪಡೆಯುತ್ತಿದ್ದ ವೇಳೆ ಕಲ್ಲು ತೂರಾಟ ಆಗಿತ್ತು. ಈ ವೇಳೆ ಡಿವೈಎಸ್‌ಪಿ ಮಹಾಂತೇಶ್ ಸಜ್ಜನ್ ಸೇರಿ 12 ಪೊಲೀಸ್ ಸಿಬ್ಬಂದಿಗೆ ಗಾಯಗೊಂಡಿದ್ರು.ಆರೋಪಿಗಳ ವಿರುದ್ಧ ದೊಂಬಿ, ಗುಂಪು ಗಲಭೆ, ಮಾರಣಾಂತಿಕ ಹಲ್ಲೆ ಪ್ರಕರಣದಡಿ ಕೇಸ್ ದಾಖಲಾಗಿದೆ. ಇತ್ತ, ನ.6ರಂದು ಬಿಡದಿ ಟೌನ್‌ಶಿಪ್ ವಿರುದ್ಧ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದ 9 ರೈತರ ಮೇಲೆ ರಾಮನಗರ ಟೌನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ.

**ಇದು ಕೆಲ ಕಿಡಿಗೇಡಿಗಳು ಮಾಡಿರುವ ಕೆಲಸ:** ಘಟನೆ ಬಗ್ಗೆ ಸಕ್ಕರೆ ಸಚಿವ ಶಿವಾನಂದ್ ಪಾಟೀಲ್ ಮಾತನಾಡಿದ್ದು, ಇದು ರೈತರು ಮಾಡಿರುವ ಕೆಲಸ ಅಲ್ಲ. ಕೆಲ ಕಿಡಿಗೇಡಿಗಳು ಮಾಡಿರುವ ಕೆಲಸ. ಜಿಲ್ಲಾ ಸಚಿವರು ಮೂರು ದಿನದಿಂದ ಮುಧೋಳದಲ್ಲಿದ್ದಾರೆ. ರೈತರು-ಕಾರ್ಖಾನೆಗಳ ಜೊತೆ ಮಾತುಕತೆ ಮಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಎಲ್ಲೂ ಕೂಡ ರೈತರು ಹೀಗೆ ಮಾಡಿಲ್ಲ, ಹಾಗಾಗಿ ಇದು ರೈತರ ಹೆಸರಲ್ಲಿ ಕಿಡಿಗೇಡಿಗಳು ಮಾಡಿದ್ದು ಎಂದಿದ್ದಾರೆ.

**ಸಾವಿರಾರು ಟನ್ ಕಬ್ಬು ಭಸ್ಮ!**



**ಡಿಸಿಯಿಂದ ಸಿಎಂಗೆ ಮಾಹಿತಿ**

ಇನ್ನು, ಕಬ್ಬು ಬೆಳೆಗಾರರ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗಿ, ಪರಿಸ್ಥಿತಿ ಕೈಮೀರುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಗಲಕೋಟೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ.ಆದಷ್ಟು ಶೀಘ್ರ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವಂತೆ ಸಿಎಂ ಸಿದ್ದರಾಮಯ್ಯ ಡಿಸಿ ಹಾಗೂ ಎಸ್‌ಪಿ ಅವರಿಗೆ ಸೂಚನೆ ನೀಡಿದ್ದಾರೆ. ಇನ್ನು, ಕಬ್ಬು ಬೆಳೆಗಾರರ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಲು ಸಚಿವ ತಿಮ್ಮಾಪುರ ಅವರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ.

**ರೈತರ ಆಕ್ರೋಶ**

ರೈತರು ನೇರವಾಗಿ ಸಮೀರವಾಡಿ ಕಾರ್ಖಾನೆಗೆ ನುಗ್ಗಿದ್ದಾರೆ. ಕಾರ್ಖಾನೆ ಆವರಣದಲ್ಲಿದ್ದ ಕಬ್ಬು ತುಂಬಿದ ಟ್ರಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ್ದಾರೆ. ಇಡೀ ಪ್ರದೇಶ ಬೆಂಕಿಯ ಜ್ವಾಲೆಯಲ್ಲಿ ಸುಟ್ಟ ಕರಕರಲಾಗಿದೆ. ರೈತರು 3,300 ರೂಪಾಯಿ ಬೆಂಬಲ ಬೆಲ ನೀಡುವಂತೆ ಪಟ್ಟು ಹಿಡಿದಿದ್ದಾರೆ. ಇತ್ತ ಕಾರ್ಖಾನೆ ಮಾಲೀಕರು 3,250 ರೂಪಾಯಿ ನೀಡುವುದಾಗಿ ಭರವಸೆ ನೀಡಿದೆ. ಇನ್ನುಳಿದ 50 ರೂಪಾಯಿ ತಡವಾಗಿ ನೀಡುವುದಾಗಿ ಭರವಸೆ ನೀಡಿದ್ದರೆ. ಆದರೆ 3,300 ರೂಪಾಯಿ ಒಟ್ಟು ಮೊತ್ತ ನೀಡುವಂತೆ ರೈತರು ಪಟ್ಟು ಹಿಡಿದು ಪ್ರತಿಭಟನೆ ತೀವ್ರಗೊಳಿಸಿದ್ದಾರೆ.

## ಬಿಎಸ್ ಯಡಿಯೂರಪ್ಪಗೆ ಕರ್ನಾಟಕ ಹೈಕೋರ್ಟ್ ಶಾಕ್!

### ವಿಚಾರಣಾಧೀನ ನ್ಯಾಯಾಲಯ ಸಂಜ್ಞೇ ಪರಿಗಣಿಸಿರುವುದು ಮತ್ತು ಸಮನ್ಸ್ ಜಾರಿ ಸರಿ ಎಂದ ಹೈಕೋರ್ಟ್


• ಉದಯವಾಹಿನಿ, ಬೆಂಗಳೂರು

ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರಿಗೆ ಕರ್ನಾಟಕ ಹೈಕೋರ್ಟ್ ಶಾಕ್ ಕೊಟ್ಟಿದೆ. ವಿಚಾರಣಾಧೀನ ನ್ಯಾಯಾಲಯ ಸಂಜ್ಞೇ ಪರಿಗಣಿಸಿರುವುದು ಮತ್ತು ಸಮನ್ಸ್ ಜಾರಿ ಮಾಡಿರುವುದನ್ನು ಹೈಕೋರ್ಟ್ ಎತ್ತಿ ಹಿಡಿದೆ.


ಪೋಕ್ಸೋ ಪ್ರಕರಣದಲ್ಲಿ ಸಂಜ್ಞೇ ಪರಿಗಣಿಸಿರುವುದನ್ನು ರದ್ದುಪಡಿಸುವಂತೆ ಕೋರಿ ಬಿಎಸ್ ಯಡಿಯೂರಪ್ಪ ಮತ್ತು ಇತರರು ಸಲ್ಲಿಸಿರುವ ಅರ್ಜಿಯನ್ನು ಕೆಲ ತಿಂಗಳುಗಳಿಂದ ಕರ್ನಾಟಕ ಹೈಕೋರ್ಟ್ ವಿಚಾರಣೆ ನಡೆಸಿತ್ತು. ಗುರುವಾರ ನ್ಯಾಯಮೂರ್ತಿ ಎಂ ಐ ಅರುಣ್ ಅವರ ಏಕಸದಸ್ಯ ಪೀಠವು ಆದೇಶ ನೀಡಿದೆ. ಇದು ಯಡಿಯೂರಪ್ಪ ಅವರಿಗೆ ಭಾರೀ ಹಿನ್ನಡೆ ಉಂಟು ಮಾಡಿದೆ. ಸಿಐಡಿ ವಿಚಾರಣೆಯು ಮುಂದುವರೆಯಲಿದೆ.

**ವಿಚಾರಣೆಗೆ ಅಗತ್ಯವಿಲ್ಲದಿದ್ದರೆ ಒತ್ತಾಯಿಸಬಾರದು**

ವಿಚಾರಣಾ ಹಂತದಲ್ಲಿ ಯಡಿಯೂರಪ್ಪ ಅವರ ಅಗತ್ಯವಿಲ್ಲದಿದ್ದರೆ ವಿಚಾರಣೆಗೆ ಹಾಜರಾಗುವಂತೆ ಒತ್ತಾಯಿಸಬಾರದು. ಉಪಸ್ಥಿತಿ ಅಗತ್ಯವಿಲ್ಲದಿದ್ದರೆ ಅವರ ಪರವಾಗಿ ಸಲ್ಲಿಕೆ ಮಾಡುವ ವಿನಾಯಿತಿ ಮನವಿಯನ್ನು ವಿಚಾರಣಾಧೀನ ನ್ಯಾಯಾಲಯ ಪುರಸ್ಕರಿಸಬೇಕು ಎಂದು ನ್ಯಾಯಾಲಯ ಹೇಳಿದೆ ಎಂದು ಬಾರ್ ಅಂಡ್ ಬೆಂಚ್ ವರದಿ ಮಾಡಿದೆ.




**ಸಮನ್ಸ್ ಜಾರಿ ಎತ್ತಿ ಹಿಡಿದ ನ್ಯಾಯಾಲಯ**



ಯಡಿಯೂರಪ್ಪ ಪರ ಹಿರಿಯ ವಕೀಲ ಸಿವಿ ನಾಗೇಶ್ ವಾದ ಮಂಡನೆ ಮಾಡಿದ್ದರು. ಅರ್ಜಿದಾರರ ಪರ ವಕೀಲರ ವಾದ ಮತ್ತು ಸಿಐಡಿ ತನಿಖಾಧಿಕಾರಿ ಪರ ವಿಶೇಷ ಅಭಿಯೋಜಕರ ಪ್ರತಿವಾದ ಆಲಿಸಿ ಕೋರ್ಟ್ ಆದೇಶ ನೀಡಿದೆ.

**ವಿಚಾರಣಾಧೀನ ನ್ಯಾಯಾಲಯಕ್ಕೆ ಸೂಚನೆ**

ಪ್ರಭಾವಕ್ಕೆ ಒಳಗಾಗದೇ ತನ್ನ ಮುಂದೆ ಇರುವ ಸಾಕ್ಷಿಗಳನ್ನು ಆಧರಿಸಿ ವಿಚಾರಣಾಧೀನ ನ್ಯಾಯಾಲಯ ಪ್ರಕರಣ ನಿರ್ಧರಿಸಬೇಕು. ಪ್ರಮುಖವಾಗಿ ಹೈಕೋರ್ಟ್ ಮತ್ತು ಸಕ್ಷಮ ನ್ಯಾಯಾಲಯ ಮಾಡಿರುವ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳ ಪ್ರಭಾವಕ್ಕೆ ಒಳಗಾಗದೇ ಸಾಕ್ಷಿಯನ್ನು ಪರಿಗಣಿಸಬೇಕು ಎಂದು ಹೇಳಿದರು. ಆರೋಪ ಮುಕ್ತಿ ಸೇರಿಯೂ ಯಾವುದೇ ಅರ್ಜಿಗಳನ್ನು ವಿಚಾರಣಾಧೀನ ನ್ಯಾಯಾಲಯದ ಮುಂದೆ ಸಲ್ಲಿಸಲು ಅರ್ಜಿದಾರರು ಸ್ವತಂತ್ರರಾಗಿದ್ದಾರೆ. ಈ ನೆಲೆಯಲ್ಲಿ ಅರ್ಜಿಯನ್ನು ಇತ್ಯರ್ಥಪಡಿಸಲಾಗಿದೆ ಎಂದ ಹೈಕೋರ್ಟ್ ತಿಳಿಸಿದೆ.

**ಯಡಿಯೂರಪ್ಪ ವಿರುದ್ಧ ಏನಿದು ಪ್ರಕರಣ? ಹಿನ್ನೆಲೆ ಏನು?:** 17 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆದಿದ್ದರೂ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ, ಆಕೆಯ ತಾಯಿ ಬಿಎಸ್ ಯಡಿಯೂರಪ್ಪ ಅವರ ಮನೆಗೆ ತೆರಳಿದ್ದರು. ಆಗ ಯಡಿಯೂರಪ್ಪ ಬಾಲಕಿಯೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಬೆಂಗಳೂರಿನ ಸದಾಶಿವ ನಗರ ಠಾಣೆಯಲ್ಲಿ ಬಿಎಸ್ ಯಡಿಯೂರಪ್ಪ ವಿರುದ್ಧ 2024 ಮಾರ್ಚ್‌ನಲ್ಲಿ ಪೋಕ್ಸೋ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಪ್ರಕರಣ ದಾಖಲಾಗಿತ್ತು. ಮಗಳ ಮೇಲೆ ಅತ್ಯಾಚಾರ ನಡೆದಿದೆ ಎಂದು ದೂರಿದ್ದರು. ಆದರೆ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದರಿಂದ ಬೇಸರಗೊಂಡ ಆ ಮಹಿಳೆ, ತಮ್ಮ ಮಗಳೊಂದಿಗೆ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿದ್ದರು.

ಆ ಸಂದರ್ಭದಲ್ಲಿ, ಯಡಿಯೂರಪ್ಪ ಅವರು ಬಾಲಕಿಯೊಂದಿಗೆ ಸರಿಯಾಗಿ ನಡೆದುಕೊಂಡಿಲ್ಲ ಎಂದು ಮಹಿಳೆ ಆರೋಪಿಸಿದ್ದಾರೆ. ಸಿಐಡಿ ಅಧಿಕಾರಿಗಳು ಯಡಿಯೂರಪ್ಪಗೆ ನೋಟಿಸ್ ಕೊಟ್ಟು ವಿಚಾರಣೆಗೆ ಕರೆಸಿ ಹೇಳಿಕೆಗಳನ್ನು ಪಡೆದಿದ್ದರು. ಈ ನಡುವೆ, ಕೇಸ್ ರದ್ದು ಮತ್ತು ನಿರೀಕ್ಷಣಾ ಜಾಮೀನು ಮಂಜೂರು ಮಾಡುವಂತೆ ಕೋರಿ ಯಡಿಯೂರಪ್ಪ ಹೈಕೋರ್ಟ್‌ಗೆ 2 ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಕೆ ಮಾಡಿದ್ದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,862/Gram24ct ₹11,790/Gram22ct ಬೆಳ್ಳಿ: ₹173.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಹಿಂದುಧರ್ಮದ ವೈಶಿಷ್ಟ್ಯ

ಬಹುತೇಕ ಧರ್ಮಗಳಿಗೆ ಏಕ ಗುರು ಏಕ ಗ್ರಂಥ ಏಕ ದೇವ. ಹಿಂದುಧರ್ಮ ವಿಭಿನ್ನ. ಅನೇಕ ಗುರು ಅನೇಕ ಗ್ರಂಥ ಹಲವು ದೇವರು. ಹಲವು ಬಣ್ಣ ಗಾತ್ರ ರುಚಿ ವಾಸನೆಯ ತರು ಲತೆ ಹೂಗಳಿಂದ ಕಂಗೊಳಿಪ ಉದ್ಯಾನದಂತೆ. ವಿವಿಧತೆಯೊಂದಿಗೆ ಏಕತೆ! ಒಬ್ಬ ಗುರುವಿಲ್ಲದ ಧರ್ಮ ತಾಯಿಯಿಲ್ಲದ ಮಗು ಎಂದನೊಬ್ಬ. ಒಬ್ಬ ತಾಯಿ ಎಲ್ಲಾ ಮಕ್ಕಳನ್ನೂ ಹೆರಬೇಕೆಂದಿಲ್ಲ. ಅಂತಿಮವಾಗಿ ಅರಿವೇ ಗುರು. ಧರ್ಮಪ್ರತಿಪಾದನೆ ಮುಖ್ಯ, ಬಾಕಿ ಗೌಣ. ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ.
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ. ಅಜ್ಞಾನಕತ್ತಲೆಯಿಂದ ಕಾಣದಾದವನಿಗೆ ಜ್ಞಾನಾಂಜನ ಕಡ್ಡಿಯಿಂದ ಕಣ್ತೆರೆಸಿದ ಗುರುವಿಗೆ ನಮಸ್ಕಾರ ಎಂಬ ಮಾತು ಅರಿವು ಮೂಡಿಸುವ ಪ್ರತಿಯೊಬ್ಬನನ್ನೂ ಗುರುವೆಂದು ಒಪ್ಪುವುದು. ಸಾರಾಯದ ನಿಜವ ತೋರುವ ಗುರುವು ತಾನಾರಾದಡೇನು ಎಂದ ಸರ್ವಜ್ಞ. ಆದ್ದರಿಂದಲೇ ವ್ಯಾಸ ಶಂಕರ ರಾಮಾನುಜ ಮಧ್ವ ಬಸವ ಅಲ್ಲಮ ನಿಜಗುಣ ಶಿವಯೋಗಿ ಸಿದ್ಧಾರೂಢರೆಲ್ಲರನ್ನೂ ಗುರು ಎನ್ನುತ್ತೇವೆ. ಒಂದಕ್ಷರ ಕಲಿಸಿದಾತ ಲೌಕಿಕ ಶಿಕ್ಷಕನೂ ಗುರು ಎನ್ನುವ ವಿಶಾಲತೆ ಹಿಂದು ಸಂಸ್ಕೃತಿ. ಸಗುಣ ಸಾಕಾರ ಬಹುದೇವೋಪಾಸನೆ, ನಿರ್ಗುಣ ನಿರಾಕಾರ ಏಕತತ್ತ್ವೋಪಾಸನೆಯೂ ಇಲ್ಲಿದೆ. ತತ್ತ್ವಾನುಸಂಧಾನದ ಜೊತೆಗೆ ಜಪ ತಪ ಧ್ಯಾನ ಭಜನೆ ಯೋಗಗಳಿವೆ. ಬಗೆ ಬಗೆಯ ಜನರಿಗೆ ಬಗೆ ಬಗೆಯ ಸಾಧನೆ. ಇದು ಪ್ರಾಚೀನ ಹಾಗೂ ನಿತ್ಯ ನವೀನ. ಹೊಸ ಹೊಸ ವಿಶ್ಲೇಷಣೆಗೆ ಇಲ್ಲಿದೆ ಅವಕಾಶ. ಇಸ್ಲಾಂ ಕ್ರೈಸ್ತದಲ್ಲಿಲ್ಲ. ಇಂದಿಗೂ ಅದೇ ಕುರಾನ್ ಅದೇ ಬೈಬಲ್. ಇದೇ ಹಿಂದುಧರ್ಮದ ವೈಶಿಷ್ಟ್ಯ!

# ರೂ.10 ಕೋಟಿ ಮೌಲ್ಯದ ರಸ್ತೆ ಒತ್ತುವರಿ ತೆರವು

## ರಸ್ತೆ ಒತ್ತುವರಿದಾರರ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು

• ಉದಯವಾಹಿನಿ, ಬೆಂಗಳೂರು


ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯ ಉತ್ತರಹಳ್ಳಿ ಉಪ ವಿಭಾಗದ ಅರೇಹಳ್ಳಿ ಗ್ರಾಮದಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಶೆಡ್ ಅನ್ನು ಲೋಕಾಯುಕ್ತದ ನಿರ್ದೇಶನದಂತೆ ಆಯುಕ್ತ ಕೆ.ಎನ್. ರಮೇಶ್ ನೇತೃತ್ವದಲ್ಲಿ ತೆರವುಗೊಳಿಸಲಾಗಿದೆ.

ರೂ.10 ಕೋಟಿ ಮೌಲ್ಯದ 6 ಸಾವಿರ ಚದರ ಅಡಿ ಜಾಗವನ್ನು ನಗರ ಪಾಲಿಕೆ ಸುಪರ್ದಿಗೆ ಪಡೆಯಲಾಗಿದೆ. ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯ ಸರ್ವೆ ಸಂಖ್ಯೆ 2, 6/2 ಹಾಗೂ 4ರಲ್ಲಿ 2 ಮತ್ತು 3ನೇ ಮುಖ್ಯರಸ್ತೆ ಒತ್ತುವರಿ ಮಾಡಿಕೊಂಡು ಶೆಡ್ ನಿರ್ಮಿಸಿದ್ದ ಬಗ್ಗೆ ಸಾರ್ವಜನಿಕರು ಲೋಕಾಯುಕ್ತರಿಗೆ ದೂರು ನೀಡಿದ್ದರು ಎಂದು ಆಯುಕ್ತರು ತಿಳಿಸಿದ್ದಾರೆ.

ರಸ್ತೆ ಒತ್ತುವರಿದಾರರ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್ ಉಪಸ್ಥಿತರಿದ್ದರು.

ಇಬ್ಲೂರ್ ಜಂಕ್ಷನ್‌ನಿಂದ ಕೆ.ಆರ್. ಪುರದವರಗಿನ ಹೊರವರ್ತುಲ ರಸ್ತೆ ಅಭಿವೃದ್ಧಿ, ಸುಧಾರಣೆ, ನಿರ್ವಹಣೆಗೆ ಸಂಬಂಧಿಸಿದಂತೆ ಸಿಎಸ್‌ಆರ್ ಸಹಭಾಗಿತ್ವದ ಬಗ್ಗೆ ಲೋಖಂಡೆ ಸ್ನೇಹಲ್ ಸುಧಾಕರ್ ಅಧ್ಯಕ್ಷತೆಯಲ್ಲಿ ಚರ್ಚಿಸಲಾಯಿತು.

ಪಾದಚಾರಿ ಮಾರ್ಗಗಳ ನಿರ್ವಹಣೆ, ಹಸಿರು ಸಸಿಗಳ ನೆಡುವುದು, ಗೋಡೆಯಲ್ಲಿ ಚಿತ್ರಕಲೆ ರಚಿಸುವುದು, ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಕುರಿತು ಚರ್ಚಿಸಲಾಯಿತು. ಏಳು ಪ್ರಮುಖ ಜಂಕ್ಷನ್‌ಗಳ ಸುಧಾರಣೆ ಹಾಗೂ ಮೇಲೇತುವೆ ಅಭಿವೃದ್ಧಿಗೆ ಸಿಎಸ್‌ಆರ್ ನಿಧಿ ಬಳಸಲು ತಿಳಿಸಲಾಯಿತು.



ಉದಯವಾಹಿನಿ ಚಿತ್ರ

### ಒಆರ್‌ಸಿಸಿಎ ಕಂಪನಿಗಳಿಗೆ ಮನವಿ

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ಸಮರ್ಪಕ ಬಳಕೆಗಾಗಿ ಹೊರ ವರ್ತುಲ ರಸ್ತೆ ಕಂಪನಿಗಳ ಸಂಘಟನೆ ಒಆರ್‌ಆರ್‌ಸಿಎ ನಗರ ಪಾಲಿಕೆ ಜೊತೆಗೆ ಕೈಜೋಡಿಸಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆಯ ಅಭಿವೃದ್ಧಿಯ ಹೆಚ್ಚುವರಿ ಆಯುಕ್ತರಾದ ಲೋಖಂಡೆ ಸ್ನೇಹಲ್ ಸುಧಾಕರ್ ಕೋರಿದರು.

### ಪಾರ್ಕಿಂಗ್ ಸ್ಥಳ ಗುರುತಿಸಿ: ಮಹೇಶ್ವರ ರಾವ್

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಿ ಆದಾಯ ಬರುವಂತೆ ಮಾಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ವರ್ಚುವಲ್ ಮೂಲಕ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಎಲ್‌ಇಡಿ ದೀಪಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದರು. ಪ್ರಮುಖ ರಸ್ತೆ ವಾರ್ಡ್ ರಸ್ತೆಗಳಲ್ಲಿ ಬಾಕಿಯಿರುವ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಬೇಕು. ಜಲಮಂಡಳಿ ಕಾಮಗಾರಿ ಪೂರ್ಣಗೊಳಿಸಿರುವ ಕಡೆ ರಸ್ತೆ ಕತ್ತರಿಸಿದ ಭಾಗವನ್ನು ದುರಸ್ತಿಪಡಿಸಬೇಕು ಎಂದು ಹೇಳಿದರು.

ವಾಕಲೂರು ಸಂಸ್ಥೆಯಿಂದ ಅರುಣ್ ಪೈ, ಇಂಡಿಯಾ ರೈಸಿಂಗ್ ಸಂಸ್ಥೆಯಿಂದ ಅನಿರುದ್ಧ ಅಭ್ಯಂಕರ್, ಇಂಟೆಲ್ ಕಂಪನಿಯ ಸ್ಯಾಮ್ಯುಯಲ್ ಹಾಗೂ ಕೆಪಿಎಂಜಿ ಕಂಪನಿಯ ವಿಜಯ್ ಪಾಲ್ಗೊಂಡಿದ್ದರು.

## ಮೇಕೆದಾಟು ಕಾನೂನು ಹೋರಾಟದಲ್ಲಿ ನಮಗೆ ನ್ಯಾಯ ಸಿಕ್ಕಂತಾಗಿದೆ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಮೇಕೆದಾಟು ವಿರುದ್ಧದ ತಮಿಳುನಾಡು ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿರುವುದು, ನ್ಯಾಯ ಪೀಠದಿಂದ ನಮಗೆ ನ್ಯಾಯ ಸಿಕ್ಕಂತಾಗಿದೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಡಿ.ಕೆ. ಶಿವಕುಮಾರ್ ತಿಳಿಸಿದರು.ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೇಕೆದಾಟು, ನಮ್ಮ ನೀರು, ನಮ್ಮ ಹಕ್ಕು' ಯೋಜನೆ. ನಾವು ತಮಿಳುನಾಡಿಗೆ ಯಾವುದೇ ರೀತಿಯಲ್ಲೂ ಅಡ್ಡಿ ಮಾಡುತ್ತಿಲ್ಲ. ಈ ಯೋಜನೆಯಿಂದ ತಮಿಳುನಾಡಿಗೇ ಹೆಚ್ಚು ಲಾಭವಾಗಲಿದೆ. ರಾಜ್ಯದ ಜನರ ಪ್ರಾರ್ಥನೆ, ಜನರ ಕಷ್ಟಕ್ಕೆ ನ್ಯಾಯಾಲಯ ಸ್ಪಂದಿಸಿದೆ ಎಂದು ತಿಳಿಸಿದರು.

ನ್ಯಾಯಾಲಯಗಳ ತೀರ್ಮಾನದಂತೆ ತಮಿಳುನಾಡು ತನ್ನ ಪಾಲಿನ ನೀರನ್ನು ಪಡೆಯಲಿದೆ. ಹೀಗಾಗಿ ನಾವು ಈ ಯೋಜನೆ ಮುಂದುವರಿಸಿಕೊಂಡು ಹೋಗುತ್ತೇವೆ. ಈ ಯೋಜನೆಯನ್ನು ನಮ್ಮ ನೆಲದಲ್ಲಿ, ನಮ್ಮ ಹಣದಲ್ಲಿ ಮಾಡಲಾಗುತ್ತಿದೆ. ನೀರಿನ ಕೊರತೆ ಉಂಟಾದಾಗ ತಮಿಳುನಾಡಿಗೆ ನೀರು ಹರಿಸಲು ಈ ಸಮತೋಲಿತ ಅಣೆಕಟ್ಟೆ ನೆರವಾಗಲಿದೆ. ಇದು ಬೆಂಗಳೂರಿಗರ ಗೆಲುವು. ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಂದ ಬರುವ ಜನರಿಗೂ ನೀರು ಒದಗಿಸಲಾಗುವುದು. ಈಗಲಾದರೂ ಯೋಜನೆಗೆ ಸಹಕಾರ ನೀಡಿ ಎಂದು ತಮಿಳುನಾಡಿಗೆ ಮನವಿ ಮಾಡುತ್ತೇನೆ' ಎಂದರು.



## ಸತ್ವಗ್ರೂಪ್‌ನ ಪಾಲುದಾರ ಬಂಧನ

• ಉದಯವಾಹಿನಿ, ಬೆಂಗಳೂರು

ಬಂಡಾಪುರದ ಗ್ರಾಮದಲ್ಲಿ 10 ಎಕರೆ ಜಮೀನು ಕಬಳಿಕೆಗೆ ನಕಲಿ ದಾಖಲೆ ಸೃಷ್ಟಿಸಿದ್ದ ಆರೋಪದಡಿ ಸತ್ವಗ್ರೂಪ್‌ನ ಪಾಲುದಾರ ಅಶ್ವಿನ್ ಸಂಚೆಟಿ ಅವರನ್ನು ಅವಲಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಉಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಮೂಲ ಮಾಲೀಕರಾದ ರಾಧಾ ಅವರ ಬಳಿ ಜಿಪಿಎ ಪಡೆದಿರುವ ವೆಂಕಟಪ್ಪ ಅವರು ಅವಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಆ ದೂರು ಆಧರಿಸಿ ಆರೋಪಿಗಳಾದ ಅಶ್ವಿನ್ ಸಂಚೆಟಿ, ಬಸವೇಶ್ವರ ನಗರದ ನಿವಾಸಿ ರಾಧಾ, ಲೋಕ ಸುಂದರ್, ಧ್ರುವ ಕುಮಾರ್, ಮೀನಾಕ್ಷಿ, ಲಾವಣ್ಯ, ಡಾಲರ್ಸ್ ಕಾಲೊನಿಯ ನಿವಾಸಿ ರಾಧಾ, ವೆಂಟಕರಾಮ ನಾಯ್ಡು ಕೋಲ, ಶಿವಶ್ರೀ ಮೀಡಿಯಾ ಪ್ರೈವೆಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಶಿವರುದ್ರಪ್ಪ, ನಿರ್ದೇಶಕ ಶ್ರೀನಿವಾಸ್ ಆರ್. ಅಲಕಟ್ಟಿ, ಲಿಂಗರಾಜ್, ಮಧುಸೂದನ್ ಮತ್ತು ಮುನೇಂದ್ರ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. 10 ಎಕರೆ ಜಮೀನನ್ನು ಕಬಳಿಸಲು ನಕಲಿ ದಾಖಲೆ ಸೃಷ್ಟಿಸಿದ್ದಾರೆ ಎಂದು ವೆಂಕಟಪ್ಪ ಎಂಬುವವರು ಅ.22ರಂದು ದೂರು ನೀಡಿದ್ದರು. ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

## ಫ್ಲೈಓವರ್ ಕಂಬದಲ್ಲಿ ವ್ಯಕ್ತಿಯ ವಾಸ್ತವ್ಯ, ಸಿಟಿ ಜನ ಶಾಕ್!

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಜಾಲಹಳ್ಳಿ ಕ್ರಾಸ್‌ನಲ್ಲಿ ವಿಲಕ್ಷಣ ದೃಶ್ಯವೊಂದು ಇತ್ತೀಚೆಗೆ ಕಂಡುಬಂದಿದ್ದು, ಯಾರದೋ ವಿಡಿಯೋದಲ್ಲಿ ದಾಖಲಾಗಿ ವೈರಲ್ ಆಗಿದೆ.

ಜಾಲಹಳ್ಳಿಯಲ್ಲಿ ಹಾದುಹೋಗಿರುವ ತುಮಕೂರು ರಸ್ತೆಯ ದೊಡ್ಡ ಫ್ಲೈಓವರ್‌ನ ಕಂಬ ಹಾಗೂ ಮೇಲಿನ ರಸ್ತೆಯ ನಡುವಿನ ಕಿರಿದಾದ ಜಾಗದಲ್ಲಿ ವ್ಯಕ್ತಿಯೊಬ್ಬ ಆರಾಮಾಗಿ ಮಲಗಿದ್ದುದು, ಎದ್ದು ಕುಳಿತು ಜನಗಳನ್ನು ನೋಡುತ್ತಿರುವುದು ಕಂಡುಬಂದಿದೆ.

ಈ ವಿಲಕ್ಷಣ ದೃಶ್ಯ ತಕ್ಷಣವೇ ದೊಡ್ಡ ಜನಸಮೂಹವನ್ನು ಸೆಳೆದಿದೆ. ಜನ ಇದನ್ನು ನಂಬಲಾಗದವರಂತೆ ಸುತ್ತಲೂ ಜಮಾಯಿಸಿ ವೀಕ್ಷಿಸಿದ್ದಾರೆ. ಆ ವ್ಯಕ್ತಿ ಅಷ್ಟೊಂದು ಎತ್ತರದ ಜಾಗಕ್ಕೆ ಯಾವುದೇ ಏಣಿಯಂಥ ಆಧಾರವಲ್ಲದೆ ಹೇಗೆ ಹತ್ತಿದ, ಅಲ್ಲಿ ಹೇಗೆ ಇದ್ದಾನೆ ಎಂಬುದು ಆಶ್ಚರ್ಯಕರವಾಗಿದೆ. ತನ್ನ ಸುತ್ತಮುತ್ತ ನಡೆಯುತ್ತಿರುವ ಯಾವುದೇ ಗದ್ದಲ ಆತನನ್ನು ಚಿಂತೆಗೀಡು ಮಾಡಿಲ್ಲ.

Xನಲ್ಲಿ ಹಂಚಿಕೊಳ್ಳಲಾದ ಒಂದು ವಿಡಿಯೋದಲ್ಲಿ, ತನ್ನ ಸುತ್ತಲಿನ ಗದ್ದಲದ ಬಗ್ಗೆ ಯಾವುದೇ ರೀತಿಯಲ್ಲಿ ತಲೆಕೆಡಿಸಿಕಳ್ಳದ ಆ ವ್ಯಕ್ತಿ ಆ ಇಕ್ಕಟ್ಟಾದ ಜಾಗದೊಳಗೆ ಮಲಗಿರುವುದು ಕಂಡುಬಂದಿದೆ. ಸೇತುವೆಯ ಸ್ಲ್ಯಾಬ್ ಮತ್ತು ಕಂಬದ ನಡುವೆ ಇರುವ ಈ ಸ್ಥಳದಲ್ಲಿ ಬಗ್ಗಿ ಹರಿದಾಡುವುದು ಬಿಟ್ಟರೆ ಇನ್ನೇನೂ ಮಾಡಲು ಸಾಧ್ಯವಿಲ್ಲ. ಪಾರಿವಾಳಗಳು ಮಾತ್ರ ಇರಬಹುದಾದ ಜಾಗದಲ್ಲಿ ಈತ ಹೇಗೆ ಬಂದ ಎಂಬುದು ಕುತೂಹಲ ಮೂಡಿಸಿದೆ.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಆ ವ್ಯಕ್ತಿ ಜನರ ಗಮನಕ್ಕೆ ಬರುವ ಮೊದಲಿನ ಸ್ವಲ್ಪ ಸಮಯದಿಂದಲೇ ಅಲ್ಲಿ ವಿಶ್ರಾಂತಿ ಪಡೆಯುತ್ತಿದ್ದಂತೆ ಕಂಡುಬಂದಿದೆ. ಯಾರೋ ಫ್ಲೈಓವರ್ ಕಂಬವನ್ನು ವಿಶ್ರಾಂತಿ ಸ್ಥಳವಾಗಿ ಬಳಸುತ್ತಿರುವುದನ್ನು ನೋಡಿ ಜನ ದಿಗ್ಭ್ರಮೆಗೊಂಡಿರುವುದಂತೂ ನಿಜ.

ಫ್ಲೈಓವರ್ ಪಿಲ್ಲರ್ ಆಶ್ರಯ ತಾಣವಾಗಬಾರದು. ಅಲ್ಲಿ ಇರುವುದು ಜೀವಕ್ಕೆ ಅಪಾಯಕಾರಿ ಎಂದೂ ಜನ ಆಕ್ಷೇಪಿಸಿದ್ದಾರೆ.



ಉದಯವಾಹಿನಿ ಚಿತ್ರ

## ದೆಹಲಿ ಸ್ಫೋಟ: ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಕಟ್ಟೆಚ್ಚರ

• ಉದಯವಾಹಿನಿ, ಬೆಂಗಳೂರು

ದೆಹಲಿಯ ಕೆಂಪು ಕೋಟೆ ಬಳಿ ಸ್ಫೋಟದ ಬಳಿಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡೂ ಟರ್ಮಿನಲ್‌ನಲ್ಲಿ ಭಾರಿ ಕಟ್ಟೆಚ್ಚರ ವಹಿಸಲಾಗಿದೆ. ವಿಮಾನ ನಿಲ್ದಾಣದ ಭದ್ರತಾ ಹೊಣೆ ಹೊತ್ತಿರುವ ಕೇಂದ್ರ ಕೈಗಾರಿಕ ಭದ್ರತಾ ಪಡೆಯ (ಸಿಐಎಸ್‌ಎಫ್) ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ರಾಜ್ಯ ಪೊಲೀಸರು ವಿಮಾನ ನಿಲ್ದಾಣದ ಸುತ್ತಮುತ್ತ ಅಹಿತಕರ ಘಟನೆ ನಡೆಯದಂತೆ ಕಣ್ಣಿಟ್ಟಿದ್ದಾರೆ. ಪ್ರತಿ ಅರ್ಧ ತಾಸಿಗೊಮ್ಮೆ ಶ್ವಾನದಳದಿಂದ ಯಾವ ಮೂಲೆ ಬಿಡದಂತೆ ತಪಾಸಣೆ ಮಾಡಲಾಗುತ್ತಿದೆ. ಟರ್ಮಿನಲ್‌ಗಳಲ್ಲಿ ಅನಾಮಧೇಯ ವಸ್ತುಗಳು ಕಂಡು ಬಂದರೆ ಕೂಡಲೇ ಬಾಂಬ್ ನಿಷ್ಕ್ರಿಯ ದಳದಿಂದ ತಪಾಸಣೆ ಮಾಡಲಾಗುತ್ತಿದೆ. ಚೆಕ್ ಪೋಸ್ಟ್‌ಗಳ ಸಂಖ್ಯೆ ಹೆಚ್ಚಿಸಲಾಗಿದೆ. ಸಿಸಿಟಿವಿ ಕ್ಯಾಮೆರಾ ಮೂಲಕ ನಿರಂತರ ನಿಗಾ ವಹಿಸಲು ಕಂಟ್ರೋಲ್ ರೂಂ ಸಿಬ್ಬಂದಿಯನ್ನು ಹೆಚ್ಚಿಸಲಾಗಿದೆ. ಪ್ರಯಾಣಿಕರನ್ನು ಬೀಳ್ಕೊಡಲು ಬರುವ, ಇಲ್ಲವೇ ಸ್ವಾಗತಿಸಲು ಬರುವವರನ್ನು ಹೆಚ್ಚು ಹೊತ್ತು ಟರ್ಮಿನಲ್‌ಗಳಲ್ಲಿ ನಿಲ್ಲದಂತೆ ಭದ್ರತಾ ಸಿಬ್ಬಂದಿ ಎಚ್ಚರಿಕೆ ನೀಡುತ್ತಿದ್ದಾರೆ.

ಪ್ರಯಾಣಿಕರನ್ನು ಬಿಡಲು ಇಲ್ಲವೇ ಕರೆದೊಯ್ಯಲು ಬರುವ ಟ್ಯಾಕ್ಸಿ ಖಾಸಗಿ ವಾಹನಗಳನ್ನು ನಿಲುಗಡೆ ಸ್ಥಳದಲ್ಲಿ 5 ನಿಮಿಷಕ್ಕೂ ಹೆಚ್ಚು ನಿಲ್ಲಲು ಅವಕಾಶ ನೀಡುತ್ತಿಲ್ಲ. ಬಸ್ ನಿಲ್ದಾಣ, ವಾಹನ ನಿಲ್ದಾಣಗಳಲ್ಲಿ ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ 24 ಗಂಟೆಯೂ ಗಸ್ತು



## ರಾಜ್ಯದಲ್ಲಿ ಹಾವು ಕಡಿತ ಪ್ರಕರಣ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿ ಜೊತೆಗೆ ಹಾವುಗಳ ಕಾಟವೂ ಹೆಚ್ಚಿದೆ. ಅತಿಯಾಗಿ ನಡೆಯುತ್ತಿರುವ ಕಾಂಕ್ರಿಟೀಕರಣದ ಪ್ರಭಾವದಿಂದಾಗಿ ಹಾವುಗಳು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿದ್ದು, ಅವುಗಳ ಕಡಿತ ಪ್ರಮಾಣವೂ ಗಣನೀಯವಾಗಿ ಹೆಚ್ಚಳವಾಗಿದೆ. ಕೇವಲ 10 ತಿಂಗಳ ಅವಧಿಯಲ್ಲಿ 18 ಸಾವಿರಕ್ಕೂ ಹೆಚ್ಚು ಹಾವು ಕಡಿತ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿದ್ದು, ಒಟ್ಟು 125 ಜನ ಈವರೆಗೆ ಪ್ರಾಣ ಕಳೆದುಕೊಂಡಿದ್ದಾರೆ. ಕಳೆದ ಒಂದು ವಾರದ ಅವಧಿಯಲ್ಲೇ 512 ಹಾವು ಕಡಿತ ಕೇಸ್‌ಗಳು ಪತ್ತೆಯಾಗಿದ್ದು, ಆ ಪೈಕಿ ಮೂವರು ಅಸುನೀಗಿದ್ದಾರೆ. ಹಾವು ಕಡಿತ ಕೇಸ್‌ಗಳ ಪೈಕಿ ಹಲವರು ಸಕಲಾದಲ್ಲಿ ಚಿಕಿತ್ಸೆ ಮತ್ತು ಔಷಧ ಸಿಗದೆ ಮೃತಪಟ್ಟಿದ್ದು, ಈ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ.

## 5,950 ಗ್ರಾ.ಪಂ ಮೀಸಲಾತಿ ಅಧಿಸೂಚನೆ: ಸರ್ಕಾರಕ್ಕೆ ನೋಟಿಸ್

• ಉದಯವಾಹಿನಿ, ಬೆಂಗಳೂರು

'ಮುಂದಿನ ವರ್ಷ ಜನವರಿಯಲ್ಲಿ ಅವಧಿ ಪೂರ್ಣಗೊಳ್ಳಲಿರುವ 5,950 ಗ್ರಾಮ ಪಂಚಾಯತಿಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸಲು ಅನುಕೂಲವಾಗುವಂತೆ ಅಂತಿಮ ಮೀಸಲಾತಿಯ ಅಧಿಸೂಚನೆ ಹೊರಡಿಸಲು ತಕ್ಷಣವೇ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ರಾಜ್ಯ ಚುನಾವಣಾ ಆಯೋಗ ಹೈಕೋರ್ಟ್ ಮೆಟ್ಟಿಲೇರಿದೆ. ಈ ಸಂಬಂಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಇದೊಂದು ಗಂಭೀರ ವಿಷಯವಾಗಿದ್ದು, ಸರ್ಕಾರದಿಂದ ಅಗತ್ಯ ಮಾಹಿತಿಗಳನ್ನು ಪಡೆದು ಎರಡು ವಾರಗಳಲ್ಲಿ ನ್ಯಾಯಾಲಯಕ್ಕೆ ತಿಳಿಸಬೇಕು ಎಂದು ಸರ್ಕಾರಿ ವಕೀಲರಿಗೆ ಸೂಚಿಸಿ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂ. ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 11ಕ್ಕೆ ಮುಂದೂಡಲಾಗಿದೆ.

## ಕಸ ಗುಡಿಸುವ ಯಂತ್ರಕ್ಕೆ ಕೋಟಿ ಕೋಟಿ ಬಾಡಿಗೆ: ರಾಜ್ಯ ಸರ್ಕಾರದಿಂದ ವಿವಾದಿತ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿವಾದಿತ ನಿರ್ಧಾರ ಕೈಗೊಳ್ಳಲಾಗಿದೆ.

ಜಿಬಿಎ ವ್ಯಾಪ್ತಿಯ ಕಸ ಗುಡಿಸುವ ಯಂತ್ರಕ್ಕೆ ನೂರಾರು ಕೋಟಿ ಬಾಡಿಗೆ ನೀಡಲು ಸರ್ಕಾರ ಮುಂದಾಗಿದ್ದು, 7 ವರ್ಷದ ಅವಧಿಗೆ 46 ಕಸಗುಡಿಸುವ ಯಂತ್ರ ಬಾಡಿಗೆ ಪಡೆಯಲು ನಿರ್ಧರಿಸಲಾಗಿದೆ. ಈ ಬಗ್ಗೆ ಸಭೆ ಬಳಿಕ ಸಚಿವ ಹೆಚ್.ಕೆ.ಪಾಟೀಲ್ ಮಾಹಿತಿ ನೀಡಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆ ಮತ್ತು ಉಪ ಮುಖ್ಯ ರಸ್ತೆಗಳ ಸ್ವಚ್ಛತೆಗಾಗಿ ಕಸಗುಡಿಸುವ ಯಂತ್ರ ಬಾಡಿಗೆಗೆ ಪಡೆಯಲು ನಿರ್ಧರಿಸಲಾಗಿದೆ. ಇದಕ್ಕಾಗಿ 613.25 ಕೋಟಿ ರೂ. ವೆಚ್ಚಕ್ಕೆ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿದೆ ಎಂದು ತಿಳಿಸಿದ್ದಾರೆ. 3 ಸಂಪುಟ ಉಪ ಸಮಿತಿಗಳು 6 ತಿಂಗಳು ಆದ್ರೂ ವರದಿ ಸಲ್ಲಿಸಿದ ಕಾರಣ, ಆದಷ್ಟು ಬೇಗ ರಿಪೋರ್ಟ್ ನೀಡಲು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಕೋವಿಡ್ ಹಗರಣದ ಕುರಿತು ಕುನ್ಹಾ ವರದಿಯ ಪರಿಶೀಲನೆ ಉಪ ಸಮಿತಿ, ರಾಜ್ಯದ ವಿವಿಗಳ ಆರ್ಥಿಕ ಸ್ಥಿತಿಗಳ ಪರಿಶೀಲನೆಗೆ ನೇಮಿಸಿರುವ ಡಿಸಿಎಂ ನೇತೃತ್ವದ ಉಪ ಸಮಿತಿ ಮತ್ತು ನೈಸ್ ಕಾರಿಡಾರ್ ಯೋಜನೆಯ ಅನುಷ್ಠಾನ, ಮುಂದಿನ ಯೋಜನೆಯ ಪ್ರಗತಿ ಬಗ್ಗೆ ಪರಮೇಶ್ವರ್ ನೇತೃತ್ವದ ಉಪಸಮಿತಿಗೆ ಈ ಬಗ್ಗೆ ತಿಳಿಸಲಾಗಿದೆ ಎಂದು ಹೆಚ್.ಕೆ.ಪಾಟೀಲ್ ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ಸಚಿವ ಸಂಪುಟ ಸಭೆಯಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನಕ್ಕೂ ದಿನಾಂಕ ನಿಗದಿಪಡಿಸಲಾಗಿದೆ. ಡಿಸೆಂಬರ್ 8ರಿಂದ 19ರವರೆಗೆ ಬೆಳಗಾವಿ ಅಧಿವೇಶನ ನಡೆಯಲಿದೆ ಎಂದು ಸಚಿವರು ತಿಳಿಸಿದ್ದಾರೆ.

## ಭಾರತಿ ದರ್ಶ್ ಫೌಂಡೇಶನ್ ನಿಂದ ಉಚಿತ ದಂತ ಚಿಕಿತ್ಸಾ ಶಿಬಿರ

• ಉದಯವಾಹಿನಿ, ಬೆಂಗಳೂರು

ರಾಜಗೋಪಾಲನಗರದ ಬಸಪ್ಪನಕಟ್ಟೆಯಲ್ಲಿ ಭಾರತಿದರ್ಶ್ ಫೌಂಡೇಶನ್ (ರಿ) ಆಯೋಜಿಸಿದ್ದ ಉಚಿತ ದಂತ ಚಿಕಿತ್ಸಾ ಶಿಬಿರವನ್ನು ಎಲ್.ಬಿ.ಎಸ್ ಅಟೋಮೆಷನ್ ಸಿಸ್ಟಮ್‌ನ ಮಾಲೀಕ ಬಸವರಾಜ್ ಎನ್. ಕೆ ಮತ್ತು ಶ್ರೀಮತಿ ಲೀಲಾವತಿ. ಪಿ.ಎಮ್ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷ ಭಾಮ ಹರೀಶ್ ಉದ್ಘಾಟಿಸಿದರು. ಹರೀಶ್ ಮಾತನಾಡಿ ಖಾಸಗಿ ಆಸ್ಪತ್ರೆ ವೈದ್ಯರಲ್ಲಿ ಚಿಕಿತ್ಸೆ ಮಾಡಿಸುವ ವೆಚ್ಚ ದುಬಾರಿಯಾಗಿದೆ. ಮುಂಬರುವ ದಿನಗಳಲ್ಲಿ ಸಾರ್ವಜನಿಕರು ಭಾರತಿದರ್ಶ್ ಫೌಂಡೇಶನ್ (ರಿ) ಆಯೋಜಿಸುವ ವೈದ್ಯಕೀಯ ಚಿಕಿತ್ಸೆ ಶಿಬಿರದಲ್ಲಿ ಎಲ್ಲಾ ರೀತಿಯ ಉಚಿತ ಶಸ್ತ್ರ ಚಿಕಿತ್ಸೆಯ ಲಾಭವನ್ನು ಪಡೆಯಬೇಕೆಂದು ಹೇಳಿದರು. ನೂರಾರು ಜನರು ಭಾಗವಹಿಸಿ ಶಿಬಿರದ ಲಾಭವನ್ನು ಪಡೆದರು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ನರಸಮ್ಮ, ಎಮ್.ಮುನಿರಾಜು, ಭಾರತಿ ದರ್ಶ್ ಫೌಂಡೇಶನ್ (ರಿ) ಸಂಸ್ಥಾಪಕರಾದ ಶೈಲೇಂದ್ರ, ಪಾಟೀಲ್ ಭಾಗವಹಿಸಿದ್ದರು.

## ಪೌರಕಾರ್ಮಿಕರಿಗೆ ಪಿಎಫ್ ಈ ಕಂತು ಪಾವತಿಸದ ಗುತ್ತಿಗೆದಾರರು

• ಉದಯವಾಹಿನಿ, ಬೆಂಗಳೂರು

ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಆರು ಸಾವಿರ ಪೌರಕಾರ್ಮಿಕರಿಗೆ ಐದೂವರೆ ವರ್ಷ ಭವಿಷ್ಯ ನಿಧಿ (ಪಿಎಫ್) ಪಾವತಿಸದೇ ಇದ್ದುದರಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ರೂ.180 ಕೋಟಿಗೂ ಹೆಚ್ಚು ನಷ್ಟವಾಗಿದೆ. ಆದರೂ, ತಪ್ಪಿತಸ್ಥರ ಮೇಲೆ ಅಧಿಕಾರಿಗಳು ಕ್ರಮ ಕೈಗೊಂಡಿಲ. 2011ರ ಜನವರಿಯಿಂದ 2017ರ ಜುಲೈವರೆಗೆ ನಗರದಲ್ಲಿ ತ್ಯಾಜ್ಯ ಸಂಗ್ರಹ, ವಿಲೇವಾರಿ, ನಿರ್ವಹಣೆಯ ಗುತ್ತಿಗೆ ಪಡೆದುಕೊಂಡಿದ್ದ ಗುತ್ತಿಗೆದಾರರು, ಬಿಬಿಎಂಪಿಯಿಂದ ಸಂಪೂರ್ಣ ಹಣ ಪಡೆದುಕೊಂಡಿದ್ದಾರೆ. ಹಾಗಿದ್ದರೂ ಗುತ್ತಿಗೆ ಆಧಾರದಲ್ಲಿದ್ದ ಪೌರಕಾರ್ಮಿಕರ ಪಿಎಫ್ ಕಂತನ್ನು ಪಾವತಿಸಿಲ್ಲ. ಈ ಬಗ್ಗೆ ಕ್ರಮ ಕೈಗೊಂಡಿರುವ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಇಪಿಎಫ್ ಮೂಲ ಉದ್ಯೋಗದಾತನಾಗಿರುವ ಬಿಬಿಎಂಪಿಯಿಂದಲೇ ಕಂತಿನ ಪೂರ್ಣ ಮೊತ್ತವನ್ನು ವಸೂಲಿ ಮಾಡಿದೆ.

'ತೆರಿಗೆ ಕಟ್ಟದಿದ್ದರೆ ಆಸ್ತಿಯನ್ನು ಜಪ್ತಿ ಮಾಡಿಕೊಳ್ಳುತ್ತೇವೆ' ಎಂದು ಜಿಬಿಎ (ಹಿಂದಿನ ಬಿಬಿಎಂಪಿ) ಅಧಿಕಾರಿಗಳು ಹೇಳುತ್ತಿದ್ದರು. ಅದೇ ಪ್ರಕ್ರಿಯೆಯನ್ನು ಇಪಿಎಫ್ ನಡೆಸಿದ್ದು, ಬಿಬಿಎಂಪಿಯ ಖಾತೆಯಲ್ಲಿ ರೂ.90 ಕೋಟಿಗೂ ಹೆಚ್ಚು ಹಣವನ್ನು ಜಪ್ತಿ ಮಾಡಿಕೊಂಡಿದೆ. ಇದನ್ನು ಪ್ರಶ್ನಿಸಿ ಬಿಬಿಎಂಪಿ ಎರಡು ಬಾರಿ ಹೈಕೋರ್ಟ್ ಮೆಟ್ಟಿಲೇರಿದ್ದರೂ, ಅರ್ಜಿ ವಜಾಗೊಂಡಿದೆ. ಹೀಗಾಗಿ, ಈ ಹಣವನ್ನು ವಾಪಸ್ ನೀಡುವುದು ಸಾಧ್ಯವಿಲ್ಲ ಎಂದು ಇಪಿಎಫ್ ಸ್ಪಷ್ಟಪಡಿಸಿದೆ.

ಪಿಎಫ್ ಕಂತು ಪಾವತಿಯಾಗದ ಬಗ್ಗೆ ಬಿಬಿಎಂಪಿ ಗುತ್ತಿಗೆ ಪೌರಕಾರ್ಮಿಕರ ಸಂಘ' 2014ರಲ್ಲಿ ದೂರು ನೀಡಿತ್ತು. 2017ರಲ್ಲಿ ಮತ್ತೆ ಈ ಬಗ್ಗೆ ದೂರು ದಾಖಲಾಯಿತು.

ಅಂದಿನಿಂದ ವಿಚಾರಣೆ ನಡೆಸಿದ ಇಪಿಎಫ್, ಗುತ್ತಿಗೆದಾರರಿಗಿಂತ ಮೂಲ ಉದ್ಯೋಗದಾತರಾಗಿರುವ ಬಿಬಿಎಂಪಿಯೇ ಇದನ್ನು ಸರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಹಲವು ತೀರ್ಪುಗಳನ್ನು ಉಲ್ಲೇಖಿಸಿ ಸಾಕಷ್ಟು ಸಮಯ ನೀಡಿತ್ತು. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ, ಕೆನರಾ ಬ್ಯಾಂಕ್‌ನ ಬಿಬಿಎಂಪಿ ಕೇಂದ್ರ ಕಚೇರಿಯ ಶಾಖೆಯಲ್ಲಿರುವ ಬಿಬಿಎಂಪಿ ಖಾತೆಯಿಂದ ರೂ.90 ಕೋಟಿ ಅನ್ನು 2018ರ ಜನವರಿ 23ರಂದು ಇಪಿಎಫ್ 'ಜಪ್ತಿ' ಮಾಡಿ, ಹಣ ಪಾವತಿಸುವಂತೆ ಬ್ಯಾಂಕ್‌ಗೆ ಸೂಚಿಸಿತು.

ಇದನ್ನು ಪ್ರಶ್ನಿಸಿ ಬಿಬಿಎಂಪಿ, ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರೂ ಅದು ವಜಾಗೊಂಡಿತು. 2024ರಲ್ಲಿ ಹೈಕೋರ್ಟ್‌ಗೆ ಬಿಬಿಎಂಪಿ ಮತ್ತೆ ಅರ್ಜಿ ಸಲ್ಲಿಸಿತು.

## ಪ್ರಸಾದ ಸೇವಿಸಿ 17 ಭಕ್ತರು ಸಾವು 119 ಜನ ಅಸ್ವಸ್ಥ

• ಉದಯವಾಹಿನಿ, ಬೆಂಗಳೂರು

ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಸುಲ್ವಾಡಿ ಗ್ರಾಮದ ಕಿಚ್ಚುಗುತ್ತಿ ಮಾರಮ್ಮ ದೇಗುಲ ಕಟ್ಟಡದ ಶಂಕುಸ್ಥಾಪನೆ ವೇಳೆ ವಿನಿಯೋಗಿಸಿದ್ದ ಪ್ರಸಾದ ಸೇವಿಸಿ 17 ಭಕ್ತರು ಮೃತಪಟ್ಟು 119 ಜನ ಅಸ್ವಸ್ಥಗೊಂಡ ಪ್ರಕರಣದಲ್ಲಿ ಸಾಲೂರು ಮಠದ ಅಂದಿನ ಪೀಠಾಧ್ಯಕ್ಷ ಇಮ್ಮಡಿ ಮಹಾದೇವ ಸ್ವಾಮಿ ಅವರಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಇಮ್ಮಡಿ ಮಹದೇವ ಸ್ವಾಮಿ ಅಲಿಯಾಸ್ ದೇವಣ್ಣ ಬುದ್ದಿ ಅಲಿಯಾಸ್ ದೇವಣ್ಣ ಸ್ವಾಮೀಜಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸ್ವಾಮೀಜಿ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಬಿ. ಸಿದ್ದೇಶ್ವರ ಅವರು ಮಂಡಿಸಿದ ವಾದ ಮನ್ನಿಸಿದ ನ್ಯಾಯಪೀಠ, ಅರ್ಜಿದಾರರಿಗೆ ತಕ್ಷಣದ ವೈದ್ಯಕೀಯ ಚಿಕಿತ್ಸೆ ಅಗತ್ಯವಿದೆ' ಎಂಬ ಕಾರಣದಿಂದ ಒಂದು ವರ್ಷದ ಅವಧಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು.

**ಪ್ರಕರಣವೇನು:** 2018ರ ಸಂಜೆ ಡಿಸೆಂಬರ್ 14ರಂದು ರಾಜಮ್ಮ ಎಂಬುವರ ದೂರನ್ನು ಆಧರಿಸಿ ಚಾಮರಾಜನಗರ ಜಿಲ್ಲೆಯ ರಾಂಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು ತನಿಖೆ ನಡೆಸಿದ್ದ ಪೊಲೀಸರು ಪ್ರಕರಣದಲ್ಲಿ ನಾಲ್ವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 118, 120 ಬಿ, 326, 307, 302 ತ 34 ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ದೌರ್ಜನ್ಯ ತಡೆ ಕಾಯ್ದೆಯ ಕಲಂ 3 (1) (2) (ವಿ) (ವಿಎ) ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ಪ್ರಮುಖ ಆರೋಪಿ ಇಮ್ಮಡಿ ಮಹಾದೇವ ಸ್ವಾಮೀಜಿಯವರನ್ನು 2018ರ ಡಿಸೆಂಬರ್ 19ರಂದು ಬಂಧಿಸಲಾಗಿತ್ತು.



ಇಮ್ಮಡಿ ಸ್ವಾಮೀಜಿಗೆ 1 ವರ್ಷ ಜಾಮೀನು

# ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಪಾರ್ಟಿ: ತನಿಖೆ ಚುರುಕು

## ಅಮಾನತುಗೊಂಡಿರುವ ಅಧಿಕಾರಿಗಳಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲು ಸಿದ್ಧತೆ

• ಉದಯವಾಹಿನಿ, ಬೆಂಗಳೂರು

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಜಾಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಮದ್ಯದ ಪಾರ್ಟಿ ನಡೆಸಿಕೊಂಡು ನೃತ್ಯ ಮಾಡಿದ್ದ ಪ್ರಕರಣದ ತನಿಖೆಯನ್ನು ಕಾನೂನು ಸುವ್ಯವಸ್ಥೆ ಎಡಿಜಿಪಿ ಹಿತೇಂದ್ರ, ಅವರ ನೇತೃತ್ವದ ಉನ್ನತಮಟ್ಟದ ಸಮಿತಿ ಆರಂಭಿಸಿದ್ದು, ಪ್ರಾಥಮಿಕ ಮಾಹಿತಿ ಕಲೆಹಾಕಿದೆ. ಈ ಸಮಿತಿಯಲ್ಲಿ ಐಜಿಪಿ ಸಂದೀಪ್ ಪಾಟೀಲ, ಎಸ್‌ಪಿಗಳಾದ ಅಮರನಾಥ್ ರೆಡ್ಡಿ, ರಿಷ್ಯಂತ್ ಅವರೂ ಸದಸ್ಯರಾಗಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

ಜೈಲರ್ ಡಿ.ಗೋಪಿನಾಥ್ ಅವರು ನೀಡಿದ ದೂರಿನ ಮೇರೆಗೆ ಕೈದಿಗಳಾದ ಕಾರ್ತಿಕ್ ಅಲಿಯಾಸ್ ಚಿಟ್ಟೆ, ಧನಂಜಯ್ ಅಲಿಯಾಸ್ ರೇಣುಕಾಪ್ರಸಾದ್, ಮಂಜುನಾಥ್ ಅಲಿಯಾಸ್ ಕೋಳಿ ಮಂಜ ಹಾಗೂ ಬಿ.ಚರಣ್ ರಾವ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ನಾಲ್ವರನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಅಲ್ಲದೇ ಅಮಾನತುಗೊಂಡಿರುವ ಅಧಿಕಾರಿಗಳಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲು ಸಿದ್ಧತೆ ನಡೆದಿದೆ ಎಂದು ತನಿಖಾ ತಂಡದ ಮೂಲಗಳು ತಿಳಿಸಿವೆ.

**ದೃಶ್ಯಾವಳಿ ಪರಿಶೀಲನೆ:** ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೋ ಜೈಲಿನ 8ನೇ ಬ್ಯಾರಕ್‌ನ ಏಳನೇ ಕೊಠಡಿಯಲ್ಲಿ ಚಿತ್ರೀಕರಣಗೊಂಡಿರುವುದು ಎಂಬುದು ಗೊತ್ತಾಗಿದೆ. ನಿಷೇಧಿತ ವಸ್ತುಗಳನ್ನು ಜೈಲಿನ ಒಳಗೆ ತಂದಿರುವುದು ಪತ್ತೆಯಾಗಿದೆ. ನಿಷೇಧಿತ ವಸ್ತುಗಳನ್ನು ಯಾರು ಪೂರೈಸಿದ್ದರು ಎಂಬುದನ್ನು ಪತ್ತೆ ಹಚ್ಚಲಾಗುತ್ತಿದೆ. ಜೈಲಿನ ಪ್ರವೇಶ ದ್ವಾರ ಹಾಗೂ ಬ್ಯಾರಕ್ ಎದುರು ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಆ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ. ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳು ನೃತ್ಯ ಮಾಡುತ್ತಿರುವ ವಿಡಿಯೊವೊಂದು ಜಾಲತಾಣದಲ್ಲಿ ಹರಿದಾಡಿತ್ತು. ಉಮೇಶ್ ರೆಡ್ಡಿ, ಶಾಹೀದ್ ಹಾಗೂ ತರುಣ್‌ನನ್ನು ಕಾರಾಗೃಹದ ಅಧಿಕಾರಿಗಳು ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ವಿಡಿಯೊ ಆಧರಿಸಿ ಕೃತ್ಯ ನಡೆದ ಸ್ಥಳವನ್ನೂ ಪರಿಶೀಲನೆ ನಡೆಸಿದ್ದಾರೆ. ಈ ವರದಿಯನ್ನು ಕಾರಾಗೃಹ ಹಾಗೂ ಸುಧಾರಣಾ ಇಲಾಖೆಯ ಅಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧಿಕಾರಿಗಳನ್ನು ಸಂಕಷ್ಟಕ್ಕೆ ಸಿಲುಕಿಸುವ ಉದ್ದೇಶದಿಂದಲೇ ಕೆಲವರು ಸಂಚು ರೂಪಿಸಿದ್ದರು ಎಂಬುದಾಗಿ ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ಹೇಳಿವೆ.




ಉದಯವಾಹಿನಿ ಚಿತ್ರ

### ಸೇಡು ತೀರಿಸಿಕೊಳ್ಳಲು ಸಂಚು?

ಜೈಲಿನಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ನಡುವೆ ಪ್ರತ್ಯೇಕ ಗುಂಪುಗಳಿವೆ. ಒಂದು ಗುಂಪಿನ ಅಧಿಕಾರಿಗಳಿಗೆ ಕೆಟ್ಟ ಹೆಸರು ತರಬೇಕೆಂದು, ಇನ್ನೊಂದು ಗುಂಪು ಕೈದಿಗಳಿಗೆ ಮೊಬೈಲ್ ನೀಡಿ ಆ ದೃಶ್ಯವನ್ನು ಚಿತ್ರೀಕರಿಸಿಕೊಂಡಿದೆ. ಸೌಲಭ್ಯ ನೀಡಿದ ಜೈಲು ಅಧಿಕಾರಿಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಕೆಲವು ಕೈದಿಗಳು ವಿಡಿಯೋ ಚಿತ್ರೀಕರಿಸಿಕೊಂಡು ಹೊರಗಿರುವ ಆಪ್ತರಿಗೆ ನೀಡಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿಸಿದ್ದರು ಎಂಬುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ. ಉಮೇಶ್ ರೆಡ್ಡಿ ಮೊಬೈಲ್‌ನಲ್ಲಿ ಮಾತನಾಡಿರುವ ದೃಶ್ಯವು 2023ರಲ್ಲಿ ಚಿತ್ರೀಕರಣಗೊಂಡಿರುವುದು. ಬೆಳಗಾವಿ ಕೇಂದ್ರ ಕಾರಾಗೃಹದಿಂದ ಉಮೇಶ್ ರೆಡ್ಡಿಯನ್ನು ಪರಪ್ಪನ ಅಗ್ರಹಾರಕ್ಕೆ ಕರೆತಂದು ಜೈಲಿನ ಆಸ್ಪತ್ರೆ ವಿಭಾಗದಲ್ಲಿ ಇರಿಸಲಾಗಿತ್ತು. ಅದೇ ವಿಭಾಗದಲ್ಲಿ ರೌಡಿ ಶೀಟರ್ ವಡ್ಡ ನಾಗನಿದ್ದ. ಆತನೇ ಉಮೇಶ್ ರೆಡ್ಡಿಗೆ ಮೊಬೈಲ್ ನೀಡಿ ಮಾತನಾಡುವಂತೆ ಹೇಳಿ ದೃಶ್ಯವನ್ನು ಚಿತ್ರೀಕರಿಸಿಕೊಂಡಿದ್ದ. ಈ ವಿಚಾರವನ್ನು ಉಮೇಶ್ ರೆಡ್ಡಿ ಕಾರಾಗೃಹದ ಅಧಿಕಾರಿಗಳಿಗೆ ತಿಳಿಸಿದ್ದಾನೆ' ಎಂದು ಗೊತ್ತಾಗಿದೆ.

ಅಂತರಾಳದಿಂದ...
EDITORIAL

# ಜೈಲುಗಳ ತೀವ್ರ ಅನಾರೋಗ್ಯ; ಬೇರುಮಟ್ಟದ ಚಿಕಿತ್ಸೆ ಅಗತ್ಯ



ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ಅಪರಾಧಿಗಳು ಮತ್ತು ಶಂಕಿತ ಭಯೋತ್ಪಾದಕರು ವಿಶೇಷ ಸವಲತ್ತುಗಳನ್ನು ಅನುಭವಿಸುತ್ತಿರುವ ವಿಡಿಯೋಗಳು ಬೆಳಕಿಗೆ ಬಂದಿವೆ. ಇದು ಅನಿರೀಕ್ಷಿತ ಅಥವಾ ಆಕಸ್ಮಿಕ ಘಟನೆಯಾಗಿರದೆ, ಚಿಕಿತ್ಸೆ ದೊರಕದೆ ಉಳಿದಿರುವ ದೀರ್ಘಕಾಲಿಕ ರೋಗದ ಲಕ್ಷಣವಾಗಿದೆ. ದುರ್ಬಲ ಗೋಡೆಗಳು, ರಾಜಿ ಮನೋಧರ್ಮದ ವಾರ್ಡನ್‌ಗಳು ಹಾಗೂ ಅಧಿಕಾರಿಗಳ ನಿರ್ಲಕ್ಷ್ಯದ ಮರೆಯಲ್ಲಿ ಶಿಕ್ಷೆಯ ಭಯವಿಲ್ಲದೆ ನಡೆಯುತ್ತಿರುವ ಚಟುವಟಿಕೆಗಳಿಂದ ರಾಜ್ಯದ ಜೈಲುಗಳು ಗಳಿಸಿರುವ ಕುಖ್ಯಾತಿಗೆ ದಶಕಗಳ ಇತಿಹಾಸವಿದೆ. ಇತ್ತೀಚೆಗೆ ಹೊರಬಿದ್ದಿರುವ ದೃಶ್ಯಗಳು ಆಘಾತ ಉಂಟು ಮಾಡುವಂತಿದ್ದರೂ, ಅನಿರೀಕ್ಷಿತವೇನೂ ಅಲ್ಲ.

**ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಜಾಗಕ್ಕೆ ಇದೇ ಮೊದಲ ಬಾರಿಗೆ ಐಪಿಎಸ್ ಅಧಿಕಾರಿ ಅನ್ನು ಕುಮಾರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ರಾಜ್ಯದ ಎಲ್ಲಾ ಕಾರಾಗೃಹಗಳ ಬಗ್ಗೆ ಸಮಗ್ರ ವರದಿ ನೀಡುವಂತೆ, ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಆರ್. ಹಿತೇಂದ್ರ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಒಂದು ತಿಂಗಳೊಳಗೆ ವರದಿ ನೀಡುವಂತೆ ಗೃಹ ಸಚಿವ ಜಿ. ಪರಮೇಶ್ವರ ಸೂಚಿಸಿದ್ದಾರೆ. ಎಲ್ಲಾ ಜೈಲುಗಳಲ್ಲಿನ ಸಿಸಿಟಿವಿ ದೃಶ್ಯಗಳ ಮೇಲ್ವಿಚಾರಣೆಗೆ ಕಮಾಂಡ್ ಸೆಂಟರ್ ಸ್ಥಾಪಿಸುವುದು, ಮೊಬೈಲ್ ಜಾಮರ್‌ಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಖಚಿತ ಪಡಿಸಿಕೊಳ್ಳಲು ಪರಿಶೀಲನೆ ನಡೆಸುವುದಾಗಿ ಸರ್ಕಾರ ಹೇಳಿದೆ. ಹೊಸತಾಗಿ ಸಿಸಿಟಿವಿಗಳ ಅಳವಡಿಕೆಗೆ ರೂ.2 ಕೋಟಿ ಹಾಗೂ ಸಂವಹನ ಗೋಪುರಗಳಿಗಾಗಿ ರೂ.15 ಕೋಟಿ ನೀಡಲು ಅನುಮೋದನೆ ನೀಡಿದೆ. ಹೊಸ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯೂ ಆರಂಭಗೊಳ್ಳುವ ಸಾಧ್ಯತೆಯಿದೆ.**

ಭಯೋತ್ಪಾದಕ ಸಂಘಟನೆಗಳಿಗೆ ಯುವಜನರನ್ನು ಸೇರಿಸುತ್ತಿದ್ದ ಆರೋಪದಲ್ಲಿ ಬಂಧನಕ್ಕೊಳಗಾಗಿರುವ, ಐಎಸ್ ಸಂಪರ್ಕ ಹೊಂದಿರುವ ಆರೋಪಿ ಜುಹಾದ್ ಹಮೀದ್ ಶಕೀಲ್ ಮನ್ನಾ ತನ್ನ ಸೆಲ್‌ನಲ್ಲಿ ಸ್ಮಾರ್ಟ್ ಫೋನ್ ಬಳಸುತ್ತಿರುವ ದೃಶ್ಯ ವಿಡಿಯೋದಲ್ಲಿದೆ. ಕುಖ್ಯಾತ ರೌಡಿಯೊಬ್ಬ ಕಾರಾಗೃಹದೊಳಗೆ ಹುಟ್ಟುಹಬ್ಬ ಆಚರಿಸಿದ ಮತ್ತೊಂದು ವಿಡಿಯೋ ಇತ್ತೀಚೆಗಷ್ಟೇ ಸಾರ್ವಜನಿಕಗೊಂಡಿತ್ತು. ಕಾರಾಗೃಹದಲ್ಲಿನ ಕಾನೂನುಬಾಹಿರ ಚಟುವಟಿಕೆಗಳು ಪ್ರತಿ ಸಲ ಬಯಲಾದಾಗಲೂ, ಎದುರಾಗುವ ಪ್ರತಿಕ್ರಿಯೆ ಒಂದೇ ಬಗೆಯದಾಗಿರುತ್ತದೆ: ಘಟನೆಯ ಬಗ್ಗೆ ಆಕ್ರೋಶ, ಕೆಲವು ಅಧಿಕಾರಿಗಳ ಅಮಾನತು ಹಾಗೂ ಸುಧಾರಣೆಯ ಭರವಸೆ. ಈ ಬಾರಿಯೂ ಸರ್ಕಾರದ ಪ್ರತಿಕ್ರಿಯೆ ನಿರೀಕ್ಷಿತವಾದುದೇ ಆಗಿದೆ.

ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ ಅವರನ್ನು ವರ್ಗಾಯಿಸಲಾಗಿದ್ದರೆ, ಜೈಲಿನ ಸೂಪರಿಂಟೆಂಡೆಂಟ್ ಇಮಾಮ್ ಸಾಬ್ ಮ್ಯಾಗೇರಿ ಹಾಗೂ ಸಹಾಯಕ ಸೂಪರಿಂಟೆಂಡೆಂಟ್ ಅಶೋಕ್ ಭಜಂತ್ರಿ ಅವರನ್ನು ಅಮಾನತುಗೊಳಿಸಲಾಗಿದೆ. ಜೈಲುಗಳ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಸ್ವಾಗತಾರ್ಹ. ಆದರೆ, ಈ ಪ್ರಯತ್ನ ಸಮಸ್ಯೆಯ ಮೇಲ್ಪದರವನ್ನು ಸ್ಪರ್ಶಿಸುವಂತಿದೆಯೇ ಹೊರತು, ಬೇರುಮಟ್ಟದಲ್ಲಿ ನಿರ್ಮೂಲನಗೊಳಿಸುವಷ್ಟು ಪರಿಣಾಮಕಾರಿ ಆಗಿಲ್ಲ. ಸ್ಮಾರ್ಟ್ ಫೋನ್‌ಗಳು ಹಾಗೂ ಸಿಮ್ ಕಾರ್ಡ್‌ಗಳನ್ನು ಕಾರಾಗೃಹದೊಳಗೆ ಸಾಗಿಸಿದ್ದು ಹೇಗೆ? ಜಾಮರ್‌ಗಳ ಕಾರ್ಯನಿರ್ವಹಣೆಯ ನಡುವೆಯೂ ಫೋನ್‌ಗಳ ಬಳಕೆ ಸಾಧ್ಯವಾದುದು ಹಾಗೂ ವಿಡಿಯೊ ಚಿತ್ರೀಕರಣ ನಡೆದುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರವು, ಭ್ರಷ್ಟ ಅಧಿಕಾರಿಗಳು ನೀಡುತ್ತಿರುವ ಕುಮ್ಮಕ್ಕಿಗೆ ಸಂಬಂಧಿಸಿದ್ದಾಗಿದೆ. ಆಳವಾಗಿ ಬೇರುಬಿಟ್ಟಿರುವ ಅವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಎಲ್ಲಾ ಸರ್ಕಾರಗಳೂ ವಿಫಲವಾಗಿವೆ. ತಲೆದಂಡ ಆಗಬೇಕಿದ್ದವರು ಸುರಕ್ಷಿತವಾಗಿ ಉಳಿದು, ಮಧ್ಯಮ ಹಾಗೂ ಕೆಳಹಂತದ ಅಧಿಕಾರಿಗಳಷ್ಟೇ ಶಿಕ್ಷೆಗೆ ಗುರಿಯಾಗುತ್ತಾರೆ. ಶಂಕಿತ ಭಯೋತ್ಪಾದಕರು ಹಾಗೂ ಗಂಭೀರ ಅಪರಾಧ ಕೃತ್ಯಗಳನ್ನು ಎಸಗಿದವರು, ಬಹು ಸುರಕ್ಷಿತ ಕಾರಾಗೃಹ ಪರಿಸರವನ್ನು ತಮ್ಮ ಖಾಸಗಿ ಪಡಸಾಲೆಗಳನ್ನಾಗಿ ಬದಲಾಯಿಸಿಕೊಳ್ಳಲು ಸಾಧ್ಯವಾಗುತ್ತಿರುವುದು ಕಾನೂನು ಪಾಲನೆಯ ಕೊರತೆಯನ್ನು ಸೂಚಿಸುವುದರ ಬದಲಾಗಿ, ಅಲ್ಲಿ ಕಾನೂನೇ ಇಲ್ಲದಿರುವುದರ ಸಂಕೇತದಂತಿದೆ. ಕಾರಾಗೃಹಗಳ ಸುಧಾರಣೆಯ ಬಗ್ಗೆ ಸರ್ಕಾರ ಗಂಭೀರವಾಗಿದ್ದಲ್ಲಿ, ವರ್ಗಾವಣೆ ಮತ್ತು ಅಮಾನತು ರೀತಿಯ ಕ್ರಮಗಳಾಚೆಗೆ ಕಾರ್ಯಪ್ರವೃತ್ತ ಆಗಬೇಕಿದೆ. ಜೈಲುಗಳನ್ನು ಜೈಲುಗಳನ್ನಾಗಿಯೇ ಉಳಿಸಬೇಕಾದಲ್ಲಿ ಅಲ್ಲಿನ ಆಡಳಿತವನ್ನು ವೃತ್ತಿಪರವನ್ನಾಗಿಸಬೇಕು, ಉತ್ತರದಾಯಿಯನ್ನಾಗಿಸಬೇಕು, ಆ ಮೂಲಕ ವ್ಯವಸ್ಥೆಯಲ್ಲಿನ ಕೊಳಕನ್ನು ತೊಳೆಯಬೇಕಾಗಿದೆ. ಇದನ್ನು ಮಾಡದೆ ಹೋದರೆ, ಮುಂದಿನ ಹಗರಣ ಯಾವಾಗ ಎಂದು ಜನ ನಿರೀಕ್ಷಿಸುವಂತಾಗುತ್ತದೆ.

# ತ್ಯಾಗ ಮಾಡುವುದನ್ನು ಕಲಿಯಿರಿ..!



ವಿಶ್ವಾಸ್.ಡಿ.ಗೌಡ



ನವೆಂಬರ್ 14 ಮಕ್ಕಳ ದಿನಾಚರಣೆ

ಮಕ್ಕಳೇ, ತ್ಯಾಗ ಮಾಡುವುದೆಂದರೆ ನಿಮ್ಮ ಪ್ರೀತಿಯ ವಸ್ತು, ಉದಾಹರಣೆಗಾಗಿ ತಿಂಡಿ ತಿನಿಸು ಇತ್ಯಾದಿ ವಸ್ತುಗಳನ್ನು ಇನ್ನೊಬ್ಬರಿಗೆ ಕೊಡುವುದು. ಅಂದರೆ ಇನ್ನೊಬ್ಬರಿಗೆ ಕೊಡುವುದಕ್ಕಾಗಿ ನಿಮ್ಮ ಪ್ರೀತಿಯ ವಸ್ತುವನ್ನು ತ್ಯಾಗ ಮಾಡುವುದು. ಯಾರಿಗೆ ಈ ರೀತಿ ತ್ಯಾಗವನ್ನು ಮಾಡಲು ಸಾಧ್ಯ ಆಗುವುದಿಲ್ಲವೋ, ಅವರನ್ನು ಸ್ವಾರ್ಥಿಯೆಂದು ಹೇಳುತ್ತಾರೆ. ಸ್ವಾರ್ಥ ವೃತ್ತಿಯು ಒಂದು ದೋಷವಾಗಿದೆ. ಈ ದೋಷವನ್ನು ನಾವು ಬಿಡಬೇಕು. ಸ್ವಾರ್ಥವನ್ನು ಕಡಿಮೆ ಮಾಡಲು ನಾವು ತ್ಯಾಗ ಮಾಡುವ ಗುಣವನ್ನು ಮೈಗೂಡಿಸಿಕೊಳ್ಳಬೇಕು.

ಸ್ವಾರ್ಥಿ ವ್ಯಕ್ತಿಯು ಇತರರಿಗೆ ಆಗುವ ಕಷ್ಟ ಅಥವಾ ದುಃಖದಿಂದ ದುಃಖಿತನಾಗುವುದಿಲ್ಲ, ಅವನು ಕೇವಲ ತನ್ನ ಸುಖದ ಕುರಿತು ವಿಚಾರ ಮಾಡುತ್ತಾನೆ. ಇದೇ ಸ್ವಾರ್ಥಿ ವೃತ್ತಿಯ ಕಾರಣ ಕಳ್ಳತನ, ಭ್ರಷ್ಟಾಚಾರ, ದೇಶದ್ರೋಹ ಇತ್ಯಾದಿ ದುರಭ್ಯಾಸಗಳು ಉತ್ಪನ್ನವಾಗುತ್ತವೆ.

**ತ್ಯಾಗದ ಉದಾಹರಣೆಯನ್ನು ನಾವು ಮುಂದಿನ ಕಥೆಯಲ್ಲಿ ನೋಡೋಣ. :** ಇದು ಬಹಳ ಹಿಂದಿನ ಘಟನೆಯಾಗಿದೆ. ವಿನೂ ಹೆಸರಿನ ಒಬ್ಬ ಬಾಲಕನು ಏಳನೇ ತರಗತಿಯಲ್ಲಿ ಕಲಿಯುತ್ತಿದ್ದನು. ವಿನೂವಿನ ಮನೆಯ ಎದುರಿಗೆ ಹಲಸಿನ ಹಣ್ಣಿನ ಒಂದು ಮರವಿತ್ತು. ಆ ಮರಕ್ಕೆ ಮೊದಲ ಬಾರಿಗೆ ಹಲಸು ಬಿಟ್ಟಿತ್ತು. ಸ್ವಲ್ಪ ದಿನಗಳ ಬಳಿಕ ಹಲಸಿನ ಕಾಯಿ ಹಣ್ಣಾಯಿತು. ಆಗ ವಿನೂವಿನ ತಾಯಿಯು ಹಲಸಿನ ಹಣ್ಣನ್ನು ಮರದಿಂದ ಕತ್ತರಿಸಿ ಅದರ ತೊಳೆಗಳನ್ನು ಬಿಡಿಸಿದಳು. ಬಳಿಕ ಅವಳು ವಿನೂವಿಗೆ ಐದು ದೊನ್ನೆಗಳನ್ನು (ಎಲೆಗಳಿಂದ ತಯಾರಿಸಿದ ಬಟ್ಟಲು) ಸಿದ್ಧಪಡಿಸಲು ಹೇಳಿದಳು. ಆ ಐದೂ ದೊನ್ನೆಗಳಲ್ಲಿ ಅವಳು ಹಲಸಿನ ಹಣ್ಣಿನ ಸ್ವಲ್ಪ ಸ್ವಲ್ಪ ತೊಳೆಗಳನ್ನು ಇಟ್ಟಳು.

ವಿನೂವಿಗೆ 'ತಾಯಿಯು ಮೊದಲ ದೊನ್ನೆಯನ್ನು ನನಗೇ ಕೊಡುವಳು' ಎಂದೆನಿಸಿತು. ಆಗ ತಾಯಿಯು 'ಈ ದೊನ್ನೆಯನ್ನು ಭಗವಂತನ ಎದುರಿಗೆ ಇಟ್ಟು ಭಗವಂತನಿಗೆ ನಮಸ್ಕರಿಸಿ ಬಾ' ಎಂದು ಹೇಳಿದಳು. ವಿನೂ ಹಾಗೆಯೇ ಮಾಡಿದನು.

ಅದರ ಬಳಿಕ ತಾಯಿಯು 'ವಿನೂ, ಈ ಎರಡು ದೊನ್ನೆಗಳನ್ನು ಪಕ್ಕದ ಮನೆಗಳಲ್ಲಿರುವ ಚಿಕ್ಕಮ್ಮಂದಿರಿಗೆ ಕೊಟ್ಟು ಬಾ' ಎಂದು ಹೇಳಿದಳು. ವಿನೂ ಪಕ್ಕದ ಮನೆಗಳಿಗೆ ಹೋಗಿ ಚಿಕ್ಕಮ್ಮಂದಿರಿಗೆ ಒಂದೊಂದು ದೊನ್ನೆಯನ್ನು ಕೊಟ್ಟು ಬಂದನು. ಆಗ ತಾಯಿಯು ಇನ್ನೊಂದು ದೊನ್ನೆಯನ್ನು ಓಣಿಯಲ್ಲಿರುವ ಅಜ್ಜಿಗೆ ಕೊಟ್ಟು ಬರುವಂತೆ ಹೇಳಿದಳು. ಅವರಿಗೆ ತಲುಪಿಸಿದ ಬಳಿಕ ವಿನೂ ಸ್ವಲ್ಪ ಕೋಪಗೊಂಡು ಮನೆಗೆ ಬಂದನು. ಅವನು ಬರುತ್ತಲೇ ತಾಯಿಯು ಕೊನೆಯ ದೊನ್ನೆಯಿಂದ ಒಂದು ತೊಳೆಯನ್ನು ವಿನೂವಿಗೆ ತಿನ್ನಿಸಿದಳು. ಆಗ ವಿನೂ 'ಅಮ್ಮಾ, ನಮ್ಮ ಮನೆಯ ಹಲಸಿನ ಹಣ್ಣನ್ನು ಮೊದಲು ಬೇರೆಯವರಿಗೆ ಮತ್ತು ಕೊನೆಯಲ್ಲಿ ನನಗೆ ಹೀಗೇಕೆ ಮಾಡಿದೆ' ಎಂದು ಕೇಳಿದನು. ಆಗ ತಾಯಿಯು 'ವಿನೂ, ನಮಗೆ ಹಲಸಿನ ಹಣ್ಣನ್ನು ಯಾರು ನೀಡಿದರು ಆ ಮರ. ಆ ಮರ ನಮ್ಮ ಬಾಗಿಲಿನ ಹತ್ತಿರ ಹೇಗೆ ದೊಡ್ಡದಾಯಿತು ಆ ಭಗವಂತನೇ ದೊಡ್ಡದಾಗಿ ಮಾಡಿದನಲ್ಲವೇ ಹಾಗಿರುವಾಗ ಕೇವಲ ನಾವೇ ಅದರ ಫಲವನ್ನು ತಿನ್ನಬೇಕೆ ನಾವು ಎಲ್ಲಾ ವಸ್ತುಗಳನ್ನು ಹಂಚಿಕೊಂಡು ತಿನ್ನಬೇಕು' ಎಂದು ಹೇಳಿದಳು. ವಿನೂವಿನ ತಲೆಯಲ್ಲಿ ಈ ಮಾತು ದೃಢವಾಯಿತು. ಆಗಿನಿಂದ ವಿನೂ 'ನಾನು, ನನಗೆ, ನನ್ನದು' ಎಂದು ಹೇಳುವುದನ್ನು ಬಿಟ್ಟು ಬಿಟ್ಟನು. ಇದೇ ವಿನೂ ದೊಡ್ಡವನಾದ ಮೇಲೆ ಆಚಾರ್ಯ ವಿನೋಬಾ ಭಾವೆಯ ಹೆಸರಿನಿಂದ ಪ್ರಸಿದ್ಧನಾದನು.

**ಮಕ್ಕಳೇ, ತ್ಯಾಗ ಮಾಡುವ ಮಹತ್ವ ಏನಿದೆ**

1. ತ್ಯಾಗ ಮಾಡುವುದರಿಂದ ಆನಂದ ಸಿಗುತ್ತದೆ. ಮಕ್ಕಳೇ, ಯಾವಾಗ ನಾವು ನಮ್ಮ ವಸ್ತು ಅಥವಾ ನಮ್ಮ ಪಾಲಿನ ಪದಾರ್ಥವನ್ನು ಅನ್ಯರಿಗೆ ಕೊಡುತ್ತೇವೆಯೋ ಆಗ ಇತರರ ಮುಖದ ಮೇಲೆ ಒಂದು ವಿಶೇಷವಾದ ಸಂತೋಷ ನೋಡಲು ಸಿಗುತ್ತದೆ. ಆ ಸಂತೋಷವನ್ನು ನೋಡಿ ನಮಗೂ ಆನಂದ ಸಿಗುತ್ತದೆ. 2. ತ್ಯಾಗದ ಇತರೆ ಲಾಭಗಳು ಯಾವುವು ಎನ್ನುವುದನ್ನು ನೋಡೋಣ. ವಿನಯ ಮತ್ತು ಆನಂದ ಒಂದೇ ತರಗತಿಯಲ್ಲಿ ಓದುತ್ತಿದ್ದರು. ಒಮ್ಮೆ ತರಗತಿಯಲ್ಲಿ ಮಕ್ಕಳನ್ನು ಪ್ರವಾಸಕ್ಕಾಗಿ ಕರೆದುಕೊಂಡು ಹೋಗಲಿದ್ದರು. ವಿನಯನ ತಾಯಿಯ ಆರೋಗ್ಯ ಸರಿಯಿಲ್ಲದ ಕಾರಣ ವಿನಯನಿಗೆ ಹೋಗಲು ಸಾಧ್ಯವಾಗಲಿಲ್ಲ. ಪ್ರವಾಸದಲ್ಲಿ ಶಿಕ್ಷಕರು ಎಲ್ಲಾ ಮಕ್ಕಳಿಗೆ ಎರಡೆರಡು ಚಾಕಲೇಟ್‌ಗಳನ್ನು ಕೊಟ್ಟರು. ಎಲ್ಲಾ ಮಕ್ಕಳು ಆ ಚಾಕಲೇಟ್‌ಗಳನ್ನು ತಿಂದರು. ಆನಂದನು ಒಂದು ಚಾಕಲೇಟ್ ತಿಂದನು ಮತ್ತು ಇನ್ನೊಂದು ಚಾಕಲೇಟ್ ಜೇಬಿನಲ್ಲಿ ತೆಗೆದಿಟ್ಟುಕೊಂಡನು. ಮಾರನೇ ದಿನ ಶಾಲೆಗೆ ಬಂದ ಬಳಿಕ ಅವನು ಆ ಚಾಕಲೇಟ್‌ನ್ನು ವಿನಯನಿಗೆ ಕೊಟ್ಟನು. ಆಗಿನಿಂದ ಅವರು ಇಬ್ಬರೂ ಆಪ್ತ ಮಿತ್ರರಾದರು. ತನ್ನ ಪಾಲಿನ ಒಂದು ಚಾಕಲೇಟ ಆನಂದನಿಗೆ ಒಬ್ಬ ಆಪ್ತ ಮಿತ್ರನನ್ನು ಪರಿಚಯಿಸಿತು. ಆದ್ದರಿಂದ 'ತೆಗೆದುಕೊಳ್ಳುವುದಕ್ಕಿಂತ ಕೊಡುವುದರಲ್ಲಿ' ಮಹತ್ವ ಹೆಚ್ಚಿದೆ.

## ಕವನ

ವಿ.ಎಂ.ಎಸ್.ಗೋಪಿ



### ಬನ್ನಿ ಬನ್ನಿ ಮಕ್ಕಳೆ..

ಬನ್ನಿ ಬನ್ನಿ ಮಕ್ಕಳೆ ಇಲ್ಲಿ
ಆಟವ ಆಡೋಣ ಇಲ್ಲಿ
ಮರಗಿಡಗಳು ಎಲ್ಲಿ
ಶಾಲೆ ಸುತ್ತಮುತ್ತ ಖಾಲಿ
ತನ್ನಿರಿ ತನ್ನಿರಿ ಬೀಜವನ್ನು
ವಿಧ ವಿಧ ಬೀಜವ
ಚೆಲ್ಲೋಣ
ಹಸಿರು ತೋಟ
ಮಾಡೋಣ
ಬೀಜವ ಒಡೆದು ಸಸಿ
ಆಯಿತ್ತು
ಸಸಿ ಗಿಡವಾಗಿ
ಮರವಾಯಿತ್ತು
ಮರ ಗಿಡಗಳಿಂದಲೇ
ತರಕಾರಿ ಹಣ್ಣುಗಳು
ಗಿಡ ಮರಗಳಿಂದಲೇ
ಗಾಳಿ ನೆರಳು
ಮರ ಗಿಡಗಳಿಂದಲೇ ಮಳೆ ಬೆಳೆ
ಎಲ್ಲ ಗಿಡ ಮರಗಳು ನೋಡುತ್ತ
ವಿಧ ವಿಧ ಹಣ್ಣನ್ನು ತಿನ್ನುತ
ಹಾಡುತ ಕುಣಿಯುತ
ಸವಿಯೋಣ




# ಚಳಿಗಾಲದಲ್ಲಿ ಖರ್ಜೂರ ತಿಂದರೆ ಮೂಳೆಗಳಿಗೆ ಬಲ



ಚಳಿಗಾದಲ್ಲಿ ಖರ್ಜೂರದ ಸೇವನೆ ಉತ್ತಮ ಎನ್ನಲಾಗುತ್ತದೆ. ಇದು ನಮ್ಮ ಮೂಳೆಗಳನ್ನು ಬಲಪಡಿಸುವುದರ ಜೊತೆಗೆ ದೇಹಕ್ಕೆ ಶಕ್ತಿ ನೀಡುತ್ತದೆ. ಖರ್ಜೂರವು ಒಂದು ಆರೋಗ್ಯಕರ ಡ್ರೈ ಫ್ರೂಟ್ ಆಗಿದೆ. ಅದರಲ್ಲೂ ಚಳಿಗಾಲದಲ್ಲಿ ಖರ್ಜೂರದ ಸೇವನೆ ಆರೋಗ್ಯವನ್ನು ಫಿಟ್ ಆಗಿಡಲು ಸಹಕಾರಿಯಾಗಿದೆ. ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್, ಕ್ಯಾಲ್ಸಿಯಂ, ಪೊಟ್ಯಾಸಿಯಮ್, ಕಬ್ಬಿಣ, ಮೆಗ್ನೀಸಿಯಮ್ ಮತ್ತು ರಂಜಕದಂತಹ ಪೋಷಕಾಂಶಗಳಿಂದ ಸಮೃದ್ಧವಾಗಿದೆ. ಖರ್ಜೂರ ಸೇವನೆಯಿಂದ ಯಾವೆಲ್ಲಾ ಆರೋಗ್ಯ ಪ್ರಯೋಜನಗಳಿವೆ, ದಿನಕ್ಕೆ ಎಷ್ಟು ಖರ್ಜೂರ ತಿನ್ನೋದು ಉತ್ತಮ ಎನ್ನುವುದನ್ನು ತಿಳಿಯೋಣ.

**ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ:** ಫೈಬರ್‌ನಲ್ಲಿ ಸಮೃದ್ಧವಾಗಿರುವ ಖರ್ಜೂರವು ಜೀರ್ಣಾಂಗ ವ್ಯವಸ್ಥೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಕರುಳಿನ ಚಲನೆಯನ್ನು ಕ್ರಮಬದ್ಧಗೊಳಿಸುತ್ತದೆ ಮತ್ತು ಮಲಬದ್ಧತೆಯನ್ನು ತಡೆಯುತ್ತದೆ. ಇದು ಜೀರ್ಣಕ್ರಿಯೆಯ ಪ್ರಕ್ರಿಯೆಯನ್ನು ನಿಧಾನಗೊಳಿಸುತ್ತದೆ, ಪೋಷಕಾಂಶಗಳ ಉತ್ತಮ ಹೀರಿಕೊಳ್ಳುವಿಕೆಗೆ ಸಹಾಯ ಮಾಡುತ್ತದೆ, ಆದರೆ ಕರಗದ ನಾರು ಕರುಳಿನ ಮೂಲಕ ಆಹಾರವನ್ನು ವೇಗವಾಗಿ ಚಲಿಸಲು ಸಹಾಯ ಮಾಡುತ್ತದೆ.

**ಮೂಳೆಯನ್ನು ಬಲಪಡಿಸುವುದು:** ಖರ್ಜೂರವು ಮೂಳೆಗಳು ಮತ್ತು ಹಲ್ಲುಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಏಕೆಂದರೆ ಅವುಗಳು ಕ್ಯಾಲ್ಸಿಯಂ, ರಂಜಕ ಮತ್ತು ಮೆಗ್ನೀಸಿಯಮ್‌ನಂತಹ ಖನಿಜಗಳನ್ನು ಹೊಂದಿರುತ್ತವೆ. ಈ ಖನಿಜಗಳು ಮೂಳೆ ಸಾಂದ್ರತೆ ಮತ್ತು ಬಲಕ್ಕೆ ಮುಖ್ಯವಾಗಿವೆ ಮತ್ತು ಆಸ್ಟಿಯೊಪೊರೋಸಿಸ್‌ನಂತಹ ರೋಗಗಳನ್ನು ತಡೆಯಲು ಸಹ ಸಹಾಯ ಮಾಡಬಹುದು.

**ತ್ವರಿತ ಶಕ್ತಿ ನೀಡುತ್ತದೆ:** ಖರ್ಜೂರವು ನೈಸರ್ಗಿಕ ಸಕ್ಕರೆಗಳನ್ನು ಹೊಂದಿದ್ದು, ಇದು ದೇಹಕ್ಕೆ ತ್ವರಿತ ಶಕ್ತಿಯನ್ನು ನೀಡುತ್ತದೆ ಮತ್ತು ಆಯಾಸ ಮತ್ತು ದೌರ್ಬಲ್ಯವನ್ನು ನಿವಾರಿಸುವಲ್ಲಿ ಪ್ರಯೋಜನಕಾರಿಯಾಗಿದೆ. ಖರ್ಜೂರದಲ್ಲಿರುವ ನಾರು ಸಕ್ಕರೆಯ ಹೀರಿಕೊಳ್ಳುವಿಕೆಯನ್ನು ನಿಧಾನಗೊಳಿಸುತ್ತದೆ, ಸ್ಥಿರ ಮತ್ತು ದೀರ್ಘಕಾಲೀನ ಶಕ್ತಿಯನ್ನು ಒದಗಿಸುತ್ತದೆ.


**ಹೆಚ್ಚಿನ ಕೊಲೆಸ್ಟ್ರಾಲ್‌ಗೆ ಪ್ರಯೋಜನಕಾರಿ:** ಖರ್ಜೂರವು ಹೃದಯದ ಆರೋಗ್ಯಕ್ಕೆ ಪ್ರಯೋಜನಕಾರಿ ಏಕೆಂದರೆ ಅವುಗಳಲ್ಲಿ ಪೊಟ್ಯಾಸಿಯಮ್ ಅಧಿಕವಾಗಿರುತ್ತದೆ. ಇದು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಅವು ಫೈಬರ್ ಮತ್ತು ಉತ್ಕರ್ಷಣ ನಿರೋಧಕಗಳನ್ನು ಸಹ ಹೊಂದಿರುತ್ತವೆ, ಇದು ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಲು ಮತ್ತು ಅಪಧಮನಿಗಳಲ್ಲಿ ಪ್ಲೇಕ್ ಸಂಗ್ರಹವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಖರ್ಜೂರವನ್ನು ತಿನ್ನಲು ಸರಿಯಾದ ಮಾರ್ಗ**

**ಖರ್ಜೂರವನ್ನು ರಾತ್ರಿಯಿಡೀ ನೀರಿನಲ್ಲಿ ನೆನೆಸಿ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ತಿನ್ನುವುದು ಹೆಚ್ಚು ಪ್ರಯೋಜನಕಾರಿಯಾಗಿದೆ. ನೀವು ಇತರ ಹಣ್ಣುಗಳೊಂದಿಗೆ ಖರ್ಜೂರವನ್ನು ಬೆರೆಸಿ ಸ್ಮೂಥಿಯಲ್ಲಿ ಸೇರಿಸಿ ಸೇವಿಸಬಹುದು. ಖರ್ಜೂರವನ್ನು ಸಿಹಿತಿಂಡಿಗಳನ್ನು ತಯಾರಿಸಲು ಸಹ ಬಳಸಬಹುದು. ಹಾಲಿನೊಂದಿಗೆ ಬೆರೆಸಿದ ಖರ್ಜೂರವನ್ನು ಕುಡಿಯುವುದರಿಂದ ಅನೇಕ ಆರೋಗ್ಯ ಪ್ರಯೋಜನಗಳು ದೊರೆಯುತ್ತವೆ. ನೀವು ದಿನಕ್ಕೆ 3 ರಿಂದ 4 ಖರ್ಜೂರವನ್ನು ಸೇವಿಸಬಹುದು.**

# ನವೆಂಬರ್ 16ರಂದು ಗಂಗಾ ಲಹರಿ ವಾಚನ - ವ್ಯಾಖ್ಯಾನ

• **ಉದಯವಾಹಿನಿ, ಬೆಂಗಳೂರು**




ಬೆಂಗಳೂರು ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ ವತಿಯಿಂದ ಶ್ರೀ ಜಗನ್ನಾಥ ಪಂಡಿತರು ಸಂಸ್ಕೃತದಲ್ಲಿ ಮೂಲ ರಚನೆ ಮಾಡಿರುವ ಕೀರ್ತಿಶೇಷ ಪಂಡಿತ ಶ್ರೀ ಪಂಡರಿನಾಥಾಚಾರ್ಯ ಗಲಗಲಿ (ರಾಷ್ಟ್ರಪತಿ ಪುರಸ್ಕೃತರು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರು )ರವರು ಕನ್ನಡಕ್ಕೆ ಅನುವಾದಿಸಿರುವ ರಾಗ ತಾಳ ಭಾವದ ಕಾವ್ಯ 'ಗಂಗಾಲಹರಿಯ' ಆಯ್ದ ಪದ್ಯಗಳ ವಾಚನ -ವ್ಯಾಖ್ಯಾನವನ್ನು ರಾಜಾಜಿನಗರ ಒಂದನೇ ಕೆ ಬ್ಲಾಕ್, ಬಾಲಮೋಹನ್ ವಿದ್ಯಾ ಮಂದಿರ ಸಭಾಂಗಣದಲ್ಲಿ ಭಾನುವಾರ ನವಂಬರ್ 16ರಂದು ಬೆಳಗ್ಗೆ 10.00 ರಿಂದ 12:30 ರವರೆಗೆ ಆಯೋಜಿಸಲಾಗಿದೆ .

ಪಂಡಿತ ಪೂಜ್ಯ ಗಲಗಲಿ ಆಚಾರ್ಯರ ನೇರ ಶಿಷ್ಯರಾದ ಖ್ಯಾತ ವಾಗ್ಮಿ ಡಾ. ವೆಂಕಟನರಸಿಂಹಾಚಾರ್ಯ ಜೋಷಿ ,ಗುಡೇ ಬಲ್ಲೂರರವರು ವಾಚನ- ವ್ಯಾಖ್ಯಾನವನ್ನು ನಡೆಸಿಕೊಡುತ್ತಾರೆ.

ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ಅಧ್ಯಕ್ಷತೆ ವಹಿಸುವ ಸಮಾರಂಭವನ್ನು ಪುಷ್ಪಾ ಮುದಕವಿ ಮತ್ತು ಮೋಹನ ಮುದಕವಿ ಪ್ರಾಯೋಜಿಸಲಿದ್ದಾರೆ ಎಂದು ಆಯೋಜಕರಾದ ಉ.ರಾ ಬ್ರಾಹ್ಮಣ ಸಭಾದ ಅಧ್ಯಕ್ಷ ಎಸ್ .ಬಿ ರಾಜೇಶ್ ಮತ್ತು ಕಾರ್ಯದರ್ಶಿ ಭಾನುಪ್ರಕಾಶ್ ಹೆಚ್ ಪಿ ತಿಳಿಸಿದ್ದಾರೆ .

# ರಾಮಾಯಣ



## ಸೀತಾದೇವಿಯು ರಾವಣನನ್ನು ನಿಂದಿಸಿದ್ದು

• **ಹಿಂದಿನ ಸಂಚಿಕೆಯಿಂದ** 120 **ನೆಯ ಅಧ್ಯಾಯ**

ಅವಳ ತಲೆಗೂದಲು ಕೆದರಿಹೋಗಿತ್ತು. ತಿಲಕವು ಅಳಿಸಿಹೋಗಿತ್ತು. ಅವಳು ದುಃಖಾಕ್ರಾಂತಳಾಗಿ ರಾಮಲಕ್ಷ್ಮಣರನ್ನು ಕಾಣದೆ ಮುಖಕಾಂತಿಗುಂದಿ ಗಟ್ಟಿಯಾಗಿ ಅಳುತ್ತಿದ್ದಳು.

ಆ ಸೀತಾದೇವಿಯನ್ನು ರಾವಣನು ಅಂತರಿಕ್ಷಮಾರ್ಗದಲ್ಲಿ ಅಪಹರಿಸಿಕೊಂಡು ಹೋದನು.

**ಸೀತಾದೇವಿಯು ರಾವಣನನ್ನು ನಿಂದಿಸಿದ್ದು**


ಈ ಪ್ರಕಾರದಲ್ಲಿ ತನ್ನನ್ನು ಅಂತರಿಕ್ಷಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಿದ್ದ ರಾವಣನನ್ನು ನೋಡಿ ಸೀತಾದೇವಿಯು ರೋದನ ಮಾಡುತ್ತ ದೈನ್ಯಸ್ವರದಿಂದ ಆತನನ್ನು ಕುರಿತು ಹೀಗೆಂದಳು: ಎಲೈ ನೀಚ, ನೀನು ದುಷ್ಕರ್ಮವನ್ನು ಮಾಡಿಯೂ ಲಜ್ಜೆಯಿಲ್ಲದಿದ್ದೀಯೆ ಯಾರೂ ಇಲ್ಲದ ಸಮಯದಲ್ಲಿ ನನ್ನನ್ನು ಕದ್ದುಕೊಂಡು ಹೋಗಲು ಪ್ರಯತ್ನಿಸಿರುವೆ. ನೀನು ಪರಾಕ್ರಮದಿಂದ ನನ್ನನ್ನು ಎತ್ತಿಕೊಂಡು ಹೋಗಲಾರದೆ ನನ್ನ ಪತಿಯಾದ ಶ್ರೀರಾಮನಿಗೆ ಅಂಜಿಕೊಂಡು ಮಾಯಾ ಮೃಗರೂಪದಿಂದ ಆತನನ್ನು ಆಶ್ರಮದಿಂದ ಹೊರಗೆ ಹೋಗುವಂತೆ ಮಾಡಿದ್ದೀಯೆ. ನನ್ನ ಮಾವನಾದ ದಶರಥರಾಜನಿಗೆ ಸಖನಾಗಿ ಪಕ್ಷಿರಾಜನಾದ ಜಟಾಯುವು ನನ್ನನ್ನು ಬಿಡಿಸಿ ರಕ್ಷಿಸಬೇಕೆಂದು ಬರಲು ಆತನನ್ನು ಸಂಹರಿಸಿದೆ ಎಲ್ಲೆ ದುರುಳ ವೃದ್ಧನಾದ ಜಟಾಯುವನ್ನು ಕೊಂದಾಗಲೇ ನಿನ್ನ ಪರಾಕ್ರಮವನ್ನರಿತನು. ನೀನು ನನ್ನ ಪತಿಯಾದ ಶ್ರೀರಾಮನ ಎದುರಿನಲ್ಲಿ ನಿಂತು ಯುದ್ಧವನ್ನು ಮಾಡಿ ಆತನನ್ನು ಜಯಿಸಿ ನನ್ನನ್ನು ತಂದವನಲ್ಲ. ಲೋಕದಲ್ಲಿ ಅತಿನಿಂದ್ಯವಾದ ಚೋರವೃತ್ತಿಯನ್ನಾಶ್ರಯಿಸಿ ಲಜ್ಜೆಯಿಲ್ಲದಿದ್ದೀಯೆ. ಪುರುಷನಿಲ್ಲದ ಸಮಯದಲ್ಲಿ ಪರಸ್ತ್ರೀಯನ್ನು ಅಪಹರಿಸಿದನೆಂದು ನಿನ್ನನ್ನು ಲೋಕದಲ್ಲಿ ನಿಂದಿಸುವರು ನಿನ್ನ ಪೌರುಷವನ್ನೂ ನಿನ್ನ ಧೈರ್ಯವನ್ನೂ ಸುಡು. ನನ್ನೊಡನೆ ಹೇಳಿಕೊಂಡ ನಿನ್ನ ಪರಾಕ್ರಮವನ್ನು ಸುಡಬೇಕು. ನೀನು ಇಂಥ ಆಕೃತ್ಯವನ್ನು ಮಾಡಿ ನಿನ್ನ ವಂಶಕ್ಕೆ ಅಪಕೀರ್ತಿಯನ್ನು ತಂದುಕೊಂಡೆ. ನೀನು ರಾಜಕುಮಾರರಾದ ರಾಮಲಕ್ಷ್ಮಣರ ದೃಷ್ಟಿಗೆ ಗೋಚರನಾದಪಕ್ಷದಲ್ಲಿ ನಿನ್ನ ಸಮಸ್ತ ಸೇನೆಯೊಡನೆ ಕೂಡಿದ್ದರೂ ಒಂದು ಕ್ಷಣಮಾತ್ರವೂ ಜೀವಸಹಿತವಾಗಿರಲಾರೆ. ವನಮಧ್ಯದಲ್ಲಿ ಕಾಡುಗಿಚ್ಚಿನ ಜ್ವಾಲೆಗೆ ಸಿಕ್ಕಿದ ಪಕ್ಷಿಯಂತೆ ನೀನು ರಾಮಲಕ್ಷ್ಮಣರ ಶರಾಗ್ನಿ ಜ್ವಾಲೆಯನ್ನು ತಾಳಲಾರೆ. ನನ್ನ ಮಾತನ್ನು ಹಿತವೆಂದು ವಿಚಾರಿಸಿ ನನ್ನನ್ನು ಬಿಡು. ಅಲ್ಲದ ಪಕ್ಷದಲ್ಲಿ ನನ್ನ ನಿಮಿತ್ತವಾಗಿ ಕೋಪಹುಟ್ಟಿದರೆ ಲಕ್ಷ್ಮಣಸಮೇತನಾದ ಶ್ರೀರಾಮನು ನಿನ್ನನ್ನು ಯಮಲೋಕವನ್ನೈದಿಸದೆ ಸುಮ್ಮನಿರನು.

ದೇವೇಂದ್ರನಿಗೆ ಸಮಾನನೆನಿಸಿದ ನನ್ನ ಪತಿಯಾದ ಶ್ರೀರಾಮನನ್ನು ಕಾಣದಿದ್ದರೆ ನಾನು ಬದುಕುವವಳಲ್ಲ. ನಿನಗೆ ಶ್ರೇಯಸ್ಸಾಗಬೇಕೆಂದೂ ಬಹುಕಾಲ ಬದುಕಿರಬೇಕೆಂದೂ ನಿನಗೆ ಇಚ್ಛೆಯಿಲ್ಲವೆಂದು ತೋರುತ್ತದೆ.

**ಮುಂದುವರಿಯುವುದು...**

# ಸಾರಿಗೆ ಇಲಾಖೆಯ ಸೇವೆ ಆನ್‌ಲೈನ್‌ನಲ್ಲಿದ್ದರೂ ಮಧ್ಯವರ್ತಿಗಳ ಮೊರೆ

• **ಉದಯವಾಹಿನಿ, ಬೆಂಗಳೂರು**



'ಸಾರಿಗೆ ಇಲಾಖೆಯ 31 ಸೇವೆಗಳನ್ನು ಆನ್‌ಲೈನ್ ಮಾಡಿದ್ದರೂ ಆ ಬಗ್ಗೆ ಅರಿವಿಲ್ಲದ ಸಾರ್ವಜನಿಕರು ತಮ್ಮ ಕೆಲಸಗಳಿಗೆ ಮಧ್ಯವರ್ತಿಗಳು, ಏಜೆಂಟ್‌ಗಳನ್ನು ಸಂಪರ್ಕಿಸುತ್ತಿದ್ದಾರೆ. ಇದು ಇಲಾಖೆಯ ಘನತೆಗೆ ಧಕ್ಕೆ ತರುತ್ತಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬೇಸರ ವ್ಯಕ್ತಪಡಿಸಿದರು. ಗುರುವಾರ ನಡೆದ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇಲಾಖೆಯ ಪ್ರಗತಿಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಆನ್‌ಲೈನ್ ಸೇವೆಗಳ ಮಾಹಿತಿಯನ್ನು ಕಚೇರಿಗಳ ನೋಟಿಸ್ ಬೋರ್ಡ್‌ಗಳಲ್ಲಿ ಹಾಕಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಏಜೆಂಟ್‌ಗಳನ್ನು ಸಂಪರ್ಕಿಸಬೇಡಿ ಎಂದು ಫಲಕ ಪ್ರದರ್ಶಿಸಬೇಕು. 'ಸಹಾಯ ಮೇಜು' ಸ್ಥಾಪಿಸಿ ಸರದಿಯಲ್ಲಿ ಸಿಬ್ಬಂದಿಯನ್ನು ನಿಯೋಜಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅನಧಿಕೃತ ವ್ಯಕ್ತಿಗಳು ಏಜೆಂಟ್‌ಗಳು ಕಚೇರಿಯ ಒಳಗೆ ಬಾರದಂತೆ ತಡೆಗಟ್ಟಬೇಕು. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

ಹೊಸ ನೋಂದಣಿ ಅರ್ಜಿಗಳು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಬಾಕಿಯಾಗಿರುವುದು ಕಂಡು ಬಂದಿದೆ. ಕೂಡಲೇ ವಿಲೇವಾರಿ ಮಾಡಬೇಕು. ತಾಂತ್ರಿಕ ದೋಷಗಳನ್ನು ಸರಿಪಡಿಸಿಕೊಂಡು ನ.30ರ ಒಳಗೆ ಶೇ 100ರಷ್ಟು ವಿಲೇ ಮಾಡಬೇಕು ಎಂದು ಸೂಚನೆ ನೀಡಿದರು.

ವಾಹನಗಳ ನೋಂದಣಿ ಪ್ರಮಾಣಪತ್ರ ಮತ್ತು ಚಾಲನಾ ದೃಢೀಕರಣ ಸ್ಮಾರ್ಟ್ ಕಾರ್ಡ್‌ಗಳನ್ನು ಸಕಾಲದಲ್ಲಿ ವಿತರಿಸಬೇಕು. ನಂಬರ್ ಪ್ಲೇಟ್ ಅಥವಾ ವಾಹನಗಳ ಮೇಲೆ ಬೇರೆ ಬೇರೆ ಚಿಹ್ನೆ, ಲಾಂಛನ, ಪದನಾಮಗಳನ್ನು ನಮೂದಿಸಿದ್ದರೆ ಅಂಥ ವಾಹನಗಳ ಮಾಲೀಕರ ಮೇಲೆ ಕ್ರಮ ಕೈಗೊಳ್ಳಬೇಕು. ಕರ್ನಾಟಕದಲ್ಲಿ ನೋಂದಣಿ ಮಾಡಿಕೊಳ್ಳದೇ ತೆರಿಗೆ ವಂಚಿಸುತ್ತಿರುವ ವಾಹನಗಳನ್ನು ವಶಪಡಿಸಿಕೊಳ್ಳಬೇಕು ಎಂದು ಹೇಳಿದರು.

**7451 ಕೋಟಿ ರಾಜಸ್ವ ಸಂಗ್ರಹ**


**2025-26ನೇ ಸಾಲಿನಲ್ಲಿ ರೂ. 14457.73 ಕೋಟಿ ರಾಜಸ್ವ ಸಂಗ್ರಹಿಸುವ ಗುರಿಯನ್ನು ರಾಜ್ಯ ಸರ್ಕಾರವು ಸಾರಿಗೆ ಇಲಾಖೆಗೆ ನಿಗದಿಪಡಿಸಿದ್ದು ಏಳು ತಿಂಗಳಲ್ಲಿ ರೂ. 7451.45 ಕೋಟಿ ಸಂಗ್ರಹವಾಗಿದೆ ಎಂದು ಸಾರಿಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಕಳೆದ ವರ್ಷ ಅಕ್ಟೋಬರ್ ಅಂತ್ಯಕ್ಕೆ ಹೋಲಿಸಿದರೆ ಈ ಬಾರಿ ಅಕ್ಟೋಬರ್ ಅಂತ್ಯಕ್ಕೆ ರೂ.505 ಕೋಟಿ ಅಧಿಕ ಮೊತ್ತದ ರಾಜಸ್ವ ಸಂಗ್ರಹವಾಗಿದೆ. 2026ರ ಮಾರ್ಚ್ ಅಂತ್ಯದ ಒಳಗೆ ನಿಗದಿಪಡಿಸಿರುವ ಗುರಿ ಸಾಧಿಸಲಾಗುವುದು ಎಂದು ಅವರು ವಿವರಿಸಿದರು.**

# ಪಂಡಿತ್ ಜವಾಹರ್ ಲಾಲ್ ನೆಹರುರವರ 136ನೇ ವರ್ಷದ ಜನ್ಮಜಯಂತಿ

ಕಲಾ ಸಾಹಿತ್ಯ



**ಕೃಷ್ಣಪ್ಪ ಲೇಖಕರು**
**ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು**



ಪಂಡಿತ್ ಜವಾಹರ್ ಲಾಲ್ ನೆಹರೂಜಿಯವರು 1889 ನವಂಬರ್ 14 ರಂದು ತಂದೆ ಮೋತಿಲಾಲ್ ನೆಹರು ಮತ್ತು ತಾಯಿ ಸ್ವರೂಪರಾಣಿರವರ ಮಗನಾಗಿ ಜನಿಸುತ್ತಾರೆ.

ಚಿಕ್ಕವಯಸ್ಸಿನಿಂದ ಸಂಸ್ಕಾರಗಳ ಜೊತೆಗೆ ಉನ್ನತ-ಗುಣಮಟ್ಟದ ಶಿಕ್ಷಣವನ್ನು ದೇಶ-ವಿದೇಶಗಳಲ್ಲಿ ಪಡೆದರು. ತಂದೆ ಜೊತೆಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿರುವಾಗ, 1919ರಲ್ಲಿ ಪಂಜಾಬಿನ ಜಲಿಯನ್ ವಾಲ್ ಬಾಗ್ ನಲ್ಲಿ ಬ್ರಿಟೀಷರು ನಡೆಸಿದ ಪೈಶಾಚಿಕ ಹತ್ಯಾಕಾಂಡ ವನ್ನು ವಿರೋಧಿಸಿ,ಅದರಿಂದ ಪ್ರಭಾವಿತರಾಗಿ ಗಾಂಧೀಜಿ ಮೊದಲುಗೊಂಡು ಇತರೆ ನಾಯಕರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅನೇಕ ಸಲ ಸೆರೆಮನೆವಾಸ ಅನುಭವಿಸಿದರು. ನಂತರ ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದರು. ನೆಹರುರವರು ಕಮಲ ರೊಂದಿಗೆ ವಿವಾಹ ವಾಗುತ್ತಾರೆ ಇವರಿಗೆ ಏಕೈಕ ಪುತ್ರಿ ಇಂದಿರಾ ಗಾಂಧಿ.

**1955 ರಲ್ಲಿ ನೆಹರುರವರಿಗೆ ಭಾರತ ಸರ್ಕಾರಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ನೆಹರೂರವರು 1964 ಮೇ 27 ರಂದು ತನ್ನ 75ನೇ ವಯಸ್ಸಿನಲ್ಲಿ ವಯೋ ಸಹಜದಿಂದ ನಿಧನರಾದರು. ನೆಹರೂರವರು ಭಾರತದ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಹುಟ್ಟುಹಬ್ಬದ ದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸಬೇಕೆಂದು ಅವರ ಆತ್ಮಕಥೆಯಲ್ಲಿ ಪ್ರತಿ ಬಿಂಬಿಸಿರುತ್ತಾರೆ.**

ಕಮಲಾರವರ ಆರೋಗ್ಯ ಹದಗೆಟ್ಟು ಗುಣಮುಖರಾಗದೇ 1936 ರಲ್ಲಿ ತೀರಿಕೊಂಡರು.ಆಗ ನೆಹರುರವರಿಗೆ 47 ವರ್ಷ ವಯಸ್ಸಾಗಿತ್ತು. 1929 ರಲ್ಲಿ ಕಾಂಗ್ರೇಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರು. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಎಲ್ಲಾ ಮುಖಂಡರ ಜೊತೆಯಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯ ಹೋರಾಟದ ಫಲದಿಂದಾಗಿ,1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಸ್ವಾತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ತನ್ನ 58 ನೇ ವಯಸ್ಸಿನಲ್ಲಿ ಆಯ್ಕೆಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಇವರು ಒಬ್ಬ ದಕ್ಷ ಆಡಳಿತಗಾರರು, ಬುದ್ಧಿಶಾಲಿ, ಕ್ರಿಯಾಶಾಲಿ, ತೀಕ್ಷ್ಣ ವಿಚಾರಮತಿಗಳಾಗಿದ್ದು ,ವೈಜ್ಞಾನಿಕ, ಸೈದ್ಧಾಂತಿಕ, ವೈಚಾರಿಕ, ಇತಿಹಾಸ ಪ್ರಜ್ಞೆ ಉಳ್ಳವರಾಗಿ ಜಾಗತಿಕ ದೃಷ್ಟಿಕೋನ ಹೊಂದಿದ್ದ ಪ್ರತಿಭಾವಂತ ರಾಜಕಾರಣಿಯಾಗಿದ್ದರು.

ನೆಹರು ಅವರು ತಮ್ಮ ನೇರನುಡಿ,ದೂರದೃಷ್ಟಿ, ದಿಟ್ಟತನ, ಅಪಾರ ದೇಶಭಕ್ತಿ,ಜನ ಸಾಮಾನ್ಯರ ಕಲ್ಯಾಣಕ್ಕಾಗಿ ಕೈಗೊಂಡ ರಚನಾತ್ಮಕ ಕಾರ್ಯಗಳಿಂದಾಗಿ ಭಾರತೀಯ ಜನಮಾನಸದಲ್ಲಿ ಶಾಶ್ವತವಾಗಿ ಸ್ಥಾನಗಳಿಸಿದ್ದಾರೆ. ಭಾರತದ ಪ್ರಧಾನಮಂತ್ರಿಯಾಗಿ 17 ವರ್ಷಗಳ ಕಾಲ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ಮುನ್ನೆಡೆಸಿದರು. ಆದ್ದರಿಂದ ರಾಷ್ಟ್ರಾದ್ಯಂತ ಇಂದು ನೆಹರುರವರ 135ನೇ ವರ್ಷದ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವುದು ನಮ್ಮೆಲ್ಲರ ಸೌಭಾಗ್ಯ. ಇಂದಿನ ಮಕ್ಕಳು ಮುಂದಿನ ಭವಿಷ್ಯದ ಪ್ರಜೆಗಳು. ಮಕ್ಕಳ ಭವಿಷ್ಯ ಉಜ್ವಲವಾಗಲಿ, ಪ್ರಕಾಶಮಾನವಾಗಲಿ ಹಾಗೂ ರಾಷ್ಟ್ರದ ಶಕ್ತಿಯಾಗಿ ಬೆಳಗಲಿ ಎಂದು ಆಶಿಸೋಣ.

# ವಿಜಯಪುರದ ಜೀವನಾಡಿ ಕೃಷ್ಣೆ, ಭೀಮೆ ನೀರು ಕಲುಷಿತ

## ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಆಘಾತಕಾರಿ ವರದಿ, ಜೀವಜಲ ಮಲಿನಗೊಳ್ಳಲು ಮರುಳುಗಾರಿಕೆ ದಂಧೆಯೂ ಕಾರಣ

• ಉದಯವಾಹಿನಿ, ಇಂಡಿ

ಜಿಲ್ಲೆಯ ಜೀವನಾಡಿ ಭೀಮಾ ಮತ್ತು ಕೃಷ್ಣಾ ನದಿ ನೀರು ಕಲುಷಿತ ಎಂಬ ಅಂಶ ಪರೀಕ್ಷೆಯಿಂದ ದೃಢಪಟ್ಟಿದೆ. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿ ಈ ಆಘಾತಕಾರಿ ವಿಷಯವನ್ನು ಬಹಿರಂಗಪಡಿಸಿದೆ. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಡೆಸಿದ ಜಲ ಪರೀಕ್ಷೆಯಿಂದ ಕೃಷ್ಣಾ, ಭೀಮಾ ನೀರು 'ಸಿ' ದರ್ಜೆಯಲ್ಲಿವೆ ಎನ್ನುವುದು ದೃಢವಾಗಿದೆ. ಕಾರ್ಖಾನೆಗಳ ಕಲ್ಮಶ, ಜನರು ಬಳಸಿ ಬಿಡುವ ಮಲಿನ ನೀರು, ಚರಂಡಿ ನೀರು ಹಳ್ಳ ಕೊಳ್ಳಗಳ ಮೂಲಕ ಭೀಮಾ ನದಿಗೆ, ಅಲ್ಲಿಂದ ಕೃಷ್ಣಾ ನದಿಗೆ ಸೇರ್ಪಡೆಯಾಗುತ್ತಿದೆ. ಈ ಎರಡೂ ನದಿಗಳು ಕಲುಷಿತಗೊಂಡಿದ್ದು, ಅವುಗಳಲ್ಲಿಹರಿಯುವ ಜೀವಜಲ 'ಸಿ' ದರ್ಜೆಗೆ ಸೇರಿದೆ. ನದಿ ನೀರು ಶುದ್ಧೀಕರಣ ಮಾಡಿಯೇ ಕುಡಿಯಬೇಕು, ಇಲ್ಲದಿದ್ದರೆ ಅನಾರೋಗ್ಯ ಖಚಿತ ಎಂಬ ಅಂಶ ವರದಿಯಿಂದ ಹೊರಬಿದ್ದಿದೆ. ನದಿ ನೀರು ನೋಡಲು ತಿಳಿಯಾಗಿ ಕಂಡರೂ ಅಗೋಚರವಾದ ಕಲ್ಮಶ ಜನರ ದೇಹ ಸೇರುತ್ತಿದೆ. ನದಿ ನೀರು ಫಿಲ್ಟರ್ ಮಾಡಿ ಸರಬರಾಜು ಮಾಡುತ್ತಿದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ ಪ್ರಜ್ಞಾವಂತ ಜನರಲ್ಲಿಭಯ ಹುಟ್ಟಿಸಿದೆ. ಜೀವನದಿಗಳಿಗೆ ವಿಷಪ್ರಾಶನ ಆಗದಂತೆ ಸರಕಾರ, ಸಮಾಜ ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

■ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಡೆಸಿದ ಜಲ ಪರೀಕ್ಷೆಯಿಂದ ಕೃಷ್ಣಾ, ಭೀಮಾ ನೀರು 'ಸಿ' ದರ್ಜೆಯಲ್ಲಿವೆ

■ ನದಿ ನೀರು ನೋಡಲು ತಿಳಿಯಾಗಿ ಕಂಡರೂ ಅಗೋಚರವಾದ ಕಲ್ಮಶ ಜನರ ದೇಹ ಸೇರುತ್ತಿದೆ


ಉದಯವಾಹಿನಿ ಚಿತ್ರ

**ಮರುಳುಗಾರಿಕೆ ಕಾರಣ?:** ಭೀಮಾ ನದಿ ಜೀವಜಲ ಮಲಿನಗೊಳ್ಳಲು ಮರುಳುಗಾರಿಕೆ ದಂಧೆಯೂ ಪ್ರಮುಖ ಕಾರಣವಾಗಿದೆ. ಅತಿಯಾದ ಮರಳುಗಾರಿಕೆಯಿಂದ ನದಿಯಲ್ಲಿ ಜಲಚರ ಪ್ರಾಣಿಗಳು ವಾಸ ಮಾಡುತ್ತಿಲ್ಲ. ಹೀಗಾಗಿ ನೀರಿನಲ್ಲಿರುವ ಕಲ್ಮಶ ಅಲ್ಲಿಯೇ ಉಳಿದುಕೊಳ್ಳುತ್ತಿದೆ. ಮರುಳುಗಾರಿಕೆ ದಂಧೆಯಿಂದಾಗಿ ಅಲ್ಲಲ್ಲಿ ಮರಳು ಗುಂಡಿಗಳು ತಲೆ ಎತ್ತುತ್ತಿವೆ. ನದಿ ಭರ್ತಿಯಾದಾಗ ನೀರಲ್ಲಿಯ ತ್ಯಾಜ್ಯ ಗುಂಡಿಗಳಲ್ಲಿ ಶೇಖರಣೆ ಆಗುತ್ತದೆ. ಹೀಗಾಗಿ ನೀರು ಅಶುದ್ಧವಾಗುತ್ತಿದೆ ಎನ್ನುತ್ತಾರೆ ಭೀಮಾ ನದಿ ಪಾತ್ರದ ಜನತೆ.

**ಉಪನದಿಗಳು ಕಂಟಕ:** ಭೀಮಾ ನದಿಗೆ ಉಪನದಿಗಳೇ ಕಂಟಕವಾಗಿವೆ. ಸೀನಾ, ವೀರಭಟಕರ ನೀರು ಭೀಮೆ ಮಡಿಲು ಸೇರುತ್ತದೆ. ಈಗಾಗಲೇ ಸೀನಾ ನದಿ ನೀರು ಸಹ ಯೋಗ್ಯವಲ್ಲಎಂಬ ವರದಿಯಾಗಿದೆ. ಸೀನಾ, ವೀರಭಟಕರ ನದಿಗೆ ಸುತ್ತಲಿನ ಗ್ರಾಮಗಳ ಒಳಚರಂಡಿ ನೀರು ಹಾಗೂ ಸಿಮೆಂಟ್ ಕಾರ್ಖಾನೆಗಳ ತ್ಯಾಜ್ಯ ಸೇರುತ್ತಿದೆ.

> ಭೀಮಾ ನದಿ ನೀರನ್ನು ಪ್ರತಿ ತಿಂಗಳು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಕೆಲವೊಮ್ಮೆ 'ಬಿ' ದರ್ಜೆ, ಇನ್ನೊಮ್ಮೆ 'ಸಿ' ದರ್ಜೆ ಎನ್ನುವ ಅಂಶ ಪರೀಕ್ಷಾ ವರದಿಯಲ್ಲಿ ಬರುತ್ತಿದೆ. ಮಳೆಗಾಲದ ಸೀಸನ್ ಇರುವುದರಿಂದ ನೀರಿನಲ್ಲಿಕಲುಷಿತ ಪ್ರಮಾಣ ಹೆಚ್ಚಾಗಿ 'ಸಿ' ದರ್ಜೆ ಬಂದಿರಬಹುದು.
>
> -ವಿವೇಕ್, ಉಪ ಪರಿಸರ ಮಾಲಿನ್ಯ ಅಧಿಕಾರಿ

**ಶುದ್ಧೀಕರಿಸದೆ ಕುಡಿದರೆ ಅನಾರೋಗ್ಯ**

**ವಿಜಯಪುರ ಜಿಲ್ಲೆಯ ಜೀವನಾಡಿಗಳಾದ ಕೃಷ್ಣಾ ಮತ್ತು ಭೀಮಾ ನದಿಗಳು ಕಲುಷಿತಗೊಂಡಿರುವುದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯಿಂದ ದೃಢಪಟ್ಟಿದೆ, ಅಲ್ಲದೆ ಶುದ್ಧೀಕರಿಸದೆ ನೀರು ನೇರವಾಗಿ ಕುಡಿದರೆ ಅನಾರೋಗ್ಯ ಖಚಿತ ಎಂಬಂತಾಗಿದೆ.. ಕಾರ್ಖಾನೆಗಳ ತ್ಯಾಜ್ಯ, ಚರಂಡಿ ನೀರು, ಮತ್ತು ಅತಿಯಾದ ಮರಳುಗಾರಿಕೆಯಿಂದ ನದಿ ನೀರು 'ಸಿ' ದರ್ಜೆಗೆ ಇಳಿದಿದೆ**

ಅಲ್ಲದೆ, ಧಾರ್ಮಿಕ ಕ್ಷೇತ್ರ ಪಂಢರಪುರ ಸೇರಿ ಇತರೆ ಕ್ಷೇತ್ರಗಳ ಸ್ಥಳಗಳ ಬಳಿ ನದಿಯಲ್ಲಿ ಸ್ನಾನ ಮಾಡುವ ಭಕ್ತರ ಬಟ್ಟೆ, ಪ್ಲಾಸ್ಟಿಕ್ ಸೇರಿ ನಾನಾ ವಸ್ತುಗಳನ್ನು ನೀರಿಗೆ ಎಸೆಯಲಾಗುತ್ತಿದೆ. ಭಾರಿ ಪ್ರಮಾಣದಲ್ಲಿ ಕಲುಷಿತಗೊಳ್ಳುವ ಉಪನದಿಗಳಿಂದ ಭೀಮೆ ಮಲಿನಗೊಳ್ಳಲು ಪ್ರಮುಖ ಕಾರಣ ಎನ್ನಲಾಗಿದೆ.

ಕೃಷ್ಣಾ ಕಾಲುವೆಯಲ್ಲಿ ಪ್ರಾಣಿಗಳ ಕಳೇಬರ ಎಸೆಯಲಾಗುತ್ತಿದೆ. ಈ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ನಡೆಯಬೇಕು ಎಂಬುದು ಪ್ರಜ್ಞಾವಂತ ನಾಗರಿಕರ ಕಳಕಳಿಯಾಗಿದೆ.

## ಸಿದ್ದಸಿರಿ ಕಾರ್ಖಾನೆ 3400ರೂ.ಬೆಂಬಲ ಬೆಲೆ ನೀಡಲು: ಆಗ್ರಹ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ, ಕಾಳಗಿ ತಾಲ್ಲೂಕಿನ ಕಬ್ಬು ಬೆಳೆಗಾರರ ರೈತರಿಗೆ ಸಿದ್ದಸಿರಿ ಎಥೆನಾಲ್ ಕಾರ್ಖಾನೆಯ ಮಾಲಿಕ ಬಸನಗೌಡ ಪಾಟೀಲ ಯತ್ನಾಳ ಎಲ್ಲಾ ಕಾರ್ಖಾನೆಗಳಿಂದ 100ರೂ.ಹೆಚ್ಚು ಕೊಡುತ್ತೇನೆಂದು ಹೇಳಿದ್ದು ಅದರಂತೆ ರಾಜ್ಯ ಸರ್ಕಾರ ಘೋಷಿಸಿದ 3300ರೂ.ಜತೆ 100ರೂ.ಹೆಚ್ಚುವರಿ ಸೇರಿ 3400ರೂ.ಬೆಂಬಲ ಬೆಲೆ ಕಬ್ಬು ಬೆಳೆಗಾರ ರೈತರಿಗೆ ನೀಡಿ ಯತ್ನಾಳ ಕೊಟ್ಟ ಮಾತು ಉಳಿಸಿಕೊಳ್ಳಬೇಕು ಎಂದು ತಾಲ್ಲೂಕಾ ರೈತ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಅಬ್ದುಲ್ ಬಾಷೀದ್ ಆಗ್ರಹಿಸಿದರು.

ಪಟ್ಟಣದಲ್ಲಿ ತಾಲ್ಲೂಕಾ ರೈತ ಹಿತರಕ್ಷಣಾ ವೇದಿಕೆ ವತಿಯಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,ಬೆಳಗಾವಿ ಭಾಗಗಳಲ್ಲಿ ರೈತ ಮುಖಂಡರು ನಡೆಸಿದ ಪ್ರತಿಭಟನೆ ಅನುಗುಣವಾಗಿ ಸರ್ಕಾರ 3300ರೂ.ಕಬ್ಬು ಬೆಳೆಗಾರರ ರೈತರಿಗೆ ಬೆಂಬಲ ಬೆಲೆ ಘೋಷಿಸಿದೆ,ಆದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ 06ಸಕ್ಕರೆ ಕಾರ್ಖಾನೆಗಳಿದ್ದು ಸರ್ಕಾರ ಘೋಷಿಸಿದ 3300ರೂ.ಬೆಂಬಲ ಬೆಲೆ ನೀಡದೆ ರೈತರಿಗೆ ವಂಚನೆ ಮಾಡುತ್ತಿದೆ,ಹಾಗೂ ಸ್ಥಳೀಯ ಕಾರ್ಖಾನೆ ಚಿಂಚೋಳಿಯ ಸಿದ್ದಸಿರಿ ಎಥೆನಾಲ್ ಪವ್ವರ ಘಟಕವು ಚಿಂಚೋಳಿ-ಕಾಳಗಿ ತಾಲ್ಲೂಕಿನ ರೈತರಿಗೆ ಪ್ರತಿಟನ್ ಕಬ್ಬಿಗೆ 3400ರೂ.ಜೋತೆ 100ರೂ.ಸೇರಿಸಿ 3400 ನೀಡಬೇಕು, ಸಿದ್ದಸಿರಿ ಕಾರ್ಖಾನೆ ಮಾಲಿಕ ಬಸನಗೌಡ ಪಾಟೀಲ ಯತ್ನಾಳ ಎಲ್ಲಾ ಕಾರ್ಖಾನೆಕ್ಕಿಂತ 100ರೂ. ಹೆಚ್ಚುವರಿಯಾಗಿ ನೀಡುತ್ತೇನೆ ರಾಜಕೀಯ ಮಾಡುವವರು ಕಾರ್ಖಾನೆ ಹೊರಗೆ ಮೆಟ್ಟಿಲು ಬಿಟ್ಟು ಬರಬೇಕು ಎಂದು ಕಾರ್ಖಾನೆ ಉದ್ಘಾಟನೆ ಕಾರ್ಯಕ್ರಮ ವೇದಿಕೆಯಲ್ಲಿ ಹೇಳಿದ್ದು ಅದರಂತೆ ಯತ್ನಾಳರು ಕೊಟ್ಟ ಮಾತು ಉಳಿಸಿಕೊಳ್ಳಲು ಕಬ್ಬು ಬೆಳೆಗಾರರ ರೈತರಿಗೆ 3400ರೂ.ಕೊಡಲೇಬೇಕು.

ಈಗಾಗಲೇ ಹೆಚ್ಚು ಮಳೆಗಾಲ ಆಗಿರುವುದರಿಂದ ರೈತರ ಕಬ್ಬು ಇಳುವರಿ ಕಡಿಮೆ ಬರುತ್ತಿದ್ದು ರೈತರು ಸಂಕಷ್ಟ ಎದುರಾಗಿದೆ ಕಾರಣ ರೈತರಿಗೆ ಬೆಂಬಲ ಬೆಲೆ ನೀಡಿ ರೈತರ ಕಬ್ಬು ತೂಕದಲ್ಲಿ ಮೋಸ ಮಾಡುತ್ತಿದ್ದು ತೂಕವನ್ನು ಕಾರ್ಖಾನೆ ಬಾಗಿಲಲ್ಲೇ ಹಾಕಿ ತೂಕವನ್ನು ಮಾಡಿ ವಾಹನ ಒಳಗೆ ಪ್ರವೇಶ ಮಾಡಬೇಕು ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ, ಕಬ್ಬು ಕಟಾವು ಸಂದರ್ಭದಲ್ಲಿ ಕಬ್ಬು ಕಟಾವು ಕಾರ್ಮಿಕರು ರೈತರಿಗೆ ತೊಂದರೆ ಕೊಡುತ್ತಿದ್ದು ಅದನ್ನು ತಡೆಗಟ್ಟಬೇಕು, ರಾಜ್ಯಾದ್ಯಂತ ಕಬ್ಬು ಬೆಳೆಗಾರರ ರೈತರಿಗೆ 3300ರೂ.ಬೆಂಬಲ ಬೆಲೆ ಕೊಡಬೇಕು.

ಯತ್ನಾಳ ಕೊಟ್ಟ ಮಾತು ಉಳಿಸಿಕೊಳ್ಳಲು ಚಿಂಚೋಳಿ-ಕಾಳಗಿ ರೈತರಿಗೆ 3400ರೂ.ಬೆಂಬಲ ಬೆಲೆ ಕೊಡಬೇಕು, ಇಲ್ಲಾದಿದ್ದರೆ ಯತ್ನಾಳಗೆ ಎರಡು ನಾಲಿಗೆಯಿವೆ ಎಂದು ರೈತರು ತಿಳಿದುಕೊಳ್ಳುತ್ತಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಲಕ್ಷ್ಮಣ ಆವುಂಟಿ, ಶ್ರೀನಿವಾಸ್ ಬಂಡಿ, ಶಂಕರ ಭೋಗವಂತಿ, ನಾಗೇಶ ಗುಣಾಜೀ, ನಾರಾಯಣ ಗುಣಾಜೀ, ಅನೀಲಕುಮಾರ ಹುಡದಳ್ಳಿ, ಶಿವರಾಜಪಾಟೀಲ, ಮೈನೋದ್ದೀನ್, ಹಾಫೀಜ್ ಅಬ್ದುಲ್ ಹಮೀದ್, ಕಿರಣ ಮಡಿವಾಳ ಅನೇಕರಿದ್ದರು.

## ಪ್ರತಿಯೊಬ್ಬ ನಾಗರೀಕರಿಗೂ ಇರಲಿ ಇತಿಹಾಸ ಪ್ರಜ್ಞೆ

• ಉದಯವಾಹಿನಿ, ಚಿತ್ರದುರ್ಗ

ಪ್ರತಿಯೊಬ್ಬ ನಾಗರೀಕನಿಗೂ ನಮ್ಮ ಇತಿಹಾಸದ ಪ್ರಜ್ಞೆ ತುಂಬಾ ಮುಖ್ಯ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ ಹೇಳಿದರು.

ನಗರದ ತರಳಬಾಳು ಆಂಗ್ಲಮಾಧ್ಯಮಶಾಲೆಯಲ್ಲಿ ಗುರುವಾರ ಮೈಸೂರು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳ ಜಿಲ್ಲಾಮಟ್ಟದ ಪ್ರಾಚ್ಯಪ್ರಜ್ಞೆ ಸ್ಪರ್ಧೆಗಳ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಕರ್ನಾಟಕವು ಸುಪ್ರಸಿದ್ಧ ಶಿಲ್ಪಕಲೆಯನ್ನು ಹೊಂದಿದ್ದು, ಚಿತ್ರದುರ್ಗ ಕೋಟೆ, ಹಂಪಿಯ ಸ್ಮಾರಕಗಳ ನಿರ್ಮಾಣದಲ್ಲಿ ಜಲಪೂರಣ, ರಾಜ್ಯವು ವಿಭಿನ್ನ ಉಡುಪು, ವಿಭಿನ್ನ ಭಾಷಾಶೈಲಿ, ಆಹಾರ ಪದ್ಧತಿಯಲ್ಲಿ ವಿಭಿನ್ನತೆಯನ್ನು ವಿವರಿಸಿದರು. ಸಮಾಜ ವಿಜ್ಞಾನ ಪರಿವೀಕ್ಷಕ ಹಾಗೂ ನೋಡಲ್ ಅಧಿಕಾರಿ ಕೆ.ಜೆ.ಪ್ರಶಾಂತ್ ಮಾತನಾಡಿ, ನಮ್ಮ ಇತಿಹಾಸ ನಮ್ಮ ಹೆಮ್ಮೆ, ನಮ್ಮ ರಾಜ್ಯ ಇತಿಹಾಸ ಪ್ರಸಿದ್ಧ ವಾಸ್ತುಶಿಲ್ಪ ಶೈಲಿಗಳನ್ನು ವಿವರಿಸಿ, ವಿದ್ಯಾರ್ಥಿಗಳಲ್ಲಿ ಇತಿಹಾಸ ಪ್ರಜ್ಞೆ, ಆಸಕ್ತಿ ಈಗಿನಿಂದಲೇ ರೂಢಿಸಿಕೊಳ್ಳವುದು ಈ ಕಾರ್ಯಕ್ರಮದ ಉದ್ದೇಶ ಎಂದು ಹೇಳಿದರು.

ಜಿಲ್ಲೆಯಿಂದ ಆಗಮಿಸಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ, ಭಾಷಣ, ರಸಪ್ರಶ್ನೆ, ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಯಿತು. ವಿಜೇತರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ವಿಷಯ ಪರಿವೀಕ್ಷಕರಾದ ನಿತ್ಯಾನಂದ, ರಂಗಾನಾಯ್ಕ್, ಡಯಟ್ ಉಪನ್ಯಾಸಕ ಬಸವರಾಜ್, ಕ್ಷೇತ್ರ ಸಮನ್ವಯಾಧಿಕಾರಿ ಸಂಪತ್, ಚಿತ್ರಕಲಾ ಶಿಕ್ಷಕ ದಾದಾಪೀರ್ ಇದ್ದರು.


ಉದಯವಾಹಿನಿ ಚಿತ್ರ

## ಕ್ರೀಡೆ ಜೀವನದ ಅವಿಭಾಜ್ಯ ಅಂಗವಾಗಿರಲಿ

• ಉದಯವಾಹಿನಿ, ಗದಗ

ಕ್ರೀಡೆ ಜೀವನದ ಅವಿಭಾಜ್ಯ ಅಂಗವಾಗಿರಲಿ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ನುಡಿದರು. ಗದಗ ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಉಪನಿರ್ದೇಶಕರ ಕಚೇರಿ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ನಗರದ ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣ ದಲ್ಲಿ ಏರ್ಪಡಿಸಿದ್ದ ಪ್ರಸಕ್ತ ಸಾಲಿನ ಜಿಲ್ಲಾ ಮಟ್ಟದ 14 ಮತ್ತು 17 ವಯೋಮಿತಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲಕ, ಬಾಲಕಿಯರ ಮೇಲಾಟಗಳ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಮಾನಸಿಕ ಹಾಗೂ ದೈಹಿಕವಾಗಿ ಹೆಚ್ಚು ಚಟುವಟಿಕೆಯಿಂದ ಬಾಲ್ಯದ ಜೀವನ ಕೂಡಿರಬೇಕು. ಆಗ ಮಾತ್ರವೇ ಸದೃಢ ಹಾಗೂ ಆತ್ಮವಿಶ್ವಾಸ ಬೆಳವಣಿಗೆ ಸಾಧ್ಯ ಎಂದು ಅಭಿಪ್ರಾಯ ಪಟ್ಟರು. ಕ್ರೀಡಾ ಸೌಲಭ್ಯ ಜಿಲ್ಲೆಯಲ್ಲಿ ಉತ್ತಮವಾಗಿದೆ ಇವುಗಳನ್ನು ಬಳಸಿಕೊಂಡು ಕ್ರೀಡಾ ಸಾಧನೆ ಮಾಡಲು ಕರೆ ನೀಡಿದರು. ಜಿಲ್ಲೆಯಲ್ಲಿ ಇರುವ ಕ್ರೀಡಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವದು ಸಹ ಉತ್ತಮ ನಡೆ. ಕ್ರೀಡೆಯಲ್ಲಿ ಸದಾ ಪಾಲ್ಗೊಳ್ಳಿ, ಸೋಲು ಗೆಲವು ಇದ್ದೇ ಇರುತ್ತದೆ. ಶಕ್ತಿ, ಶಿಸ್ತು, ಉತ್ಸಾಹ ಹಾಗೂ ಆತ್ಮ ವಿಶ್ವಾಸದ ಪ್ರತೀಕವಾಗಿರುವ ಅಥ್ಲೆಟಿಕ್ ಕ್ರೀಡಾ ಕೂಟದಲ್ಲಿ ಪಾಲ್ಗೊಳ್ಳುವುದೇ ಪ್ರಮುಖ ಎಂದರು. ಕ್ರೀಡೆಯೆಂದರೆ ಕೇವಲ ಗೆಲುವು ಸೋಲಿನ ವ್ಯವಹಾರವಲ್ಲ. ಅದು ವ್ಯಕ್ತಿಯ ವಿಕಾಸದ ಪಾಠಶಾಲೆ, ಶಿಸ್ತಿನ ಪಾಠಪುಸ್ತಕ ಮತ್ತು ಸಹಕಾರದ ಪಥ್ಯ. ಅಥ್ಲೆಟಿಕ್ ಕ್ರೀಡೆಗಳು ನಮ್ಮ ದೈಹಿಕ ಸಾಮರ್ಥ್ಯ ಅಷ್ಟೇ ಅಲ್ಲ. ಮನೋಬಲ ಮತ್ತು ಧೈರ್ಯವನ್ನು ಪರೀಕ್ಷಿಸುತ್ತವೆ ಎಂದು ಅಭಿಪ್ರಾಯಪಟ್ಟರು. ಇಂತಹ ಜಿಲ್ಲಾ ಮಟ್ಟದ ಸ್ಪರ್ಧೆಗಳು ನಮ್ಮ ಯುವ ಪ್ರತಿಭೆಗಳಿಗೆ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ವೇದಿಕೆಗಳತ್ತ ಹೆಜ್ಜೆ ಇಡುವ ದಿಕ್ಕು ತೋರಿಸುತ್ತವೆ. ಕ್ರೀಡಾಂಗಣದಲ್ಲಿ ಪಾದಾರ್ಪಣೆ ಮಾಡುವ ಪ್ರತಿಯೊಬ್ಬ ಕ್ರೀಡಾಪಟು ಗೆಲುವಿಗಿಂತ ಮಿಗಿಲಾಗಿ ಪ್ರಯತ್ನದ ಸಾರ್ಥಕತೆಯನ್ನು ಪ್ರದರ್ಶಿಸಲು ಬಂದಿದ್ದೇವೆ ಎಂದು ತಿಳಿದು ಕ್ರೀಡಾ ಸ್ಪೂರ್ತಿ ಮೆರೆಯಬೇಕು. ಗೆಲ್ಲುವುದು ಗೌರವ ಆದರೆ ಪಾಲ್ಗೊಳ್ಳುವುದು ಪ್ರೇರಣೆ ಎಂಬ ಮಾತು ತಾವೆಲ್ಲರೂ ಸಕ್ರಿಯವಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳುವ ಮೂಲಕ ದೃಢಪಡಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ್ ಹೇಳಿದರು. ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್‌ಎಸ್ ಬುರಡಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿ ಈ ಜಿಲ್ಲಾ ಮಟ್ಟದ ಕ್ರೀಡಾಕೂಟವು ಎಲ್ಲರಲ್ಲಿ ಹೊಸ ಶಕ್ತಿ ಉತ್ಸಾಹ ಕ್ರೀಡಾ ಮನೋಭಾವ ತುಂಬಲಿ ಎಂಬ ಆಶಯದೊಂದಿಗೆ ಆಯೋಜಿಸಲಾಗಿದೆ. ಇಲ್ಲಿ ಪಾಲ್ಗೊಳ್ಳುವ ಎಲ್ಲಾ ವಿದ್ಯಾರ್ಥಿಗಳು ನಮ್ಮವರೇ. ಸೋಲು ಗೆಲುವುಗಳನ್ನು ಸಮವಾಗಿ ಸ್ವೀಕರಿಸಿ ಕ್ರೀಡಾ ಕೂಟಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಬೇಕು. ಜಿಲ್ಲೆಯ ಎಲ್ಲಾ ಕ್ರೀಡಾಪಟುಗಳಿಗೂ ಶುಭ ಹಾರೈಸಿದ ಅವರು ತೀರ್ಪುದಾರರು ಆಯೋಜಕರು ಸರಿಯಾಗಿ ತೀರ್ಪು ನೀಡುವ ಮೂಲಕ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವಂತೆ ತಿಳಿಸಿದರು.


ಉದಯವಾಹಿನಿ ಚಿತ್ರ

## ನ.20ಕ್ಕೆ ಗಣಿ ಕಾರ್ಮಿಕರ ಸಮ್ಮೇಳನ

• ಉದಯವಾಹಿನಿ, ಬಳ್ಳಾರಿ

ಗಣಿ ಕಾರ್ಮಿಕರಿಗೆ ಸೇವಾ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಗೆ ಹೋರಾಟ ರೂಪಿಸುವ ಹಿನ್ನಲೆಯಲ್ಲಿಜಿಲ್ಲೆಯ ಸಂಡೂರು ಪಟ್ಟದ ಅಂಬೇಡ್ಕರ್ ಭವನದಲ್ಲಿ ನ.20 ರಂದು ಎಐಯುಟಿಯುಸಿಗೆ ಸಂಯೋಜನೆಗೊಂಡ ಸಂಯುಕ್ತ ಗಣಿ ಕಾರ್ಮಿಕರ ಸಂಘದಿಂದ ಗಣಿ ಕಾರ್ಮಿಕರ ಸಮ್ಮೇಳನ ಹಮ್ಮಿಕೊಂಡಿದೆ.

ಈ ಸಮ್ಮೇಳನ ಕುರಿತು ಗುರುವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿದ ಸಂಯುಕ್ತ ಗಣಿ ಕಾರ್ಮಿಕರ ಸಂಘದ ಉಪಾಧ್ಯಕ್ಷ ಎ.ದೇವದಾಸ್. ಸಂಡೂರು, ಬಳ್ಳಾರಿ ಹಾಗೂ ಹೊಸಪೇಟೆಯ ಗಣಿ ಕಾರ್ಮಿಕರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಸಮ್ಮೇಳನದ ಸಭೆಯ ಮುನ್ನ ಬೃಹತ್ ಮೆರವಣಿಗೆಯು ಸಂಡೂರಿನ ಎಪಿಎಂಸಿಯಿಂದ ಪ್ರಾರಂಭವಾಗಿ ಸಮ್ಮೇಳನ ಸ್ಥಳಕ್ಕೆ ಆಗಮಿಸಲಿದೆ.

ಈ ಸಮ್ಮೇಳನದಲ್ಲಿ ಗಣಿ ಕಾರ್ಮಿಕರ ಸಮಸ್ಯೆ, ಪರಿಹಾರಗಳ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ. ಗಣಿ ಕಾರ್ಮಿಕರನ್ನು ಖಾಯಂಗೊಳಿಸಬೇಕು, ಅಲ್ಲಿಯವರೆಗೂ ಸೇವಾ ಭದ್ರತೆ ನೀಡುತ್ತಾ, ಗುತ್ತಿಗೆದಾರರು ಬದಲಾದರೂ ಈಗ ಇರುವ ಗುತ್ತಿಗೆ ಕಾರ್ಮಿಕರೇ ಕೆಲಸದಲ್ಲಿ ಮುಂದುವರೆಯಬೇಕು, ಖಾಯಂ ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸೂಕ್ತ ಕಾನೂನು ರೂಪಿಸಬೇಕು, ಕನಿಷ್ಠ ವೇತನ, ರಜೆ, ಬೋನಸ್, ಪಿಎಫ್ ಮುಂತಾದ ಕಾನೂನುಬದ್ಧ ಸೌಲಭ್ಯಗಳನ್ನು ಖಾತ್ರಿಪಡಿಸಬೇಕು .

ಗಣಿಬಾಧಿತ ಈ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಸುಸಜ್ಜಿತ ವೆಲ್‌ಫೇರ್ ಆಸ್ಪತ್ರೆ ಮತ್ತೆ ಆರಂಭಿಸಬೇಕು, ಕೆ.ಎಂ.ಇ.ಆರ್.ಸಿ ಫಂಡ್ ನಿಂದ ಕೆಲಸ ಕಳೆದುಕೊಂಡ ಗಣಿ ಕಾರ್ಮಿಕರ ಜೀವನೋಪಾಯಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂಬುದಾಗಿದೆ.

ಸಮ್ಮೇಳನಕ್ಕೆ ಮುಖ್ಯ ಭಾಷಣಕಾರರಾಗಿ ಸಂಯುಕ್ತ ಗಣಿ ಕಾರ್ಮಿಕ ಸಂಘದ ಅಧ್ಯಕ್ಷರ ಕೆ.ಸೋಮಶೇಖರ್, ಭಾಷಣಕಾರರಾಗಿ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ.ಸೋಮಶೇಖರ್ ಯಾದಗಿರಿ, ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್.ಎನ್ ಆಗಮಿಸಲಿದ್ದಾರೆ. ಪ್ರಾಸ್ತಾವಿಕವಾಗಿ ಸಂಯುಕ್ತ ಗಣಿ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯದರ್ಶಿ ಸೋಮಶೇಖರ ಗೌಡ ಮಾತನಾಡಲಿದ್ದಾರೆಂದು ಹೇಳಿದರು.

## ಭಯದ ವಾತಾವರಣ ಮೂಡಿಸುತ್ತಿರುವ ಕಂಪನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ

• ಉದಯವಾಹಿನಿ, ಸೈದಾಪುರ


ಉದಯವಾಹಿನಿ ಚಿತ್ರ

ಕಡೇಚೂರು ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿರುವ ಸೂರಜ್ ಲ್ಯಾಬೋರೇಟರಿ ಕಂಪನಿಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ಸಂಭವಿಸಿದ ಸ್ಫೋಟ ದಿಂದ ಇಲ್ಲಿನ ಜನರಿಗೆ ಭಯಮೂಡಿಸಿದೆ. ನಿರ್ಲಕ್ಷ್ಯ ವಹಿಸಿದ ಕೆಮಿಕಲ್ ಕಂಪನಿ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳುವಂತೆ ಕರವೇ ಕಾರ್ಯಕರ್ತರು ಪೋಲಿಸ್ ರಿಗೆ ದೂರು ನೀಡಿದ್ದಾರೆ.

ಸಮೀಪದ ಕಡೆಚೂರು ಬಾಡಿಯಾಳ ಕೈಗಾರಿಕಾ ವಲಯದಲ್ಲಿರುವ ಸೂರಜ್ ಲ್ಯಾಬರೋಟರಿಸ್ ಪ್ರೈವೇಟ್ ಕೆಮಿಕಲ್ ಕಂಪನಿಯಲ್ಲಿ ರಿಯಾಕ್ಟರ್ ಹೊಡೆದು ಬ್ಲಾಸ್ಟ್ ಆಗಿ ಸುಮಾರು ಎರಡು ಅಂತಸ್ತಿನ ಕಟ್ಟಡದ ಗೋಡೆಗಳು ಧ್ವಂಸಗೊಂಡಿದೆ ದೃಶ್ಯಾವಳಿಗಳನ್ನು ನೋಡಿದರೆ ಭಾರಿ ಅನಾಹುತ ಆಗಿದೆ ಎಂಬುವುದನ್ನು ಸಾರುತ್ತಿದೆ ಗೋಡೆಗಳು ಛಿದ್ರವಾಗಿವೆ. ಬೇಕಾ ಬಿಟ್ಟಿಯಾಗಿ ಗೋಡೆಗಳು ಶೀತಿಲಗೊಂಡಿವೆ. ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅವಘಾತಗಳಾಗಿ ಮುಖಗಳಿಗೆ ಕೈಕಾಲುಗಳಿಗೆ ಗಾಯಗಳಾಗಿವೆ ಹಾಗೂ ಇನ್ನುಳಿದ ಕಾರ್ಮಿಕರಿಗೆ ಸಮಸ್ಯೆಯಾಗಿದೆ ಎಂದು ತಿಳಿದು ಬಂದಿರುತ್ತದೆ, ಮತ್ತು ಪತ್ರಕೆಗಳಲ್ಲಿ ಸುದ್ದಿಯಾಗಿರುತ್ತದೆ ವಾಸ್ತವ ಸ್ಥಿತಿ ಹಿಗಿದ್ದರು ಸಹ ಮಾಲಿನ್ಯ ನಿಯಂತ್ರಣ ಮಂಡಳಿ, ಕಾಖಾರ್ನೆಗಳು ಕೈಗಾರಿಕಾ ಸುರಕ್ಷೆ, ಪೋಲಿಸ್ ಇಲಾಖೆ ಸೇರಿದಂತೆ ಸಂಬಂಧಪಟ್ಟ ಅಧಿಕಾರಗಳು ಯಾವುದೇ ಕ್ರಮ ಕೈಗೊಳ್ಳದೆ ಇರುವುದು ನೋಡಿದರೆ ಪ್ರಕರಣ ಮುಚ್ಚಿಹಾಕಲು ಹುನ್ನಾರ ನಡೆದಿದೆ ಎಂಬುವುದು ನೇರವಾಗಿ ಮೇಲ್ನೋಟಕ್ಕೆ ಕಂಡುಬರುತ್ತಿದೆ. ಗಾಯಾಳುಗಳಿಗೆ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಪಡೆದುಕೊಂಡರು ಸಹ ಪೋಲಿಸ ಇಲಾಖೆಗೆ ದೂರು ನೀಡಿ ಗಾಯಾಳುಗಳಿಗೆ ಯಾವುದೇ ರೀತಿ ಎಮ್‌ಎಲ್‌ಸಿ ಮಾಡಿರುವುದಿಲ್ಲ ಈ ಬಗ್ಗೆ ಕಂಪನಿಯವರು ಯಾವುದೇ ಸಮಸ್ಯೆ ಆಗಿಲ್ಲ ಎಂದು ಹೇಳಿಕೆ ನಿಡಿದ್ದಾರೆ ಈ ಹೇಳಿಕೆ ಅನುಮಾನಾಸ್ಪದವಾಗಿದೆ, ಆದರೆ ಸಿ.ಸಿ ಕ್ಯಾಮಾರ ಪೂಟೇಜ್ ನೀಡದೆ ಮುಚ್ಚಿ ಹಾಕುತ್ತಿದ್ದಾರೆ. ಸಾವು ನೋವು ಆಗಿರುವ ಬಗ್ಗೆ ಶಂಕೆ ಇರುವುದರಿಂದ ತನಿಖೆ ಮಾಡುವುದ ಅಗತ್ಯವಾಗಿದೆ ತಕ್ಷಣ ಸಂಬಂಧಪಟ್ಟವರು ಸೋಮೋಟೋ ಪ್ರಕರಣ ದಾಖಲಿಸಿ ತನಿಖೆ ನಡಿಸಬೇಕು, ಘಟನೆಯ ನೈಜ ಸತ್ಯ ಹೊರಬರಬೇಕು ಘಟನೆ ನಡೆದು ನಾಲ್ಕು ದಿನಗಳಾದರು ಪ್ರಕರಣ ದಾಖಲಿಸದೆ ಇರುವುದು ನಾಚಿಕೆಗೇಡು ಸಂಗತಿಯಾಗಿದೆ, ಸೂರಜ್ ಲ್ಯಾಬರೋಟರಿಸ್ ಪ್ರೈವೇಟ್ ಕೆಮಿಕಲ್ ಕಂಪನಿಯ ಮಾಲೀಕರಿಗೆ ಹಾಗೂ ಸಂಬಂಧಪಟ್ಟವರ ಮೇಲೆ ಕಾನೂನ ಕ್ರಮ ಜರುಗಿಸಿ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ಸಂಪೂರ್ಣ ವಿವರಗಳನ್ನು ಪೋಲಿಸ್ ಇಲಾಖೆ ತೆಗೆದುಕೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡು ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಪ್ರಾಮಾಣಿಕವಾಗಿ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದಾರೆ. ಒಂದು ವೇಳೆ ವಿಳಂಬವಾದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸೈದಾಪುರ ಹೋಬಳಿ ಘಟಕದ ವತಿಯಿಂದ ಸಂಬಂಧಪಟ್ಟ ಕಛೇರಿಯನ್ನು ಮುತ್ತಿಗೆ ಹಾಕಿ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.


# ಮೈ ನಡುಗಿಸುವ ಚಳಿಗೆ ಗಿರಿನಾಡ ಜನ ಹೈರಾಣ

## 25 ರಿಂದ 18 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದ ಕನಿಷ್ಠ ತಾಪಮಾನ, ಮನೆಯಿಂದ ಹೊರ ಬರಲು ಜನ ಹಿಂದೇಟು

• ಉದಯವಾಹಿನಿ, ಯಾದಗಿರಿ

ಜಿಲ್ಲೆಯಲ್ಲಿ ನಿಧಾನವಾಗಿ ಚಳಿ ಹೆಚ್ಚಾಗುತ್ತಿದೆ. ಗಿರಿನಾಡು ಜಿಲ್ಲೆಯಲ್ಲಿ ಕಳೆದೊಂದು ವಾರದಿಂದ ತಾಪಮಾನ ಕಡಿಮೆಯಾಗುತ್ತಾ ಸಾಗಿದೆ. ಬೆಂಕಿಯಂತಹ ಬಿಸಿಲಿಗೆ ಅಂಜದ ಜನರು ಇದೀಗ ಮೈ ನಡುಗಿಸುವ ಚಳಿಗೆ ಜನ ಮನೆಯಿಂದ ಹೊರ ಬರಲು ಹಿಂದೇಟು ಹಾಕುವಂತೆ ಮಾಡಿದೆ. ಅದರಲ್ಲೂ ಬೆಳಗಿನ ಜಾವ, ರಾತ್ರಿ ವೇಳೆ ಹೆಚ್ಚಿನ ಚಳಿ ಅನುಭವವಾಗುತ್ತಿದೆ. ಹೆಚ್ಚಿನ ಚಳಿಯ ಎಫೆಕ್ಟ್‌ನಿಂದಾಗಿ ಜನತೆ ಬೆಳಗ್ಗೆ ಮನೆಯಿಂದ ಹೊರ ಬರುತ್ತಿಲ್ಲ. ನ.3ರಂದು ಗರಿಷ್ಠ ತಾಪಮಾನ 34 ರಿಂದ 35 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 25 ರಿಂದ 26 ಡಿಗ್ರಿ ಸೆಲ್ಸಿಯಸ್ ಇತ್ತು. ಆದರೆ, ಕಳೆದ ಮೂರು ದಿನಗಳಿಂದ ಗರಿಷ್ಠ ತಾಪಮಾನ 33 ರಿಂದ 31 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ತಾಪಮಾನ 22 ರಿಂದ 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ.

ತಾಪಮಾನ ಗರಿಷ್ಠ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ ತಾಪಮಾನ 18 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಚಳಿಗಾಲದ ಆರಂಭದಲ್ಲೇ ಹೆಚ್ಚಿನ ಚಳಿಯ ಕಾರಣದಿಂದ ಬೆಳಗಿನ ಜಾವ ಹಾಗೂ ಸಂಜೆ ವೇಳೆ ಮಂಜು ಆವರಿಸುತ್ತಿದೆ. ಎಲ್ಲೆಡೆ ಚಳಿ ಹೆಚ್ಚಾದ ಪರಿಣಾಮ ಜನರು ತಮ್ಮ ದೇಹ ಬಿಸಿಯಾಗಿಟ್ಟುಕೊಳ್ಳು ಬಿಸಿ ಬಿಸಿ ತಿಂಡಿ, ಚಹಾ, ಕಾಫಿ ಸೇವನೆ ಮಾಡುವಂತಾಗಿದೆ. ನಗರದ ಜಿಲ್ಲಾ ಕ್ರೀಡಾಂಗಣ, ರೈಲ್ವೆ ನಿಲ್ದಾಣ, ಲುಂಬಿನಿ ವನದಲ್ಲಿ ವಾಕಿಂಗ್ ಬರುವವರ ಸಂಖ್ಯೆ ಇಳಿಮುಖವಾಗಿದೆ. ಯೋಗಾಸನ, ವ್ಯಾಯಾಮ ಮಾಡಲು ಬರುವವರು ಸೂರ್ಯ ಮೂಡಿದ ನಂತರವೂ ಕಡಿಮೆ ಸಂಖ್ಯೆಯಲ್ಲಿಕಾಣುತ್ತಿದ್ದಾರೆ. ಅದರಲ್ಲೂ ಹಾಲು, ಪತ್ರಿಕೆ ಹಾಕುವವರು ಸ್ವೆಟರ್ ಹಾಕಿಕೊಂಡೇ ತಮ್ಮ ಕಾರ್ಯ ಮುಂದುವರಿಸುತ್ತಿದ್ದಾರೆ. ಚಳಿಯ ಹೊಡೆತಕ್ಕೆ ಬಿಡಾಡಿ ಜಾನುವಾರುಗಳು, ನಾಯಿಗಳು ಸೇರಿ ವಿವಿಧ ಪ್ರಾಣಿಗಳು ಎಲ್ಲೆಂದರಲ್ಲಿ ಮುದುಡಿಕೊಳ್ಳುತ್ತಿರುವುದು ಕಾಣುತ್ತಿದೆ. ರಾತ್ರಿಯಿಂದ ಬೆಳಗಿನವರೆಗೆ ಚಳಿ ಜನತೆ ಹೊರಗಡೆ ಹೋಗಲು ಹಿಂಜರಿಯುವಂತೆ ಮಾಡಿದೆ. ರಾತ್ರಿ ಸಾಧ್ಯವಾದಷ್ಟು ಬೇಗನೆ ಮನೆ ಸೇರುವಂತಹ ಪರಿಸ್ಥಿತಿಯಿದೆ. ನಸುಕು ಕಳೆದು ಬೆಳಗ್ಗೆಯಾದರೂ ಚಳಿ ಕಡಿಮೆಯಾಗಲ್ಲ. ಹೀಗಾಗಿ ನಸುಕಿನಲ್ಲೇ ವಾಕಿಂಗ್ ಹೋಗುವವರು ಕೂಡ ಬೆಳಗಾದರೂ ಆಮೇಲೆ ಹೋದರಾಯಿತು ಬಿಡು ಎಂದುಕೊಂಡು ಹಾಸಿಗೆ ಹೊದ್ದು ಮಲಗುತ್ತಿದ್ದಾರೆ. ನಿತ್ಯ ವಾಕಿಂಗ್ ಮಾಡುವವರ ಸಂಖ್ಯೆಯೂ ಕೊಂಚ ಕಡಿಮೆ ಕಂಡುಬರುತ್ತಿದೆ. ಬೆಳಗ್ಗೆ 5ರಿಂದ 5.30ಕ್ಕೆ ವಾಕಿಂಗ್ ಬರುವವರು 7 ಗಂಟೆಯಾದರೂ ಹಿಂಜರಿಕೆಯಿಂದಲೇ ವಾಕಿಂಗ್ ಬರುತ್ತಿದ್ದಾರೆ. ಗಿರಿ ಜಿಲ್ಲೆಯ ಜನರು ಬೇಸಿಗೆಯಲ್ಲಿ43 ಹಾಗೂ 44 ಡಿಗ್ರಿ ಸೆಲ್ಸಿಯಸ್ ಬಿಸಿಲಿನ ತಾಪಮಾನಕ್ಕೆ ಹೆದರದೆ ಮನೆಯಿಂದ ಹೊರ ಬರುತ್ತಿದ್ದರು. ಆದರೀಗ,ಮೈ ಕೊರೆಯುವ ಚಳಿಗೆ ಮನೆಯಿಂದ ಹೊರ ಬರಲು ಹೆದರುವಂತಾಗಿದೆ.


ಉದಯವಾಹಿನಿ ಚಿತ್ರ

> ಚಳಿಗಾಲ ಆರಂಭವಾಗಿರುವುದರಿಂದ ಜನರು ಬಿಸಿ ನೀರು ಕುಡಿಯಬೇಕು, ಬೆಚ್ಚನೆಯ ಬಟ್ಟೆ ಧರಿಸಬೇಕು. ಜತೆಗೆ, ಸಾಧ್ಯವಾದಷ್ಟು ಮದ್ಯಪಾನ ಹಾಗೂ ಧೂಮಪಾನ ಕೂಡ ಕಡಿಮೆ ಮಾಡಬೇಕು. ಮಕ್ಕಳಿಗೆ ಹಾಗೂ ಹಿರಿಯರಿಗೆ ತೊಂದರೆಯಾಗಲಿದೆ. ವಾಕಿಂಗ್ ಹೋಗುವುದು ಕೂಡ ಕಡಿಮೆ ಮಾಡಬೇಕು. ಬೆಳಗ್ಗೆ 7ರ ನಂತರವೇ ವಾಕಿಂಗ್ ಹೋಗುವುದು ಉತ್ತಮ.
>
> -ಡಾ.ಮಹೇಶ ಬಿರಾದಾರ, ಜಿಲ್ಲಾಆರೋಗ್ಯ, ಕುಟುಂಬ ಕಲ್ಯಾಣ ಅಧಿಕಾರಿ

**ಚಳಿಯಿಂದ ಬರಲಿದೆ ಆರೋಗ್ಯ ತೊಂದರೆ**

**ಚಳಿಗಾಲದಲ್ಲಿ ಸಾಮಾನ್ಯವಾಗಿ ರೋಗ ನಿರೋಧಕ ಶಕ್ತಿ ಕಡಿಮೆಯಾಗಲಿದೆ. ಚರ್ಮರೋಗ ಹಾಗೂ ನ್ಯೂಮೋನಿಯಾ ಸಮಸ್ಯೆಯೂ ಕಂಡುಬರಲಿದೆ. ಚಳಿಯ ಕಾರಣದಿಂದ ಕೆಲವೊಮ್ಮೆ ಹೃದಯಾಘಾತವೂ ಸಂಭವಿಸುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಎಚ್ಚರಿಸಿದ್ದಾರೆ. ತಂಪನೆಯ ವಾತಾವರಣದಿಂದ ಅಸ್ತಮಾ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ವೃದ್ಧರು, ಮಕ್ಕಳು, ನವಜಾತ ಶಿಶುಗಳಿಗೆ ಚಳಿ ತಡೆಯಲಾಗುತ್ತಿಲ್ಲ. ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಶೀತ, ಕೆಮ್ಮು, ಜ್ವರ ಕಂಡುಬರುತ್ತಿದ್ದು, ಮಕ್ಕಳ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬರುವವರ ಸಂಖ್ಯೆ ಹೆಚ್ಚಾಗುತ್ತಿದೆ.**

**ಆರೋಗ್ಯದ ಮೇಲಿರಲಿ ನಿಗಾ:** ಇದೀಗ ವ್ಯಾಪಕ ಚಳಿ ಹಿನ್ನಲೆ ಜನರ ಆರೋಗ್ಯದ ಮೇಲೂ ಪರಿಣಾಮ ಬೀರಲಿದೆ. ಹೀಗಾಗಿ ಅಧಿಕ ರಕ್ತದೊತ್ತಡ, ರಕ್ತ ಹೀನತೆ, ಮಧುಮೇಹಿ ರೋಗಿಗಳು ಚಳಿಗಾಲದ ವೇಳೆ ತುಸು ಎಚ್ಚರವಾಗಿರಬೇಕು. ಸ್ವಲ್ಪ ಆರೋಗ್ಯದಲ್ಲಿಏರುಪೇರಾದರೆ ತಕ್ಷಣವೇ ಸಮೀಪದ ವೈದ್ಯರನ್ನು ಸಂಪರ್ಕಿಸಬೇಕು. ಯಾವುದೇ ಕಾರಣಕ್ಕೂ ಮಕ್ಕಳು, ವೃದ್ಧರನ್ನು ಬೆಳಗ್ಗೆ,ಸಂಜೆ ವೇಳೆ ವಾಕಿಂಗ್ ಕಳುಹಿಸಬೇಡಿ. ಹೆಚ್ಚಾಗಿ ಬಿಸಿ ಆಹಾರ ಸೇವಿಸಿದರೆ ಆರೋಗ್ಯಕ್ಕೆ ಒಳ್ಳೆಯದು. ಐಸ್‌ಕ್ರೀಂ , ಕೋಲ್ಡ್ ವಾಟರ್, ಕೋಲ್ಡ್ ಡ್ರಿಂಕ್ಸ್ ಸೇವನೆಯಿಂದ ದೂರವಿರುವುದು ಆರೋಗ್ಯ ಉತ್ತಮ ಎನ್ನುತ್ತಾರೆ ವೈದ್ಯರು.

## ಮಿನಿ ನ್ಯೂಸ್

### ಇಂದಿರಾ ಕ್ಯಾಂಟಿನ ಲೋಕಾರ್ಪಣೆ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ಬಡವರಿಗೆ, ಕೂಲಿಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಆಹಾರ ದೊರಕಿಸುವ ಉದ್ದೇಶದಿಂದ ಸರ್ಕಾರ ಈ ಇಂದಿರಾ ಕ್ಯಾಂಟಿನ್ ಆರಂಭಿಸಿದೆ. ಇಲ್ಲಿ ಗುಣಮಟ್ಟದ ಆಹಾರ, ಸ್ವಚ್ಚತೆ ಕಾಪಾಡಬೇಕು ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು. ಪಟ್ಟಣದ ಹಳೇ ತಹಶೀಲ್ದಾರ ಕಛೇರಿ ಆವರಣದ ಹತ್ತಿರ ಜಿಲ್ಲಾಡಳಿತ, ಪಪಂ ಸಂಯೋಗದೊಂದಿಗೆ ಹಮ್ಮಿಕೊಂಡಿದ್ದ ಇಂದಿರಾ ಕ್ಯಾಂಟಿನ್ ಲೋಕಾರ್ಪಣೆ, ನಗರೋತ್ಥಾನ ಹಂತ 4ನೇ ಅನುದಾನದಡಿಯಲ್ಲಿ ವಿಕಲಚೇತನರಿಗೆ ವಾಹನ ಹಾಗೂ ಹೊಲಿಗೆಯಂತ್ರ ವಿತರಣೆ, ಕೊಳಗೇರಿ ಅಭಿವೃದ್ಧಿ ಮಂಡಳ ವತಿಯಿಂದ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಿತ್ತೂರು ಹಾಗೂ ಎಂಕೆ.ಹುಬ್ಬಳ್ಳಿ ಪಟ್ಟಣಗಳಲ್ಲಿ ಬಹು ದಿನಗಳ ಇಂದಿರಾ ಕ್ಯಾಂಟಿನ್ ಬೇಡಿಕೆಯಿತ್ತು. ಇಂದು ಈ ಎರಡು ಪಟ್ಟಣಗಳಲ್ಲಿ ಉದ್ಘಾಟನೆಯಾಗಿದ್ದು ಸಂತಸ ತಂದಿದೆ. ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಹಂತ-ಹಂತವಾಗಿ ಅನುಷ್ಠಾನಕ್ಕೆ ತರಲಾಗಿದೆ. ಮತ್ತು ಇನ್ನೂ ಕೆಲವೇ ದಿನಗಳಲ್ಲಿ ತಾಲ್ಲೂಕಾ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಪೂಜೆ ನೇರವೇರಲಿದೆ ಎಂದರು.

### ನ. 16 ರಂದು ಸಂಸ್ಥಾಪನಾ ದಿನಾಚರಣೆ

• ಉದಯವಾಹಿನಿ, ಲಕ್ಷ್ಮೇಶ್ವರ

ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೇಂಕಪ್ಪ ಎಂ ಅಗಡಿ ಅಭಿಯಾಂತ್ರಿಕ, ತಾಂತ್ರಿಕ ಕಾಲೇಜಿನ 22 ನೇ ವರ್ಷದ ಸಂಸ್ಥಾಪನಾ ದಿನಾಚರಣೆಯನ್ನು ನ. 16 ರಂದು ರವಿವಾರ 11 ಗಂಟೆಗೆ ಕಾಲೇಜಿನ ಆವರಣದಲ್ಲಿ ಜರುಗಲಿದೆ ಎಂದು ಕಾಲೇಜಿನ ಪ್ರಾಚಾರ್ಯರಾದ ಪರಶುರಾಮ ಬಾರ್ಕಿ ಹೇಳಿದರು. ಅವರು ಕಾಲೇಜಿನ ಸಭಾಂಗಣದಲ್ಲಿ ಕರೆಯಲಾಗಿದ್ದ, ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ ಸಂಸ್ಥಾಪನಾ ದಿನಾಚರಣೆಗೆ ಮುಖ್ಯ ಅಥಿತಿಯಾಗಿ ಯುಎಸ್‌ಎ ದ ಜಾರ್ಜಿಯಾ ನಗರದ ಗೋಕರೆ ಲಾಫರ್ಮ, ಎಲ್ ಪಿ ಓ ಪ್ರೈ. ಲಿಮಿಟೆಡ್ ಸಂಸ್ಥಾಪಕರು ಮತ್ತು ವ್ಯವಸ್ಥಾಪಕ ಪಾಲುದಾರರುಆದ ಮಂಜುನಾಥ ಗೋಕರೆ ಆಗಮಿಸಲಿದ್ದಾರೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು, ವ್ಯವಸ್ಥಾಪಕ ದರ್ಮದರ್ಶಿಗಳಾದ ಹರ್ಷವರ್ಧನ ವಿ ಅಗಡಿ ಅಧ್ಯಕ್ಷತೆ ವಹಿಸಲಿದ್ದು, ಉಪಾಧ್ಯಕ್ಷರಾದ ಗೀತಾ ಎಚ್ ಅಗಡಿ ಸೇರಿದಂತೆ ಆಡಳಿತ ಮಂಡಳಿಯ ನಿರ್ದೇಶಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

### ಶಾಸಕ ನಾಡಗೌಡರಿಗೆ ಸಚಿವ ಸ್ಥಾನ ನೀಡಲು ಒತ್ತಾಯ

• ಉದಯವಾಹಿನಿ, ತಾಳಿಕೋಟೆ

ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಸಿ.ಎಸ್.ನಾಡ ಗೌಡ ಅವರಿಗೆ ಸಚೀವ ಸಂಪುಟ ವಿಸ್ತರಣೆಯಲ್ಲಿ ಕ್ಯಾಬಿನೇಟ್ ದರ್ಜೆ ಸಚೀವ ಸ್ಥಾನವನ್ನು ನೀಡಬೇಕೆಂದು ಕಾಂಗ್ರೇಸ್ ಪಕ್ಷದ ಯುವ ಮುಖಂಡ ಶಾಂತಗೌಡ ಕೇಸರಭಾವಿ ಸಿಎಂ ಸಿದ್ದರಾಮಯ್ಯನವರಿಗೆ ಒತ್ತಾಯಿಸಿದರು. ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು ಶಾಸಕ ಸಿ.ಎಸ್.ನಾಡಗೌಡ ಅವರು ಕಟ್ಟಾ ಕಾಂಗ್ರೇಸ್ಸಿಗರಾಗಿದ್ದಾರೆ ಮುದ್ದೇಬಿಹಾಳ ಮತಕ್ಷೇತ್ರದಲ್ಲಿ 6 ಭಾರಿ ಕಾಂಗ್ರೇಸ್ ಪಕ್ಷದ ಶಾಸಕರಾಗಿ, ಈ ಹಿಂದೆ ಕಾರ್ಮಿಕ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಈ ಹಿಂದೆ ವಿಧಾನ ಸಭಾ ಚುನಾವಣಾ ಪ್ರಚಾರಕ್ಕಾಗಿ ಆಗಮಿಸಿದ್ದ ಸಿಎಂ ಸಿದ್ದರಾಮಯ್ಯನವರು ಈ ಭಾರಿ ಕಾಂಗ್ರೇಸ್ ಸರ್ಕಾರ ರಚನೆಯಾದಲ್ಲಿ ನಾಡಗೌಡರಿಗೆ ಕ್ಯಾಬಿನೇಟ್ ದರ್ಜೆಯ ಉನ್ನತ ಸಚಿವ ಸ್ಥಾನ ನೀಡುವದಾಗಿ ಮತದಾರರಿಗೆ ಆಶ್ವಾಸನೆಯನ್ನು ನೀಡಿದ್ದರು. ಈ ಸಲ ಸಂಪುಟ ವಿಸ್ತರಣೆ ಸಮಯದಲ್ಲಿ ಶಾಸಕ ಸಿ.ಎಸ್.ನಾಡಗೌಡ ಅವರಿಗೆ ಸಚಿವ ಸ್ಥಾನ ಒದಗಿಸಿ ಈ ಭಾಗದ ಜನರ ಆಸೆಯನ್ನು ಇಡೇರಿಸಲು ಮುಂದಾಗಬೇಕೆಂದು ಕಾಂಗ್ರೇಸ್ ಪಕ್ಷದ ಯುವ ಮುಖಂಡ ಶಾಂತಗೌಡ ಕೇಸರಭಾವಿ ಸಿಎಂ ಮನವಿ ಮಾಡಿದ್ದಾರೆ.

### ಮಳೆಗೆ ಹಾಳಾದ ರಸ್ತೆಗಳ ದುರಸ್ತಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಡಚಣ

ಕರ್ನಾಟಕದಲ್ಲಿ ಈ ಬಾರಿ ಅತಿ ಹೆಚ್ಚು ಮಳೆ ಆದಕಾರಣ ಚಡಚಣ ಪಟ್ಟಣದಲ್ಲಿ ಹಲವು ರಸ್ತೆಗಳು ಹಾಳಾಗಿವೆ. ಸುಮಾರು ರಸ್ತೆಗಳು ತಗ್ಗು ದಿಣ್ಣೆ ಬಿದ್ದು ಹಾಳಾಗಿವೆ. ತುಂಬಾ ಜನರಿಗೆ ವಾಹನ ಚಾಲಕರಿಗೆ ಹೋಗಿ ಬರುವದಕ್ಕೆ ತುಂಬಾ ತೊಂದರೆ ಆಗುತ್ತ ಇದೆ. ಆದ ಕಾರಣ ಅದನ್ನು ಕಂಡ ಸ್ಥಳೀಯ ಚಡಚಡ ಪಟ್ಟಣ ಪಂಚಾಯಿತಿಯ ಸದಸ್ಯರು ಕೆಲವು ಕಡೆ ರಿಪೇರಿ ಮಾಡಿಸುತ್ತಿದ್ದಾರೆ. ಆದಷ್ಟು ಬೇಗ ಎಲ್ಲಾ ರಸ್ತೆಗಳು ಸರಿಪಡಿಸುವ ಪ್ರಯತ್ನ ಪಡುತ್ತೇವೆ ಎಂದು ಪಟ್ಟಣ ಪಂಚಾಯಿತಿ ಸದಸ್ಯರು ಮಾಧ್ಯಮದವರ ಮುಂದೆ ಹೇಳಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು.

**ವೃಷಭ** ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ನಿಮ್ಮ ಸಮರ್ಪಣೆ ಮತ್ತು ಶ್ರಮವನ್ನು ಗಮನಿಸಲಾಗುತ್ತದೆ, ಇಂದು ನಿಮಗೆ ಸ್ವಲ್ಪ ಆರ್ಥಿಕ ಪ್ರತಿಫಲಗಳನ್ನು ತರುತ್ತದೆ. ನಿಮ್ಮ ಕುಟುಂಬದ ಸದಸ್ಯರು ನಿಮ್ಮ ಪ್ರಯತ್ನ ಮತ್ತು ಸಮರ್ಪಣೆಯನ್ನು ಪ್ರಶಂಸಿಸುತ್ತಾರೆ.

**ಮಿಥುನ** ಎಣ್ಣೆಯುಕ್ತ, ಮಸಾಲೆಯುಕ್ತ ಆಹಾರ ತಪ್ಪಿಸಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರೊಂದಿಗೆ ನಿಮ್ಮ ಗುಣಮಟ್ಟದ ಸಮಯ ಕಳೆಯಿರಿ.

**ಕರ್ಕಾಟಕ** ಗಾಳಿಗೊಡ್ಡಿದ ಆಹಾರ ಅನಾರೋಗ್ಯ ತರಬಹುದಾದ್ದರಿಂದ ತಿನ್ನಬೇಡಿ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ಮಕ್ಕಳು ನಿರೀಕ್ಷೆಗಳನ್ನು ಪೂರೈಸಲು ವಿಫಲವಾಗಿ ನಿರಾಶೆಯುಂಟುಮಾಡಬಹುದು.

**ಸಿಂಹ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ.

**ಕನ್ಯಾ** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ- ಆದ್ದರಿಂದ ನೀವು ಕಷ್ಟಪಟ್ಟು ಗಳಿಸಿದ ನಿಮ್ಮ ಹಣವನ್ನು ಎಲ್ಲಿ ಹೂಡಬಯಸುತ್ತೀರೆನ್ನುವಲ್ಲಿ ಖಚಿತತೆಯಿರಲಿ.

**ತುಲಾ** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ, ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು. ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬಹುದು.

**ವೃಶ್ಚಿಕ** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ.

**ಧನಸ್ಸು** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ ಸಾಧ್ಯವಾದಷ್ಟೂ ಬಳಸಿಕೊಳ್ಳಿ. ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸುವ ಅಗತ್ಯವಿದೆ ಇಲ್ಲದಿದ್ದರೆ ಮುಂಬರುವ ಸಮಯದಲ್ಲಿ ತೊಂದರೆಗೊಳಗಾಗಬಹುದು ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.

**ಮಕರ** ಅನಾವಶ್ಯಕ ಉದ್ವೇಗ ಮತ್ತು ಚಿಂತೆ ನಿಮ್ಮ ಜೀವನದ ರಸ ಹೀರಬಹುದು ಮತ್ತು ನಿಮ್ಮನ್ನು ಖಾಲಿಯಾಗಿಸಬಹುದು. ಇವುಗಳನ್ನು ತೊಡೆದುಹಾಕದಿದ್ದಲ್ಲಿ ಅವು ಕೇವಲ ನಿಮ್ಮ ಸಮಸ್ಯೆಯನ್ನು ಉಲ್ಬಣಗೊಳಿಸುತ್ತವೆ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು.

**ಕುಂಭ** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಯಾವುದೇ ವ್ಯಕ್ತಿಯ ಸಹಾಯವಿಲ್ಲದೆ ನೀವು ಹಣವನ್ನು ಗಳಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ಮೇಲೆ ನಂಬಿಕೆಯನ್ನಿಡುವ ಅಗತ್ಯವಿದೆ.

**ಮೀನ** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

# ಪೋಷಕರೇ ಎಚ್ಚರ: ಹುಬ್ಬಳ್ಳಿಯ 58,159 ಮಕ್ಕಳಲ್ಲಿ ರಕ್ತಹೀನತೆ

## ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆಯಡಿ ತಪಾಸಣೆ ವೇಳೆ ಪತ್ತೆ, ಪೌಷ್ಟಿಕ ಆಹಾರ ಕೊರತೆ, ಜಂಕ್ ಫುಡ್ ಸೇವನೆ ಕಾರಣ

• ಉದಯವಾಹಿನಿ, ಹುಬ್ಬಳ್ಳಿ


ಉದಯವಾಹಿನಿ ಚಿತ್ರ

ಪೌಷ್ಟಿಕ ಆಹಾರ ಕೊರತೆ ಮತ್ತು ಅತಿಯಾದ ಜಂಕ್ ಆಹಾರ ಪದಾರ್ಥಗಳ ಸೇವನೆ ಪರಿಣಾಮ ಜಿಲ್ಲೆಯ 1 ರಿಂದ 14 ವರ್ಷದ 58,159 ಮಕ್ಕಳಲ್ಲಿ ರಕ್ತಹೀನತೆ ಸಮಸ್ಯೆ ಕಂಡು ಬಂದಿದೆ. ಇದರಿಂದ ಮಕ್ಕಳ ಕಲಿಕೆ ಮೇಲೂ ಪರಿಣಾಮ ಉಂಟಾಗಿದ್ದು, ಏಕಾಗ್ರತೆ ಸಾಸಲು ಮತ್ತು ಆಟೋಟಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ತೊಂದರೆ ಅನುಭವಿಸುವಂತಾಗಿದೆ. ಮಕ್ಕಳ ರಕ್ತಹೀನತೆ, ಅಪೌಷ್ಟಿಕ ಆಹಾರ, ಆರೋಗ್ಯ ನ್ಯೂನತೆಗಳ ಮೇಲೆ ನಿಗಾ ಇಡಲು ಸರಕಾರ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆ ಜಾರಿಗೊಳಿಸಿದೆ. ಇದರಡಿ ಪ್ರತಿ ವರ್ಷ ಎರಡು ಬಾರಿ 1 ರಿಂದ 14 ವರ್ಷದ ಮಕ್ಕಳ ಆರೋಗ್ಯ ತಪಾಸಣೆಯನ್ನು ಅಂಗನವಾಡಿ ಹಾಗೂ ಶಾಲೆಗಳಲ್ಲಿ ನಡೆಸಲಾಗುತ್ತಿದೆ. ಈ ವೇಳೆ ಜಿಲ್ಲೆಯಲ್ಲಿ ಪ್ರಸ್ತುತ 1,80,882 ಮಕ್ಕಳ ತಪಾಸಣೆ ನಡೆಸಿ ಸ್ಕ್ರೀನಿಂಗ್ ಮಾಡಿದ್ದು, ಅದರಲ್ಲಿ 30,598 ಮಕ್ಕಳು ಸೌಮ್ಯ, 27,282 ಮಕ್ಕಳು ಮಧ್ಯಮ ಹಾಗೂ 279 ಮಕ್ಕಳು ತೀವ್ರತರದ ರಕ್ತಹೀನತೆಯಿಂದ ಬಳಲುತ್ತಿರುವುದು ಪತ್ತೆಯಾಗಿದೆ. ಸಮರ್ಪಕ ಆಹಾರದ ಕೊರತೆ, ಆಹಾರದಲ್ಲಿ ಪೌಷ್ಟಿಕಾಂಶದ ಕೊರತೆ, ಜಂಕ್ ಆಹಾರ ಪದಾರ್ಥಗಳ ಸೇವನೆ ಸೇರಿದಂತೆ ಹತ್ತಾರು ಕಾರಣಗಳಿಂದ ಮಕ್ಕಳ ದೇಹದಲ್ಲಿ ರಕ್ತ ಉತ್ಪಾದನೆ ಕಡಿಮೆಯಾಗುತ್ತಿದೆ. ಕೆಲ ಮಕ್ಕಳಲ್ಲಿ ಜೆನೆಟಿಕ್ ಆಗಿಯೇ ರಕ್ತಹೀನತೆ ಕಾಡುತ್ತಿದೆ. ಅದರಲ್ಲೂ ಹೊಟ್ಟೆಯಲ್ಲಿ ಜಂತು ಹುಳ, ಅನೈರ್ಮಲ್ಯದಿಂದಲೂ ಮಕ್ಕಳು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಇದರಿಂದ ಮಕ್ಕಳು ಪದೇ ಪದೇ ಅನಾರೋಗ್ಯಕ್ಕೆ ತುತ್ತಾಗಲಿದ್ದಾರೆ ಎನ್ನುತ್ತಾರೆ ತಜ್ಞವೈದ್ಯರು.

**ಪಾಲಕರು ವಿಶೇಷ ಕಾಳಜಿ ವಹಿಸಿ**

ಇದೆಲ್ಲದರ ಪರಿಣಾಮ ಏಕಾಗ್ರತೆ ಸಾಸಲಾಗದೇ, ಕಲಿಕೆಯಲ್ಲೂ ಹಿಂದುಳಿಯುವಂತಾಗಿದೆ. ಜತೆಗೆ ಮಕ್ಕಳು ಆಟೋಟಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ದೈಹಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಪ್ರಮುಖವಾಗಿ ಮಕ್ಕಳ ಬೆಳವಣಿಗೆ ಮೇಲೆ, ಮಾನಸಿಕ ಬೆಳವಣಿಗೆ ಮೇಲೂ ಅಡ್ಡ ಪರಿಣಾಮ ಬೀರಲಿದೆ ಎಂಬುದು ವೈದ್ಯರ ಅಭಿಪ್ರಾಯ. ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆಯಡಿ ಮಕ್ಕಳನ್ನು ತಪಾಸಣೆಗೆ ಒಳಪಡಿಸಿ ಅವರಲ್ಲಿನ ಸಮಸ್ಯೆ ಪತ್ತೆ ಹಚ್ಚಿ ಸೂಕ್ತ ಪರಿಹಾರೋಪಾಯ ಕಲ್ಪಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಶ್ರಮಿಸುತ್ತಿದೆ. ಆ ಮೂಲಕ ಸಮಸ್ಯೆ ಉಲ್ಬಣಿಸುವ ಪೂರ್ವದಲ್ಲಿ ಮುಂಜಾಗ್ರತ ಕ್ರಮ ವಹಿಸಲಾಗುತ್ತಿದೆ. ಸದ್ಯ ರಕ್ತಹೀನತೆ ನಿವಾರಣೆಗೆ ಸಿರಪ್, ಪೌಷ್ಟಿಕ ಆಹಾರ ಪೂರೈಕೆ, ನಿರಂತರ ನಿಗಾ ವಹಿಸಿ ಮಕ್ಕಳ ಆರೋಗ್ಯ ಸಮಸ್ಯೆ ನಿವಾರಿಸಿ ಅವರನ್ನು ಸದೃಢಗೊಳಿಸುವ ಪ್ರಯತ್ನ ಮುಂದುವರಿದಿದೆ. ಇದರೊಟ್ಟಿಗೆ ಹತ್ತಾರು ಬಗೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ನಗರ, ಗ್ರಾಮೀಣ ವ್ಯಾಪ್ತಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

> ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆಯಡಿ ವರ್ಷಕ್ಕೆ ಎರಡು ಬಾರಿ ಅಂಗನವಾಡಿಗಳಲ್ಲಿ ಮತ್ತು ಶಾಲೆಗಳಲ್ಲಿ ಒಂದು ಬಾರಿ ಮಕ್ಕಳನ್ನು ತಪಾಸಣೆ ನಡೆಸಲಾಗುತ್ತಿದೆ. ಆ ಮೂಲಕ ಅವರಲ್ಲಿನ ನ್ಯೂನತೆ ಪತ್ತೆಗೆ ಸ್ಕ್ರೀನಿಂಗ್ ಮಾಡಲಾಗುತ್ತದೆ. ಮಕ್ಕಳಲ್ಲಿನ ರಕ್ತಹೀನತೆ, ಅಪೌಷ್ಟಿಕತೆ, ಆರೋಗ್ಯ ನ್ಯೂನತೆಗಳ ಮೇಲೆ ನಿಗಾ ಇಟ್ಟು ಸೂಕ್ತ ಚಿಕಿತ್ಸೆ ನೀಡಿ ಸುಧಾರಣೆಗೆ ಕ್ರಮ ವಹಿಸಲಾಗುತ್ತಿದೆ.
>
> -ಡಾ.ಎಸ್.ಎಂ.ಹೊನಕೇರಿ, ಜಿಲ್ಲಾಆರೋಗ್ಯಾಕಾರಿ

### ಸುಧಾರಣೆಗೆ ಕೈಗೊಂಡ ಕ್ರಮ

- ರಕ್ತಹೀನತೆ ಸಮಸ್ಯೆಯ ಮಕ್ಕಳ ಪರೀಕ್ಷೆ ನಡೆಸಿ ಸೌಮ್ಯ, ಮಧ್ಯಮ, ತೀವ್ರ, ತಲಸ್ಸೇಮಿಯಾ, ಹಿಮೋಫಿಲಿಯಾ ನಾನಾ ಸ್ವರೂಪ ಪತ್ತೆ
- ಚಿಕ್ಕ ವಯಸ್ಸಿನಲ್ಲಿಯೇ ಸಿರಪ್, ಐಎಫ್‌ಎ, ಐರಲ್ಯಾನ್ ಫೋಲಿಕ್ ಮಾತ್ರೆ ಹಂಚಿಕೆ
- ತೀವ್ರ ಸಮಸ್ಯೆ ಇದ್ದಲ್ಲಿ ರಕ್ತ ಟ್ರಾನ್ಸ್‌ಫರೇಷನ್
- ಕೈ ಸ್ವಚ್ಛಗೊಳಿಸುವುದು, ಶೌಚಗೃಹಗಳ ಬಳಕೆ ಸೇರಿ ನೈರ್ಮಲ್ಯಕ್ಕೆ ಒತ್ತು ನೀಡುವಂತೆ ಜಾಗೃತಿ

**ಮಕ್ಕಳ ಕಾಳಜಿ ವಹಿಸಿ:** ಮಕ್ಕಳಲ್ಲಿ ಕಾಣುತ್ತಿರುವ ಅಪೌಷ್ಟಿಕತೆ, ರಕ್ತಹೀನತೆಗೆ ಪಾಲಕರ ನಿಷ್ಕಾಳಜಿಯೂ ಕಾರಣವಾಗಿದೆ ಸಹಜವಾಗಿ ಮಕ್ಕಳಿಂದ ಹಿಡಿದು ಪಾಲಕರಿಗೂ ಮೊಬೈಲ್‌ಗೀಳು ಹೆಚ್ಚಾಗಿದೆ. ಅಳುವ ಮಕ್ಕಳ ಕೈಗೆ ಸುಲಭವಾಗಿ ಮೊಬೈಲ್ ಕೊಟ್ಟು ಸಮಾಧಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ವೇಳೆಗೆ ಸರಿಯಾಗಿ ಮಕ್ಕಳ ದೇಹಕ್ಕೆ ಬೇಕಾದಷ್ಟು ಆಹಾರ ಸಿಗದೇ, ಇಂತಹ ಸಮಸ್ಯೆಗಳು ಉಲ್ಬಣಗೊಳ್ಳುತ್ತಿವೆ. ಮಕ್ಕಳ ಆರೋಗ್ಯದ ಬಗ್ಗೆ ಪಾಲಕರು ವಿಶೇಷ ಕಾಳಜಿ ವಹಿಸಬೇಕು ಎನ್ನುತ್ತಾರೆ ತಜ್ಞ ವೈದ್ಯರು.

## ಪಿಎಲ್‌ಡಿಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಬಾಬುರಾವ ಭೋವಿ ಅವಿರೋಧ ಆಯ್ಕೆ

• ಉದಯವಾಹಿನಿ ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಗೆ ಚಂದನಕೇರಾ ಸಾಮಾನ್ಯ ಸಾಲಗಾರರ ಕ್ಷೇತ್ರದ ತೆರುವಾಗಿದ ಸ್ಥಾನಕ್ಕೆ ಚುನಾವಣೆ ಘೋಷಣೆಯಾಗಿ ನ.18ರಂದು ಚುನಾವಣೆ ನಿಗಧಿಪಡಿಸಲಾಗಿತ್ತು ಆದರೆ ಹಣಮಂತರಾವ ರಾಜೇಂದ್ರ, ಚಂದನಕೇರಾ ಹಾಗೂ ಬಾಬುರಾವ ಭೋವಿ ಚೇಂಗಟಾ ಎರಡು ನಾಮಪತ್ರ ಸಲ್ಲಿಕೆಯಾಗಿದವು ನ.13ರಂದು ನಾಮಪತ್ರ ಹಿಂಪಡೆಯಲು ಕೊನೆಯದಿನದಂದು ಚಂದನಕೇರಾದ ಹಣಮಂತರಾವ ರಾಜೇಂದ್ರ, ನಾಮಪತ್ರ ಹಿಂಪಡೆದಿರುವುದರಿಂದ ಬಾಬುರಾವ ಭೋವಿ ಅವಿರೋಧವಾಗಿ ಉಳಿದ ಅವಧಿಗೆ ಆಯ್ಕೆಗೊಳಿಸಲಾಗಿದೆ ಎಂದು ಘೋಷಿಸಲಾಗಿದೆ ಎಂದು ಚುನಾವಣಾಧಿಕಾರಿ ಹಣಮಂತ ದಸಪಳ್ಳಿ ತಿಳಿಸಿದ್ದಾರೆ. ಬಾಬುರಾವ ಭೋವಿ ಚೇಂಗಟಾ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಗೆ ಅವಿರೋಧ ಆಯ್ಕೆಯಾಗಿ ಹ್ಯಾಟ್ರಿಕ್ ಗೆಲುವು ಸಾಧಿಸುತ್ತಿದಂತೆ ಕಾಂಗ್ರೆಸ್ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿ ಸಿಹಿ ಹಂಚಿದರು.

ಬಾಬುರಾವ ಭೋವಿ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದು ಎಡ್ಮೂರು ದಶಕಗಳಿಂದ ಪಕ್ಷದಲ್ಲಿದ್ದು ನಿಷ್ಠೆಯಿಂದ ಇದ್ದು ಮೂರು ಬಾರಿ ಕೃಷಿಕ ಸಮಾಜದ ಉಪಾಧ್ಯಕ್ಷರಾಗಿ ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ ಎರಡು ಅವಧಿಗೆ ಉಪಾಧ್ಯಕ್ಷರಾಗಿ ಅನುಭವಿಗಳಾಗಿದ್ದಾರೆ ಈ ಬಾರಿ ಪಿಎಲ್ಡಿ ಬ್ಯಾಂಕ್‌ಗೆ ಅವಿರೋಧವಾಗಿ ಆಯ್ಕೆಯಾಗುತ್ತಿದಂತೆ ರೈತರಿಗೆ ಸಾಲಸೌಲಭ್ಯ, ರೈತರಿಗೆ ಯಂತ್ರೋಪಕರಣಗಳು ಸೇರಿದಂತೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿ ಕೊಡುತ್ತೇನೆ ಎಂದು ನೂತನ ನಿರ್ದೇಶಕ ಬಾಬುರಾವ ಭೋವಿ ಹೇಳಿದರು.

ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಬಾಷೀದ್, ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷ ಲಕ್ಷ್ಮಣ ಆವುಂಟಿ, ಅಶೋಕ ಭೋವಿ ಚೇಂಗಟಾ, ಬಸವರಾಜ ಕೊಲಕುಂದಿ, ಯಲ್ಲಾಲಿಂಗ ಜಮಾದಾರ, ಅನೇಕರಿದ್ದರು.

## ಕಟಪಾಡಿ ರಾಷ್ಟ್ರೀಯ ಹೆದ್ದಾರಿ-66 ರ ಮೇಲ್ಸೇತುವೆ ನಿರ್ಮಾಣ ಕಾರ್ಯ ಸಂಚಾರ ಮಾರ್ಗ ಬದಲಾವಣೆ

• ಉದಯವಾಹಿನಿ, ಉಡುಪಿ


ಉದಯವಾಹಿನಿ ಚಿತ್ರ

ಕಟಪಾಡಿ ಜಂಕ್ಷನ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ವಾಹನಗಳ ಸಂಚಾರಕ್ಕೆ ತಾತ್ಕಾಲಿಕವಾಗಿ ಮಾರ್ಗ ಬದಲಾವಣೆ ಮಾಡಲಾಗಿದೆ. ಈ ಯೋಜನೆಯ ಅವಧಿಯಲ್ಲಿ ಸುಗಮ ಸಂಚಾರ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ದೃಷ್ಟಿಯಿಂದ ಈ ಮಾರ್ಗ ಬದಲಾವಣೆ ಮಾಡಲಾಗಿದೆ. ಭಾರತೀಯ ಹೆದ್ದಾರಿ ಪ್ರಾಧಿಕಾರ, ಮಂಗಳೂರು ಯೋಜನಾ ನಿರ್ದೇಶಕರು ತಾತ್ಕಾಲಿಕ ಸಂಚಾರ ಮಾರ್ಗ ಬದಲಾವಣೆ, ನಿರ್ಮಾಣ ಅವಧಿಯಲ್ಲಿ ವಾಹನಗಳಿಗೆ ಪರ್ಯಾಯ ಮಾರ್ಗಗಳನ್ನು ಅನುಮತಿಸುವ ಅಧಿಸೂಚನೆಯನ್ನು ಹೊರಡಿಸುವಂತೆ ಕೋರಿದ್ದಾರೆ. ಸಾರ್ವಜನಿಕ ಅನುಕೂಲತೆ, ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು, ಜಿಲ್ಲಾಡಳಿತವು ಆದೇಶ ಹೊರಡಿಸಿದೆ.

ಅದರ ಪ್ರಕಾರ, ಕಟಪಾಡಿ ಜಂಕ್ಷನ್-66ರಲ್ಲಿ ವಾಹನಗಳ ಸಂಚಾರವನ್ನು ವಾಹನ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳ್ಳುವವರೆಗೆ ಈ ಕೆಳಗಿನ ಪರ್ಯಾಯ ಮಾರ್ಗಗಳಿಗೆ ಮಾರ್ಗ ಬದಲಾವಣೆ ಮಾಡಲಾಗುತ್ತದೆ. ಉಡುಪಿಯಿಂದ ಮಂಗಳೂರು ಕಡೆಗೆ ಚಲಿಸುವ ಭಾರೀ ಮತ್ತು ಸರಕು ವಾಹನಗಳು ಕೆಲಸದ ವಲಯ ಪ್ರದೇಶದಲ್ಲಿ ಗುರುತಿಸಲಾದ ಗೊತ್ತುಪಡಿಸಿದ ಟ್ರ್ಯಾಕ್ ಮೂಲಕ ಚಲಿಸಬೇಕು. ಮಂಗಳೂರಿನಿಂದ ಉಡುಪಿ ಕಡೆಗೆ ಚಲಿಸುವ ಸರಕು ವಾಹನಗಳು ಸಹ ಕೆಲಸದ ವಲಯ ಪ್ರದೇಶದೊಳಗೆ ನಿರ್ದಿಷ್ಟ ಟ್ರ್ಯಾಕ್ ಮೂಲಕ ಚಲಿಸಬೇಕು. ಸುಗಮ ಸಂಚಾರ ನಿರ್ವಹಣೆ ಮತ್ತು ಮೇಲ್ಸೇತುವೆ ಯೋಜನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲಾ ವಾಹನ ಬಳಕೆದಾರರು ಸಹಕರಿಸಬೇಕು, ತಿರುವು ಮಾರ್ಗಗಳನ್ನು ಅನುಸರಿಸಬೇಕೆಂದು ಜಿಲ್ಲಾಡಳಿತ ಮನವಿ ಮಾಡಿದೆ.

## ವಾರ್ಡ್ ಸಂಖ್ಯೆ 12 ರಲ್ಲಿ ವಿವಿಧ ಕಾಮಗಾರಿಗೆ ಶಿಲಾನ್ಯಾಸ

• ಉದಯವಾಹಿನಿ, ಕಲಬುರಗಿ

ನಗರದ ವಾರ್ಡ್ ಸಂಖ್ಯೆ 12 ರಲ್ಲಿ ಸಿ.ಸಿ. ರಸ್ತೆ, ಒಳಚರಂಡಿ ಮತ್ತು ಪೇವರ್ ಕಾಮಗಾರಿಗಳ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಲಾಯಿತು.

2024-25ನೇ ಸಾಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ಡಿ.ಎಂ.ಎಫ್.ಟಿ.) ಯೋಜನೆಯಡಿಯಲ್ಲಿ, ಕೆ.ಎಸ್.ಐ.ಸಿ. ಅಧ್ಯಕ್ಷೆ ಮತ್ತು ಕಲಬುರಗಿ ಉತ್ತರದ ಶಾಸಕಿ ಕನೀಜ್ ಫಾತಿಮಾ ಅವರು ಇದನ್ನು ನೆರವೇರಿಸಿದರು.

ಮುಸ್ತಫಾ ಮಸೀದಿ ಹಿಂಭಾಗದಿಂದ ಗುಂಜ್ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳವರೆಗೆ ವಿಸ್ತರಿಸಿರುವ ಈ ಅಭಿವೃದ್ಧಿ ಯೋಜನೆಯು ಪ್ರದೇಶದ ರಸ್ತೆ ಜಾಲ, ಒಳಚರಂಡಿ ವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕನೀಜ್ ಫಾತಿಮಾ,


ಉದಯವಾಹಿನಿ ಚಿತ್ರ

ಎಲ್ಲಾ ವಾರ್ಡ್‌ಗಳಲ್ಲಿ ಸಮಾನ ಅಭಿವೃದ್ಧಿಯ ಮಹತ್ವವನ್ನು ಎತ್ತಿ ತೋರಿಸಿದರು.

ಕಲಬುರಗಿ ಉತ್ತರದ ಪ್ರತಿಯೊಂದು ನೆರೆಹೊರೆಗೂ ಸುಸ್ಥಿರ ಪ್ರಗತಿಯನ್ನು ತರುವ ತಮ್ಮ ಸಮರ್ಪಣೆಯನ್ನು ಪುನರುಚ್ಚರಿಸಿದರು.


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

**ನಗರದ ನಗರದ ಮುರುಘರಾಜೇಂದ್ರ ಕ್ರೀಡಾಂಗಣದಲ್ಲಿ ಆಯೋಜನೆಗೊಂಡಿರುವ ಸ್ವದೇಶಿ ಮೇಳಕ್ಕೆ ಮಹಿಳೆಯರನ್ನು ಅರಿಶಿನ ಕುಂಕುಮ ನೀಡಿ ಸ್ವಾಗತಿಸುತ್ತಿರುವ ಭಾರತೀಯ ಯೋಗ ಶಿಕ್ಷಣ ಸಂಸ್ಥೆಯ ಮಹಿಳಾ ಯೋಗ ಸಾಧಕರು.**

## ಹಾಸ್ಟೆಲ್‌ಗಳ ಸಾಮಗ್ರಿ ವಿತರಣೆಯಲ್ಲಿ ಅಕ್ರಮ: ಕ್ರಮಕ್ಕೆ ಮನವಿ

• ಉದಯವಾಹಿನಿ, ಕಲಬುರಗಿ

ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಿಗೆ ಆಹಾರ, ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡುವ ಟೆಂಡರ್ ಸಂಬಂಧಿಸಿದಂತೆ, ಟೆಂಡರ್ ಷರತ್ತುಗಳ ಉಲ್ಲಂಘನೆಯಾಗಿದೆ. ಈ ಅಕ್ರಮ ವ್ಯವಹಾರದ ಕುರಿತು ಕ್ರಮ ಜರುಗಿಸದೇ ಅಧಿಕಾರದ ದುರುಪಯೋಗ ಮಾಡಿಕೊಂಡಿರುವ ಕಲಬುರಗಿ ಉಪ ನಿರ್ದೇಶಕರು ಆಹಾರ ಸರಬರಾಜು ಗುತ್ತಿಗೆದಾರರ ಜೊತೆಗೆ ಶಾಮೀಲಾಗಿ ಅವ್ಯವಹಾರ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಕೂಡಲೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಯನ್ನು ಅಮಾನತ್ತುಗೊಳಿಸಿ ಗುತ್ತಿಗೆದಾರರ ಪರವಾನಿಗೆಯನ್ನು ರದ್ದುಪಡಿಸಬೇಕೆಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ ಎಸ್ ಪಾಟೀಲ ನರಿಬೋಳ, ಗ್ರಾಮೀಣ ಅಭಿವೃದ್ಧಿ ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಶ್ರವಣಕುಮಾರ ಡಿ ನಾಯಕ ಅವರು ಜಿಪಂ ಸಿಇಒ ಭಂವರಸಿಂಗ್ ಮೀನಾ ಅವರಿಗೆ ಮನವಿ ಸಲ್ಲಿಸಿದರು.

## ಸಂತೋಷ್ ಕೋಟ್ಯಾನ್ ಬಂಧನ ಖಂಡಿಸಿ ಪ್ರತಿಭಟನೆ

• ಉದಯವಾಹಿನಿ, ಚಿಕ್ಕಮಗಳೂರು


ಉದಯವಾಹಿನಿ ಚಿತ್ರ

ರಾಜ್ಯದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರನ್ನು ಟೀಕಿಸಿರುವ ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷರನ್ನು ಪೊಲೀಸರು ಬಂಧಿಸಿರುವುದನ್ನು ಖಂಡಿಸಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಟೌನ್‌ಪೊಲೀಸ್‌ಠಾಣೆ ಎದುರು ಪ್ರತಿಭಟನೆ ನಡೆಸಿದರು. ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸಂತೋಷ್‌ಕೋಟ್ಯಾನ್‌ಅವರನ್ನು ಬಂಧಿಸಿರುವ ಪೋಲಿಸರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿ ನ್ಯಾಯಾಧೀಶರ ಎದುರು ಹಾಜರು ಪಡಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಯಿತು. ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗೆ ರಾಜಾತಿಥ್ಯ ನೀಡಿರುವುದನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ವೇಳೆಯಲ್ಲಿ ಬಿಜೆಪಿ ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸಂತೋಷ್‌ಕೋಟ್ಯಾನ್‌ಅವರು ಗೃಹ ಸಚಿವ ಡಾ. ಜಿ. ಪರಮೇಶ್ವರ್‌ಅವರನ್ನು ವೈಯಕ್ತಿಕವಾಗಿ ನಿಂದಿಸಿದ್ದಾರೆಂದು ವಕೀಲರ ಅನಿಲ್‌ಕುಮಾರ್‌ಅವರು ದೂರು ನೀಡಿದ್ದರು.

ಈ ದೂರಿನನ್ವಯ ಟೌನ್‌ಪೊಲೀಸರು ಸಂತೋಷ್ ಕೋಟ್ಯಾನ್‌ಅವರನ್ನು ವಶಕ್ಕೆ ಪಡೆದುಕೊಂಡರು. ಈ ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಟೌನ್‌ಪೊಲೀಸ್‌ಠಾಣೆ ಎದುರು ಧರಣಿ ನಡೆಸಿದರು. ಈ ಸಂದರ್ಭದಲ್ಲಿ ಪೊಲೀಸರ ಹಾಗೂ ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರದಲ್ಲಿ ಸಂತೋಷ್ ಕೋಟ್ಯಾನ್‌ಅವರನ್ನು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗುವ ವೇಳೆಯಲ್ಲಿ ಪೊಲೀಸರ ಜೀಪನ್ನು ತಡೆಯುವ ಪ್ರಯತ್ನ ಕೂಡ ನಡೆಯಿತು. ಎಷ್ಟೇ ತಡೆವೊಡ್ಡಿದರೂ ಪೊಲೀಸರು ತಮ್ಮ ಕೆಲಸವನ್ನು ಮುಂದುವರೆಸಿದರು. ವೈದ್ಯಕೀಯ ತಪಾಸಣೆ ನಡೆಸಿ ನ್ಯಾಯಾಂಗ ವಶಕ್ಕೆ ನೀಡಿದರು.

## ಪ್ರತಿ ಟನ್ ಕಬ್ಬಿಗೆ 3500 ರೂ. ಬೆಲೆ ನೀಡುವಂತೆ ಆಗ್ರಹಿಸಿ ರೈತರಿಂದ ಪ್ರತಿಭಟನೆ

• ಉದಯವಾಹಿನಿ, ಹುಮನಾಬಾದ


ಉದಯವಾಹಿನಿ ಚಿತ್ರ

ಪ್ರತಿ ಟನ್ ಕಬ್ಬಿಗೆ 3500 ರೂ. ಬೆಲೆ ನೀಡುವಂತೆ ಒತ್ತಾಯಿಸಿ ನಗರದಲ್ಲಿ ರೈತರು ಬೃಹತ್ ರಾಷ್ಟ್ರೀಯ ಹೆದ್ದಾರಿ ಕಡೆಗೆ ಹೋರಟ ಎತ್ತಿನ ಬಂಡಿ.ಟ್ರಾಕ್ಟರ್ಗೆ ಕಬ್ಬು ಕಟ್ಟಿ ಹಸಿರು ಶಾಲು ಬಿಸುತ್ತಾ ಜೈ ಜವಾನ್ ಜೈ ಕಿಸಾನ್ ಎನ್ನುವ ಘೋಷಣೆಯೊಂದಿಗೆ ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದ ಪ್ರವಾಸಿಮಂದಿರದಿಂದ ಪ್ರಾರಂಭವಾದ ಪ್ರತಿಭಟನೆ ಡಾ.ಅಂಬೇಡ್ಕರ್ ವೃತ್ತದ ಮೂಲಕ ಛತ್ರಪತಿ ಶಿವಾಜಿ ವೃತ್ತದವರೆಗೆ ಮೆರವಣಿಗೆ ನಡೆಸಿ ಸಿಎಂ ಸಿದ್ದರಾಮಯ್ಯ ಅವರಿಗೆ ಬರೆದಿರುವ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರ ಮೂಲಕ ಸಲ್ಲಿಸಲಾಯಿತು.

ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಭೇಟಿ ನೀಡಿ ರೈತರ ಮನವೊಲಿಸಲು ಮುಂದಾದರು. ಈ ಮಧ್ಯೆ ರೈತ ಮುಖಂಡರು ಮಾತನಾಡಿ, ಬೆಳಗಾವಿ ಭಾಗದ ರೈತರಿಗೆ ನೀಡಿದ ಕಬ್ಬಿನ ಬೆಲೆ ಬೀದರ್ಜಿಲ್ಲೆ ರೈತರಿಗೂ ನೀಡುವಂತೆ ಒತ್ತಾಯಿಸಿದರು. ಆಗ ಜಿಲ್ಲಾಧಿಕಾರಿ ಶಿಲ್ಪಾ ಮಾತನಾಡಿ, ಈಗಾಗಲೇ ರೈತರು, ಕಾರ್ಖಾನೆಗಳ ಮಾಲೀಕರ ಜೊತೆ ಸಭೆಗಳು ನಡೆದಿವೆ.

ರೈತರಿಗೆ ನ್ಯಾಯಸಮ್ಮತ ಬೆಲೆ ನೀಡುವ ಕುರಿತು ಚರ್ಚೆಗಳು ನಡೆದಿವೆ. 2,750 ಕಬ್ಬಿನ ಬೆಲೆ ಜತೆಗೆ 50+50 ಒಟ್ಟಾರೆ 2,850 ಬೆಲೆ ನೀಡುವ ಕುರಿತು ಕಾರ್ಖಾನೆಗಳು ಒಪ್ಪಿವೆ. ಬೆಳಗಾವಿ ಮಾದರಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಕಬ್ಬಿನ ರಿಕವರಿ ಇಲ್ಲ, ರೈತರು ಹೆಚ್ಚಿನ ಬೆಲೆ ಕೇಳುತ್ತಿದ್ದು, ಈ ಕುರಿತು ಇನ್ನೊಮ್ಮೆ ಸಭೆ ನಡೆಸಿ ಸೂಕ್ತ ಬೆಲೆಯ ಬಗ್ಗೆ ತೀರ್ಮಾನ ಮಾಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ರೈತರ ಹೋರಾಟಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಬೀದರ್ ಜಿಲ್ಲಾ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ರೈತ ಸಂಘಟನೆಗಳ ಒಕ್ಕೂಟ, ವಿವಿಧ ಕನ್ನಡಪರ ಸಂಘಟನೆಗಳು, ತಾಲ್ಲೂಕು ವಕೀಲರ ಸಂಘ ಸೇರಿದಂತೆ ವಿವಿಧ ಸಂಘಟನೆಗಳು, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮುಖಂಡರು ಬೆಂಬಲ ನೀಡಿದರು.

ಹುಮನಾಬಾದ್ ಶಿವಾಜಿ ವತ್ತ ಹತ್ತಿರದಲ್ಲಿ ಪೊಲೀಸರು ಅಳವಡಿಸಿದ ಬ್ಯಾರಿಕೇಡ್ ಹತ್ತಿ ರಾಷ್ಟ್ರೀಯ ಹೆದ್ದಾರಿ ತಡೆಯಲು ಮುಂದಾಗಿದ್ದ ಶಾಸಕ ಸಿದ್ದು ಪಾಟೀಲ ಸೇರಿದಂತೆ ಸುಮಾರು 175ಕ್ಕೂ ಅಧಿಕ ಜನರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

## ಸುಕನ್ಯಾ ಮೇಲೆ ಹಲ್ಲೆ ಎಸಗಿದ ಕಿಡಿಗೇಡಿಗಳ ವಿರುದ್ಧ ಕ್ರಮ ಜರುಗಿಸಿ

• ಉದಯವಾಹಿನಿ, ಬೀದರ್

ಲಿಂಗತ್ವ ಮತ್ತು ಲೈಂಗಿಕ ಬಹುತ್ವಕ್ಕಾಗಿ ಚಳುವಳಿಯಲ್ಲಿ ಸಕ್ರಿಯವಾಗಿರುವ ಬೆಂಗಳೂರು ಮೂಲದ 24 ವರ್ಷದ ಲಿಂಗತ್ವ ಅಲ್ಪಸಂಖ್ಯಾತ ಯುವತಿ ಸುಕನ್ಯಾ ಮೇಲೆ ಹಲ್ಲೆ ಎಸಗಿದ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಎಮ್.ಜಿ.ಎಸ್.ಪಿ ಸಂಘಟನೆಯ ಸದಸ್ಯರಾದ ಭೀಮ ಆಗ್ರಹಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಇತ್ತೀಚೀಗೆ ರಾಜ್ಯ ರಾಜ್ಯಧಾನಿ ಬೆಂಗಳೂರಿನ ಕೃಷ್ಣರಾಜಪುರ ನಿವಾಸಿ ಸುಕನ್ಯಾ ಅವರ ಮೇಲೆ ನಡೆದ ಭೀಕರ ಹಲ್ಲೆ, ಅಪಹರಣ, ಅಕ್ರಮ ಬಂಧನ ಮತ್ತು ಬಲವಂತದ ತಲೆ ಬೋಳಿಸುವ ಕೃತ್ಯವನ್ನು ತೀವ್ರವಾಗಿ ಖಂಡಿಸುವುದಾಗಿ ತಿಳಿಸಿದರು.

ಅಕ್ಟೋಬರ್ 30ರಂದು ಸುಕನ್ಯಾ ಅವರನ್ನು ಬೆಂಗಳೂರಿನ ಕೃಷ್ಣರಾಜಪುರಂನಿಂದ ಅಪಹರಿಸಲಾಗಿದ್ದು, ಮರದ ಕಟ್ಟಿಗೆ ಮತ್ತು ಸೌಟಿನಿಂದ ಪುನಃಪುನಃ ಹೊಡೆದು ಕ್ರೂರ ಹಿಂಸೆಗೆ ಒಳಪಡಿಸಲಾಯಿತು, ಅವರ ತಲೆಯನ್ನು ಬಲವಂತವಾಗಿ ಬೋಳಿಸುವ ಮೂಲಕ ಮಹಿಳೆಯಾಗಿ ಅವರ ಲಿಂಗತ್ವ ಅಸ್ತಿತ್ವವನ್ನು ಅಳಿಸಿ ಹಾಕುವ ಉದ್ದೇಶಿತ ಪ್ರಯತ್ನ ಮಾಡಲಾಯಿತು. ಈ ಹಲ್ಲೆ, ಅವರು ಒಂದು ಹಿಜ್ರಾ ಘರಾಣಾಯಿಂದ ಮತ್ತೊಂದಕ್ಕೆ ಸ್ಥಳಾಂತರಗೊಳ್ಳಲು ಬಯಸಿದ್ದರಿಂದ ನಡೆದಿರುವುದಾಗಿ ಹೇಳಲಾಗಿದೆ. ಸುಕನ್ಯಾ ಅವರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಅಕ್ಟೋಬರ್ 31ರಂದು ಮಧ್ಯಾಹ್ನ 1:30ರ ವರೆಗೆ ಬಂಧನದಲ್ಲಿಟ್ಟಿದ್ದರು. ನಾಗರಿಕ ಸಮಾಜದ ಸಂಘಟನೆಗಳು ಮತ್ತು ಹೋರಾಟಗಾರರ ಸಮಯೋಚಿತ ಮಧ್ಯಸ್ಥಿಕೆಯಿಂದ ಪೊಲೀಸರು ಅವರನ್ನು ರಕ್ಷಿಸಿದರು. ಎಫ್‌ಐಆರ್


ಉದಯವಾಹಿನಿ ಚಿತ್ರ

ದಾಖಲಾಗಿದೆ ಮತ್ತು ತನಿಖೆಗಳು ಪ್ರಗತಿಯಲ್ಲಿವೆ. ಈ ಕ್ರೂರ ಘಟನೆ ಹಿಜ್ರಾ ವ್ಯವಸ್ಥೆಯೊಳಗಿನ ಸದಸ್ಯರು ವಿಶೇಷವಾಗಿ ಎಷ್ಟೋ ಬಾರಿ ಹಲವಾರು ಕಡೆಯಿಂದ ಹುಟ್ಟಿದ ಕುಟುಂಬಗಳಿಂದ, ಪೊಲೀಸರಿಂದ, ಸಾರ್ವಜನಿಕರಿಂದ, ಕೆಲವೊಮ್ಮೆ ತಮ್ಮದೇ ಸಮುದಾಯದೊಳಗಿನಿಂದಲೂ ಹಿಂಸೆಗೆ ಒಳಗಾಗುವವರಾಗುತ್ತಾರೆ ಎಂಬ ಕಹಿ ವಾಸ್ತವತೆ ತಮ್ಮ ಮುಂದೆ ಇರಿಸಲಾಗುತ್ತಿದೆ ಎಂದರು. ಹಿಂಸೆ ತಡೆಯಲು ಮತ್ತು ಪ್ರತಿಕ್ರಿಯಿಸಲು ಸಮುದಾಯದ ನೇತೃತ್ವದ ವ್ಯವಸ್ಥೆಗಳನ್ನು ಬಲಪಡಿಸುವುದು, ಪರಸ್ಪರ ಬೆಂಬಲವನ್ನು ಗಟ್ಟಿಗೊಳಿಸುವುದು, ಮತ್ತು ಎಲ್ಲರಿಗೂ ಸುರಕ್ಷತೆ, ಗೌರವ ಹಾಗೂ ಐಕ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವುದೇ ನಮ್ಮ ಉದ್ದೇಶ, ಸುಕನ್ಯಾ ಅವರು ಅನುಭವಿಸಿದ ಹಿಂಸೆ ಅವರ ಮಾನವ ಹಕ್ಕು ಮತ್ತು ಗೌರವದಿಂದ ಬದುಕುವ ಅವರ ಹಕ್ಕು ಉಲ್ಲಂಘನೆಯಾಗಿದೆ.

## ಉಚಿತ ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರ 20ಕ್ಕೆ

• ಉದಯವಾಹಿನಿ, ಆಳಂದ್

ಸಾಮಾಜಿಕ ಸೇವೆಯ ಮೂಲಕ ಸಮುದಾಯದ ಆರೋಗ್ಯ ಸುಧಾರಣೆಗೆ ಬದ್ಧರಾಗಿರುವ ತೆಹರಿಕ್-ಇ-ಖುದ್ದಾದ್ ಸಂಘಟನೆಯ ಕಲ್ಯಾಣ ಕರ್ನಾಟಕ ಪ್ರದೇಶ ಘಟಕವು, ಆಳಂದ ತಾಲ್ಲೂಕಿನ ಯುವಕರ ಸಹಯೋಗದೊಂದಿಗೆ ಉಚಿತ ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ನವೆಂಬರ್ 20ರಂದು ಸರಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯಲಿದ್ದು, ತಾಲ್ಲೂಕಿನ ಎಲ್ಲರೂ ಸದುಪಯೋಗ ಪಡೆಯಬೇಕೆಂದು ಸಂಘಟನೆಯ ಅಧ್ಯಕ್ಷ ಮಹ್ಮದ್ ರಫಿಕ್ ಮುಲ್ಲಾ ಮನವಿ ಮಾಡಿದ್ದಾರೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಫಿಕ್ ಮುಲ್ಲಾ, ನೇತ್ರ ಆರೋಗ್ಯವು ಜೀವನದ ಮೂಲಭೂತ ಅಂಶವಾಗಿದ್ದು, ಬಡತನದಿಂದಾಗಿ ಅನೇಕರು ನೇತ್ರ ತಪಾಸಣೆಗೆ ತೆರಳಲಾರರು. ಇದು ಕೇವಲ ಆರೋಗ್ಯ ಸೇವೆಯಲ್ಲ, ಸಾಮಾಜಿಕ ಜವಾಬ್ದಾರಿಯ ಸಂದೇಶವೂ ಹಂಚುತ್ತದೆ ಎಂದು ಹೇಳಿದರು.

### 300 ಗಣ ವೇಷಧರಿಗಳು ಹಾಗೂ 50 ಜನರ ಬ್ಯಾಂಡ್ ಮಾತ್ರ ಭಾಗಿಯಾಗಲು ಅವಕಾಶ, ನವೆಂಬರ್ 16ಕ್ಕೆ ಅನುಮತಿ

# ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಕೊನೆಗೂ ಹೈಕೋರ್ಟ್ ಅನುಮತಿ

• ಉದಯವಾಹಿನಿ, ಕಲಬುರಗಿ


ಉದಯವಾಹಿನಿ ಚಿತ್ರ

ಆರ್‌ಎಸ್‌ಎಸ್ ಶತಮಾನೋತ್ಸವ ನಿಮಿತ್ತ ಚಿತ್ತಾಪುರದಲ್ಲಿ ಆಯೋಜಿಸಿದ್ದ ಪಥ ಸಂಚಲನಕ್ಕೆ ನವೆಂಬರ್ 16 ರಂದು 300 ಗಣ ವೇಷಧರಿಗಳು ಹಾಗೂ 50 ಜನರ ಬ್ಯಾಂಡ್ ನೊಂದಿಗೆ ಅವಕಾಶ ನೀಡಿ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠ ತೀರ್ಪು ನೀಡಿದೆ.

ಚಿತ್ತಾಪುರ ತಹಶೀಲ್ದಾರ್ ಈಗಾಗಲೇ 16ಕ್ಕೆ ಅನುಮತಿ ನೀಡಿದ್ದು, 300 ಜನರು ಹಾಗೂ ಬ್ಯಾಂಡ್ 25 ಜನರು ಪಾಲ್ಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಿದ್ದರು. ಗರಿಷ್ಠ 600 ಜನರಿಗೆ ಅವಕಾಶ ನೀಡುವಂತೆ ಆರ್‌ಎಸ್‌ಎಸ್ ಪರ ಅರ್ಜಿದಾರರು ಕೋರಿದ್ದರು. ಆದರೆ, ಕಾನೂನು ಸುವ್ಯವಸ್ಥೆ ನೋಡಿಕೊಂಡು 16 ರಂದು ಮಧ್ಯಾಹ್ನ 3.30ರಿಂದ 5.30ರ ವರೆಗೆ ನಡೆಸಬಹುದು ಎಂದು ತೀರ್ಪು ನೀಡಿದೆ. ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ಕೋರಿ ಜಿಲ್ಲಾ ಸಂಘಚಾಲಕ ಅಶೋಕ್ ಪಾಟೀಲ್ ಹೈಕೋರ್ಟ್ ಮೊರೆ ಹೋಗಿದ್ದರು. ಕೋರ್ಟ್ ನಾಲ್ಕು ಬಾರಿ ವಿಚಾರಣೆ ಮಾಡಿದ್ದು,



ನ.7 ರಂದು ವಿಚಾರಣೆಯಲ್ಲಿ ಜಿಲ್ಲಾಡಳಿತಕ್ಕೆ ದಿನಾಂಕ ನಿಗದಿ ಮಾಡುವಂತೆ ಸೂಚನೆ ನೀಡಿ ನವೆಂಬರ್ 16 ಕ್ಕೆ ವಿಚಾರಣೆಯನ್ನು ಮುಂದೂಡಿತ್ತು. ಗುರುವಾರ ಜಿಲ್ಲಾಡಳಿತ ದಿನಾಂಕ ನಿಗದಿ ಮಾಡಿರುವ ಕುರಿತು ಹೈಕೋರ್ಟ್‌ಗೆ ತಿಳಿಸಿದೆ. ಈ ಮೂಲಕ ಕೊನೆಗೂ ಆರ್‌ಎಸ್‌ಎಸ್ ಚಿತ್ತಾಪುರದಲ್ಲಿ ನಿಗದಿಯಾಗಿದೆ.

### ದೇಶದಾದ್ಯಂತ ಸದ್ದು ಮಾಡಿದ್ದ ಚಿತ್ತಾಪುರ ಪಥ ಸಂಚಲನ

ಆರ್‌ಎಸ್‌ಎಸ್‌ನಿಂದ ಸರ್ಕಾರಿ ಸ್ಥಳಗಳ ಬಳಕೆ ನಿಷೇಧ ನಿಟ್ಟಿನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಅಂತೆಯೇ ಸರ್ಕಾರವು ನಿಷೇಧ ನಿಯಮವನ್ನು ಜಾರಿ ಮಾಡಿತ್ತು. ಆ ಬಳಿಕ ಹೈಕೋರ್ಟ್ ತಡೆ ನೀಡಿತ್ತು. ಇನ್ನು ಪ್ರಿಯಾಂಕ್ ಖರ್ಗೆಯವರ ಸ್ವಕ್ಷೇತ್ರವಾದ ಚಿತ್ತಾಪುರದಲ್ಲಿ ಪಥ ಸಂಚಲನ ಮಾಡಬೇಕು ಎಂದು ಸ್ಥಳೀಯ ಆರ್‌ಎಸ್‌ಎಸ್ ಮುಖಂಡರು ಮುಂದಾಗಿದ್ದರು. ಇದಕ್ಕೆ ಸ್ಥಳೀಯ ಆಡಳಿತವು ಅನುಮತಿ ನೀಡಿರಲಿಲ್ಲ. ಹೀಗಾಗಿ, ಸಂಘವು ನ್ಯಾಯಾಲಯ ಮೊರೆ ಹೋಗಿತ್ತು. ಈ ಬೆಳವಣಿಗೆಯು ದೇಶದಾದ್ಯಂತ ದೊಡ್ಡ ಚರ್ಚೆಗೆ ಕಾರಣವಾಗಿತ್ತು.

**ಬೆಂಗಳೂರಿನ ಕಚೇರಿಯಲ್ಲಿ 2ನೇ ಶಾಂತಿ ಸಭೆ:** ಹೈಕೋರ್ಟ್ ಮೊದಲ ಬಾರಿ ವಿಚಾರಣೆ ವೇಳೆ ಸೂಚನೆ ನೀಡಿದಂತೆ ಅಕ್ಟೋಬರ್ 24 ರಂದು ಜಿಲ್ಲಾಡಳಿತ ನೇತೃತ್ವದಲ್ಲಿ ಶಾಂತಿ ಸಭೆ ನಡೆದಿತ್ತು. ಆದರೆ, ಯಾವುದೇ ಒಮ್ಮತ ಮೂಡದೆ ಅದು ಅಶಾಂತಿಯಲ್ಲಿ ಸಭೆ ಅಂತ್ಯವಾಗಿತ್ತು. ನಂತರ ಹೈ ಕೋರ್ಟ್ ಸೂಚನೆಯಂತೆ ಎಜೆ ಶಶಿಕಿರಣ್ ಶೆಟ್ಟಿ ಅವರ ಬೆಂಗಳೂರಿನ ಕಚೇರಿಯಲ್ಲಿ 2ನೇ ಶಾಂತಿ ಸಭೆ ನಡೆದಿದ್ದು, ಅದು ಫಲಪ್ರದವಾಗಿದೆ ಎಂದು ಕಳೆದ ವಿಚಾರಣೆ ಇಬ್ಬರು ವಕೀಲರು ತಿಳಿಸಿದ್ದರು. ನವೆಂಬರ್ 16 ರಂದು ಪಥಸಂಚಲನ ನಡೆಸಲು ಅವಕಾಶ ನೀಡುವಂತೆ ಅಶೋಕ ಪಾಟೀಲ್ ಸಭೆಯಲ್ಲಿ ಕೇಳಿದ್ದ ಬಗ್ಗೆ ವಕೀಲರು ಹೈಕೋರ್ಟ್‌ಗೆ ಸೂಚನೆ ನೀಡಿದ್ದರು. ಈ ವೇಳೆ ನಾವು ವಾರದಲ್ಲಿ ದಿನಾಂಕ ನಿಗದಿ ಮಾಡುತ್ತೇವೆ' ಎಂದು ಸರಕಾರದ ಪರ ವಕೀಲ ಅಡ್ವೋಕೇಟ್ ಜನರಲ್ ಕೋರ್ಟ್‌ಗೆ ಮಾಹಿತಿ ನೀಡಿದ್ದರು.

ಉದಯ ವಾಹಿನಿ
ಪ್ರಾದೇಶಿಕ
ಶುಕ್ರವಾರ 14 ನವೆಂಬರ್ 2025


# ಹಸೀನಾ ಮಾಧ್ಯಮ ಹೇಳಿಕೆ ತಡೆಯುಂತೆ ಭಾರತಕ್ಕೆ ಬಾಂಗ್ಲಾ ಸರ್ಕಾರ ಮನವಿ

**ಢಾಕಾ:** ಕಳೆದ ವರ್ಷ ಬಾಂಗ್ಲಾದೇಶದಲ್ಲಿ ಉಂಟಾಗಿದ್ದ ಅಸ್ಥಿರತೆಯಿಂದ ತನ್ನ ದೇಶ ತೊರೆದು ಭಾರತಕ್ಕೆ ಬಂದು ಆಶ್ರಯ ಪಡೆದಿರುವ ಬಾಂಗ್ಲಾದ ಮಾಜಿ ಪ್ರಧಾನಿ ಶೇಕ್ ಹಸೀನಾ ಭಾರತದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ್ದರೆ ಅದರ ಬಿಸಿ ಬಾಂಗ್ಲಾದೇಶದಲ್ಲಿರುವ ಯೂನಸ್ ಸರ್ಕಾರಕ್ಕೆ ತಟ್ಟುತ್ತಿದೆ. ಈ ಕುರಿತು ಬಾಂಗ್ಲಾ ವಿದೇಶಾಂಗ ಸಚಿವಾಲಯ ಢಾಕಾದಲ್ಲಿರುವ ಭಾರತೀಯ ಉಪ ಹೈಕಮಿಷನರ್ ಪವನ್ ಬಾಧೆರೊಂದಿಗೆ ಈ ಕುರಿತು ತನ್ನ ಕಳವಳ ವ್ಯಕ್ತಪಡಿಸಿದೆ. ಅಲ್ಲದೆ, ನ.17ರಂದು ಹಸೀನಾ ವಿರುದ್ಧ ವಿಚಾರಣೆ ನಡೆಯಲಿದ್ದು, ಅಂತಿಮ ತೀರ್ಪು ಹೊರ ಬೀಳಲಿದೆ.



**ನ.17ಕ್ಕೆ ಹಸೀನಾ ವಿರುದ್ಧ ತೀರ್ಪು ಪ್ರಕಟ:** ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ ನ.17 ರಂದು ಹಸೀನಾ ಅವರ ವಿಚಾರಣೆಯ ತೀರ್ಪು ನೀಡಲಿದೆ. ಮಾಜಿ ಪ್ರಧಾನಿ ಹಾಗೂ ಆಕೆಯ ಆಪ್ತರಿಬ್ಬರು ಅವರ ಅಧಿಕಾರಾವಧಿಯಲ್ಲಿ ನಡೆದ ದೌರ್ಜನ್ಯಗಳು ಮತ್ತು ಕಳೆದ ವರ್ಷ ಆಗಸ್ಟ್‌ನಲ್ಲಿ ಅವಾಮಿ ಲೀಗ್ ಸರ್ಕಾರವನ್ನು ಉರುಳಿಸಿದ ಪ್ರತಿಭಟನೆಗಳಿಗಾಗಿ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು ಮಾನವೀಯತೆಯ ವಿರುದ್ಧದ ಅಪರಾಧಗಳಿಗಾಗಿ ವಿಚಾರಣೆಗೆ ಒಳಪಡಿಸಿದೆ.

ಇದಾದ ನಂತರ ಇನ್ನೊಂದು ಮಾಧ್ಯಮಕ್ಕೆ ಬರವಣಿಗೆ ಮೂಲಕ ಸಂದರ್ಶನ ನೀಡಿದ ಶೇಕ್ ಹಸೀನಾ 2024ರ ಬಾಂಗ್ಲಾದೇಶದ ಪ್ರತಿಭಟನೆಯನ್ನು ದಂಗೆ ಎಂದು ಬಣ್ಣಿಸಿದ್ದು, ಇದು ಪೂರ್ವನಿಯೋಜಿತ ಸಂಚು ಎಂದಿದ್ದಾರೆ. ಯೂನಸ್ ಅಧಿಕಾರವನ್ನು ವಶಪಡಿಸಿಕೊಂಡ ವೇಗ, ಅಪರಾಧಿಗಳಿಗೆ ತಕ್ಷಣವೇ ನೀಡಲಾದ ರಕ್ಷಣೆ, ಮತ್ತು ನಮ್ಮ ನ್ಯಾಯಾಂಗ ತನಿಖೆಯನ್ನು ವಜಾಗೊಳಿಸುವುದು ಇವೆಲ್ಲವೂ ಪೂರ್ವನಿರ್ಧರಿತ ತಂತ್ರವನ್ನು ಸೂಚಿಸುವ ಕೃತ್ಯಗಳಾಗಿವೆ. ಯೂನಸ್, ಅಧಿಕಾರವನ್ನು ವಶಪಡಿಸಿಕೊಳ್ಳಲು ತಯಾರಿ ನಡೆಸುತ್ತಿದ್ದಂತೆ ಕಾಣುತ್ತದೆ, ಅಥವಾ ಅವರನ್ನು ಅಧಿಕಾರಕ್ಕೆ ತಂದವರು ಹಾಗೆ ಮಾಡಿರಬಹುದು ಎಂದು ಹೇಳಿದ್ದಾರೆ. ಈ ಎಲ್ಲಾ ಹೇಳಿಕೆಗಳು ಬಾಂಗ್ಲಾದೇಶದ ಯೂನಸ್ ಸರ್ಕಾರದ ಕಣ್ಣುಕೆಂಪಾಗುವಂತೆ ಮಾಡಿದೆ. ಹೀಗಾಗಿ ತಕ್ಷಣವೇ ಹಸೀನಾ ಅವರು ಮಾಧ್ಯಮಗಳಿಗೆ ಸಂದರ್ಶನ ನೀಡಿ ಬಾಂಗ್ಲಾದೇಶ ವಿರುದ್ಧ ಮಾತನಾಡುವುದಕ್ಕೆ ತಡೆನೀಡಬೇಕು ಎಂದು ಒತ್ತಾಯಿಸಿದ್ದಾರೆ. ಇನ್ನು, ನ.17ರಂದು ಹಸೀನಾ ವಿರುದ್ಧದ ಆರೋಪಗಳಿಗೆ ತೀರ್ಪು ಘೋಷಣೆಯಾಗಲಿದ್ದು, ಇದು ಯಾವ ರೀತಿ ಪರಿಣಾಮ ಬೀಳಲಿದೆ ಎಂಬುದು ಕುತೂಹಲ ಮೂಡಿಸಿದೆ.

### ಹಸೀನಾ ಮಾಧ್ಯಮಗಳೊಂದಿಗೆ ಮಾತನಾಡುವುದನ್ನು ನಿಲ್ಲಿಸಿ ಎಂದ ಬಾಂಗ್ಲಾ ಒತ್ತಾಯ

**ಬಾಂಗ್ಲಾ ವಿದೇಶಾಂಗ ಸಚಿವಾಲಯ ಪವನ್ ಬಾಧೆಯವರನ್ನು ಕರೆಸಿಕೊಂಡು ಮಾತುಕತೆ ನಡೆಸಿ ಮಾಜಿ ಪ್ರಧಾನಿ ಶೇಕ್ ಹಸೀನಾ ಅವರು ಭಾರತೀಯ ಮಾಧ್ಯಮಗಳೊಂದಿಗೆ ಸಂವಾದ ನಡೆಸಿದ್ದರ ಬಗ್ಗೆ ತಮ್ಮ ಅಸಮಾಧಾನವನ್ನು ಹೊರ ಹಾಕಿದ್ದು, ಭಾರತ ಅದಕ್ಕೆ ಅನುಮತಿ ನೀಡಿದ್ದನ್ನು ಪ್ರಶ್ನೆ ಮಾಡಿದೆ. ಮಾನವೀಯತೆ ವಿರುದ್ಧದ ಅಪರಾಧಗಳಿಗಾಗಿ ವಿಚಾರಣೆಯಲ್ಲಿರುವ ಒಬ್ಬ ವ್ಯಕ್ತಿಗೆ ಆಶ್ರಯ ನೀಡುವುದು, ಎರಡು ರಾಷ್ಟ್ರಗಳ ನಡುವಿನ ಸಂಬಂಧವನ್ನು ಬೆಳೆಸಲು ಮತ್ತು ನಿರ್ಮಿಸಲು ಸಹಾಯಕವಲ್ಲ ಮತ್ತು ಅವರು ಮಾಧ್ಯದವರೊಂದಿಗೆ ಮಾತನಾಡಲು ಅವಕಾಶ ಮಾಡಿ ಕೊಡುವುದು ಸಮಂಜಸವಲ್ಲ. ಹಾಗಾಗಿ ಭಾರತ ಕೂಡಲೇ ಈ ಕ್ರಮವನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿ ಕೊಂಡಿದ್ದಾರೆ ಎಂದು ಬಿಎಸ್‌ಎಸ್ ವರದಿ ಮಾಡಿದೆ.**

## ದಾಖಲೆಯ 43 ದಿನಗಳ ಆಡಳಿತ ಬಿಕ್ಕಟ್ಟು ಅಂತ್ಯ : ಮಸೂದೆಗೆ ಅಧ್ಯಕ್ಷ ಟ್ರಂಪ್ ಸಹಿ



**ವಾಷಿಂಗ್ಟನ್:** ಅಲ್ಪಾವಧಿಗೆ ಅಗತ್ಯವಿದ್ದ ವೆಚ್ಚ ಮಸೂದೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದರಿಂದಾಗಿ, ಕಳೆದ 43 ದಿನಗಳಿಂದ ಅಮೆರಿಕದಲ್ಲಿ ತಲೆದೋರಿದ್ದ ಆಡಳಿತ ಬಿಕ್ಕಟ್ಟು ಅಂತ್ಯಗೊಂಡಿದೆ. ಇದರೊಂದಿಗೆ, ವಿವಿಧ ಇಲಾಖೆಗಳು ಅಲ್ಪಾವಧಿಗೆ ಕಾರ್ಯ ನಿರ್ವಹಿಸಲು ಅಗತ್ಯವಿರುವ ಅನುದಾನ ಲಭ್ಯವಾಗಿದೆ. ಆರೋಗ್ಯ ವಿಮೆ ಸಬ್ಸಿಡಿ ಮುಂದುವರಿಸುವ ವಿಷಯದಲ್ಲಿ ಡೆಮಾಕ್ರಟಿಕ್ ಮತ್ತು ರಿಪಬ್ಲಿಕನ್ ಪಕ್ಷಗಳ ನಡುವೆ ಹಗ್ಗ ಜಗ್ಗಾಟ ನಡೆದಿತ್ತು. ಇದಕ್ಕಾಗಿ ಹಾಕಲಾದ ಮತದಲ್ಲಿ 222–209 ಮತಗಳಿಂದ ಆಡಳಿತಾರೂಢ ರಿಪಬ್ಲಿಕನ್ ಪಕ್ಷ ಹಿಡಿತ ಸಾಧಿಸಿತು. ಮಸೂದೆಗೆ ಅಧ್ಯಕ್ಷ ಟ್ರಂಪ್ ಸಹಿ ಬೀಳುತ್ತಿದ್ದಂತೆ 43 ದಿನಗಳ ಬಿಕ್ಕಟ್ಟು ಅಂತ್ಯಗೊಂಡಿತು. ಇಷ್ಟು ದಿನಗಳ ಕಾಲ ನೌಕರಿ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದ ಕಾರ್ಮಿಕರು, ಗುರುವಾರದಿಂದ ಮತ್ತೆ ತಮ್ಮ ಕಚೇರಿಗಳತ್ತ ಹೆಜ್ಜೆ ಹಾಕಿದರು. ಆದರೆ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದ್ದರ ಮಾಹಿತಿ ಲಭ್ಯವಾಗಿಲ್ಲ. ಅನುದಾನವನ್ನು ಸರ್ಕಾರವು ಜ. 30ರವರೆಗೆ ವಿಸ್ತರಿಸಿದೆ. ಇದರಿಂದ ಅಲ್ಲಿನ ಸರ್ಕಾರದ ಒಟ್ಟು 38 ಟ್ರಿಲಿಯನ್ ಅಮೆರಿಕನ್ ಡಾಲರ್ ಸಾಲಕ್ಕೆ 1.8 ಟ್ರಿಲಿಯನ್ ಡಾಲರ್ ಸೇರಿಕೊಂಡಿದೆ. ಆರೋಗ್ಯ ಸೇವೆಗಳಿಗೆ ಅಮೆರಿಕ ಕುಟುಂಬಗಳು ದುಪ್ಪಟ್ಟು ವೆಚ್ಚ ಮಾಡಬೇಕಾಗುತ್ತದೆ. ಜನರು ಇಂತಹ ಪರಿಸ್ಥಿತಿಯನ್ನು ಎಂದಿಗೂ ಎದುರಿಸಿರಲಿಲ್ಲ ಎಂದು ಸೆನೆಟ್‌ನಲ್ಲಿ ಡೆಮಾಕ್ರಟಿಕ್ ನಾಯಕ ಚಕ್ ಶುಮರ್ ಪ್ರತಿಕ್ರಿಯಿಸಿದ್ದಾರೆ. ಆಡಳಿತದಲ್ಲಿ ತಲೆದೋರಿರುವ ಬಿಕ್ಕಟ್ಟು ಶಮನಕ್ಕಾಗಿ ಮಾತುಕತೆಗೆ ಬರುವಂತೆ ಡೆಮಾಕ್ರಟಿಕ್ ಪಕ್ಷದ ಸಂಸದರು ನೀಡಿದ ಆಹ್ವಾನವನ್ನು ತಿರಸ್ಕರಿಸಿದ ರಿಪಬ್ಲಿಕನ್ನರು, ವೆಚ್ಚ ಮಸೂದೆಗೆ ಮೊದಲು ಅನುಮೋದನೆ ಸಿಗಬೇಕು ಎಂದು ಪಟ್ಟು ಹಿಡಿದಿದ್ದರು. ಅಮೆರಿಕದ 43 ದಿನಗಳ ಬಿಕ್ಕಟ್ಟು ಶಮನದ ಶ್ರೇಯ ಯಾವ ಪಕ್ಷಕ್ಕೂ ಸಿಗದ ಸ್ಥಿತಿ ನಿರ್ಮಾಣವಾಗಿದೆ. ಮಾಧ್ಯಮಗಳು ನಡೆಸಿದ ಸಮೀಕ್ಷೆಯಲ್ಲಿ ಅಮೆರಿಕದ ಶೇ 50ರಷ್ಟು ಜನರು ಈ ಬಿಕ್ಕಟ್ಟಿಗೆ ರಿಪಬ್ಲಿಕನ್ ಪಕ್ಷದವರೇ ಕಾರಣ ಎಂದು ಆರೋಪಿಸಿದ್ದಾರೆ. ಶೇ 47ರಷ್ಟು ಜನ ಡೆಮಾಕ್ರೆಟ್‌ಗಳನ್ನು ತೆಗಳುತ್ತಿದ್ದಾರೆ.

# ದೆಹಲಿ ಸ್ಫೋಟ ಖಂಡಿಸಿದ ಬೆಂಜಮಿನ್ ನೆತನ್ಯಾಹು

## ಉಗ್ರರು ನಮ್ಮ ನಗರಗಳನ್ನು ಅಲುಗಾಡಿಸಬಹುದು ನಮ್ಮ ಆತ್ಮವನ್ನಲ್ಲ

**ಜೆರುಸಲೇಂ:** ದೆಹಲಿ ಕಾರು ಬಾಂಬ್ ಸ್ಫೋಟ ಘಟನೆಯನ್ನು ಖಂಡಿಸಿರುವ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು, ಭಾರತದ ಭಯೋತ್ಪಾದನಾ ವಿರೋಧಿ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕೆಂಪು ಕೋಟೆ ಮೆಟ್ರೋ ನಿಲ್ದಾಣದ ಬಳಿ ನಡೆದ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಆತ್ಮೀಯ ಗೆಳೆಯ ಭಾರತದ ಪ್ರಧಾನಮಂತ್ರಿ, ನರೇಂದ್ರ ಮೋದಿ ಮತ್ತು ಭಾರತದ ಧೈರ್ಯಶಾಲಿ ಜನರಿಗೆ ಸಾರಾ, ನಾನು ಮೆಚ್ಚುಗೆ ಸೂಚಿಸುತ್ತೇವೆ. ಭೀಕರ ಭಯೋತ್ಪಾದಕ ದಾಳಿಯನ್ನು ಎದುರಿಸಿಯೂ ಧೈರ್ಯವಾಗಿ ನಿಂತಿರುವ ಭಾರತ ನಿಜಕ್ಕೂ ಜಗತ್ತಿಗೆ ಪ್ರೇರಣೆಯಾಗಿದೆ. ದೆಹಲಿ ಸ್ಫೋಟದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಇಸ್ರೇಲ್ ಜನರು ಆಳವಾದ ಸಂತಾಪವನ್ನು ಸೂಚಿಸಿದ್ದಾರೆ. ಈ ಸಮಯದಲ್ಲಿ ಇಸ್ರೇಲ್ ದುಃಖ, ಶಕ್ತಿಯಲ್ಲಿ ನಿಮ್ಮೊಂದಿಗೆ ಬಲವಾಗಿ ನಿಂತಿದೆ ಎಂದು ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. ಭಾರತ ಮತ್ತು ಇಸ್ರೇಲ್ ಪ್ರಾಚೀನ ನಾಗರಿಕತೆಗಳಾಗಿದ್ದು, ಅವು ಭಯೋತ್ಪಾದನೆ ಎಂಬ ಒಂದೇ ರೀತಿಯ ಅಗ್ನಿಪರೀಕ್ಷೆಯನ್ನು ಎದುರಿಸುತ್ತಿವೆ. ಆದರೆ ಈ ಹೋರಾಟದಲ್ಲಿ ಅಂತಿಮ ಜಯ ಎರಡೂ ರಾಷ್ಟ್ರಗಳದ್ದಾಗಲಿದೆ. ಭಯೋತ್ಪಾದನೆ ವಿರೋಧಿ ಹೋರಾಟದಲ್ಲಿ ಭಾರತ, ಇಸ್ರೇಲ್‌ಗಳೆರಡೂ ಪರಸ್ಪರ ಹೆಗಲು ಕೊಟ್ಟು ಮುನ್ನಡೆಯಲಿವೆ ಎಂದು ಇಸ್ರೇಲ್ ಪ್ರಧಾನಿ ಭರವಸೆಯ ಮಾತುಗಳನ್ನಾಡಿದ್ದಾರೆ. ಭಾರತ ಮತ್ತು ಇಸ್ರೇಲ್ ಶಾಶ್ವತ ಸತ್ಯಗಳ ಮೇಲೆ ನಿಂತಿರುವ ಪ್ರಾಚೀನ ನಾಗರಿಕತೆಗಳು. ಭಯೋತ್ಪಾದನೆ ನಮ್ಮ ನಗರಗಳನ್ನು ಹೊಡೆಯಬಹುದು. ಆದರೆ ಅದು ನಮ್ಮ ಆತ್ಮಗಳನ್ನು ಎಂದಿಗೂ ಅಲುಗಾಡಿಸುವುದಿಲ್ಲ. ನಮ್ಮ ರಾಷ್ಟ್ರಗಳ ಬೆಳಕು ನಮ್ಮ ಶತ್ರುಗಳ ಕತ್ತಲೆಯನ್ನು ಮೀರಿಸುತ್ತದೆ ಎಂದು ಬೆಂಜಮಿನ್ ನೆತನ್ಯಾಹು ಅವರು ಮಾರ್ಮಿಕವಾಗಿ ಹೇಳಿದ್ದಾರೆ. ಅತ್ತ ಅಮೆರಿಕ ಕೂಡ ಕೆಂಪು ಕೋಟೆ ಮೆಟ್ರೋ ನಿಲ್ದಾಣ ಸಮೀಪ ಕಾರು ಬಾಂಬ್ ಸ್ಫೋಟ ದಾಳಿಯನ್ನು ಅಮೆರಿಕ ಕೂಡ ಖಂಡಿಸಿದ್ದು, ಭಾರತ ಈ ಘಟನೆಯ ಬಗ್ಗೆ ನಡೆಸುತ್ತಿರುವ ತನಿಖೆಯ ರೀತಿಯನ್ನು ಸ್ವಾಗತಿಸಿದೆ. ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಟ್ರಂಪ್ ಆಡಳಿತ ಸಾಂತ್ವನ ಹೇಳಿದೆ.

2008ರಲ್ಲಿ ನಡೆದ ಮುಂಬೈ ದಾಳಿ ಮಾದರಿಯಲ್ಲಿ ದೆಹಲಿಯಲ್ಲೂ ಸ್ಫೋಟ ನಡೆಸಲು ಭಯೋತ್ಪಾದಕರು ಸಂಚು ರೂಪಿಸಿದ್ದರು ಎಂಬುದು ಎನ್‌ಐಎ ತನಿಖೆಯಲ್ಲಿ ದೃಢಪಟ್ಟಿದೆ. ನಗರದ ರೈಲ್ವೆ ನಿಲ್ದಾಣಗಳು, ಶಾಪಿಂಗ್ ಮಾಲ್‌ಗಳು, ಕೆಂಪು ಕೋಟೆ, ಇಂಡಿಯಾ ಗೇಟ್, ಕಾನ್ಸ್ಟಿಟ್ಯೂಷನ್ ಕ್ಲಬ್ ಮತ್ತು ಗೌರಿ ಶಂಕರ್ ದೇವಾಲಯವನ್ನು ಗುರಿಯಾಗಿಸಿಕೊಂಡು ಸರಣಿ ದಾಳಿಗಳನ್ನು ನಡೆಸಲು ಸಂಚು ರೂಪಿಸಲಾಗಿತ್ತು ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.



**ರಾಕ್ಷಸರನ್ನು ಶಿಕ್ಷಿಸಲಿದೆ**

**ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೆಹಲಿ ಕಾರು ಬಾಂಬ್ ಸ್ಫೋಟ ಘಟನೆಯನ್ನು ಭಯೋತ್ಪಾದಕ ದಾಳಿ ಎಂದು ಘೋಷಿಸಿದ್ದು, ಈ ದಾಳಿಗೆ ತಕ್ಕ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಘೋಷಣೆ ಮಾಡಿದೆ. ಈ ನಿಟ್ಟಿನಲ್ಲಿ ಎನ್‌ಐಎ ತನಿಖೆಯ ಪ್ರಗತಿಯಲ್ಲಿದ್ದು, ಶೀಘ್ರದಲ್ಲೇ ದೇಶವು ದೆಹಲಿಯಲ್ಲಿ ಮುಗ್ಧ ಜನರ ರಕ್ತ ಹರಿಸಿದ ರಾಕ್ಷಸರನ್ನು ಶಿಕ್ಷಿಸಲಿದೆ.**

**ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಜಾಗತಿಕ ಖಂಡನೆ ವ್ಯಕ್ತವಾಗುತ್ತಿದೆ. ಕಾರು ಬಾಂಬ್ ಸ್ಫೋಟ ಘಟನೆಯನ್ನು ಅಮೆರಿಕ ಸೇರಿದಂತೆ ಹಲವು ದೇಶಗಳು ಖಂಡಿಸಿದ್ದು, ಈ ಕಠಿಣ ಸಂದರ್ಭದಲ್ಲಿ ಭಾರತದೊಂದಿಗೆ ಗಟ್ಟಿಯಾಗಿ ನಿಲ್ಲುವುದಾಗಿ ಘೋಷಿಸಿವೆ. ಅದೇ ರೀತಿ ದೆಹಲಿ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಭಾರತದ ಭಯೋತ್ಪಾದನಾ ವಿರೋಧಿ ಹೋರಾಟಕ್ಕೆ ಬೆಂಬಲ ಘೋಷಿಸಿದ್ದಾರೆ. ಅಲ್ಲದೇ ಭಾರತ, ಇಸ್ರೇಲ್ ಎರಡೂ ಉಗ್ರವಾದದ ಸಮಸ್ಯೆಯನ್ನು ಎದುರಿಸುತ್ತಿದೆ.**

**– ಬೆಂಜಮಿನ್ ನೆತನ್ಯಾಹು**
**ಇಸ್ರೇಲ್ ಪ್ರಧಾನಮಂತ್ರಿ**

# ವಿಧಾನಸಭೆ ಚುನಾವಣೆ ಫಲಿತಾಂಶಕ್ಕೆ ಕ್ಷಣಗಣನೆ

**ಪಾಟ್ನಾ:** ಎನ್‌ಡಿಎ ಮತ್ತು ಮಹಾಘಟಬಂಧನ್ ನಡುವೆ ಜಿದ್ದಾಜಿದ್ದಿನ ಕಣವಾಗಿ ರುವ ಬಿಹಾರ ವಿಧಾನ ಸಭೆ ಚುನಾವಣೆ ಫಲಿತಾಂಶ ಇಂದು ಪ್ರಕಟಗೊಳ್ಳಲಿದ್ದು, ಹಲವರ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ. ಒಟ್ಟು 243 ವಿಧಾನಸಭಾ ಕ್ಷೇತ್ರಗಳಲ್ಲಿ ಯಾವುದೇ ಮೈತ್ರಿಕೂಟ ಸರಳ ಬಹುಮತದೊಂದಿಗೆ ಅಧಿಕಾರ ಹಿಡಿಯಬೇಕು ಎಂದರೆ, 122 ಸ್ಥಾನಗಳನ್ನು ಗೆಲ್ಲಬೇಕು. ಬೆಳಗ್ಗೆ 8 ಗಂಟೆಯಿಂದ ರಾಜ್ಯದ ಎಲ್ಲಾ ಮತಗಟ್ಟೆಗಳಲ್ಲಿ ಏಕಕಾಲಕ್ಕೆ ಮತ ಎಣಿಕೆ ಪ್ರಾರಂಭವಾಗಲಿದ್ದು, ಬಹುತೇಕ ಮಧ್ಯಾಹ್ನದೊಳಗೆ ಸ್ಪಷ್ಟ ಚಿತ್ರಣ ಹೊರಬೀಳಲಿದೆ. ಈ ಬಾರಿ ಬಿಹಾರದಲ್ಲಿ ದಾಖಲೆಯ ಮತದಾನ ನಡೆದಿರುವುದರಿಂದ ತಮಗೆ ಬಹುಮತ ಸಿಗಲಿದೆ ಎಂಬ ಲೆಕ್ಕಾಚಾರ ಹಲವರಲ್ಲಿ ಇದೆ. ಮತಗಟ್ಟೆ ಸಮೀಕ್ಷೆಗಳು ಈ ಬಾರಿ ರಾಜ್ಯದಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದಿವೆ.



ಆದರೆ, ಮಹಾಘಟ್ ಬಂಧನ್ ಇದನ್ನು ನಿರಾಕರಿಸಿದ್ದು ಈ ಬಾರಿ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್ಚಿನ ಮತದಾನವಾಗಿರುವುದರಿಂದ ಇದು ಆಡಳಿತ ವಿರೋಧಿ ಅಲೆಯ ಸಂಕೇತವಾಗಿದೆ. ನಾವೇ ಅಧಿಕಾರಕ್ಕೆ ಅಧಿಕಾರಕ್ಕೆ ಬರುತ್ತೇವೆ ಎಂಬ ವಿಶ್ವಾಸದಲ್ಲಿದ್ದಾರೆ.

ಅಂತಿಮವಾಗಿ ಮತದಾರರ ಚಿತ್ತ ಯಾರ ಕಡೆ ಎಂಬುದು ಮತ ಎಣಿಕೆಯಲ್ಲಿ ಬಹಿರಂಗಗೊಳ್ಳಲಿದೆ. ಬಿಹಾರದಲ್ಲಿ ಒಟ್ಟಾರೆ 66.91% ಮತದಾನವಾಗಿದ್ದು, ಇದು ಅದರ ಚುನಾವಣಾ ಇತಿಹಾಸದಲ್ಲಿ ದಾಖಲೆಯಾಗಿದೆ. ಮೊದಲ ಹಂತದ ಮತದಾನ 65.08% ಆಗಿದ್ದು, ಅದು ಸ್ವತಃ ದಾಖಲೆಯಾಗಿತ್ತು ಮತ್ತು ನಂತರ ಎರಡನೇ ಹಂತದ ಮತದಾನವು 68.76% ರಷ್ಟಿತ್ತು. ಈ ಬಾರಿ ಬಿಹಾರದ ಜನರು ಐದನೆ ಬಾರಿ ಮತ್ತೊಮ್ಮೆ ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗುತ್ತಾರೆಯೇ ಅಥವಾ ಬದಲಾವಣೆಗೊಂಡು ಲಾಲು ಕುಡಿ ಕುಟುಂಬ ಪರ್ವದಲ್ಲಿ ತೇಜಸ್ವಿ ಯಾದವ್ ಹೊಸ ಚುಕ್ಕಾಣಿ ಹಿಡಿಯುತ್ತಾರಾ ಎಂಬುದರ ಬಗ್ಗೆ ಕಾತರರಾಗಿದ್ದಾರೆ. ಸುಮಾರು 7.45 ಕೋಟಿ ಜನರು ಒಟ್ಟಾರೆ ಸ್ಪರ್ಧಿಸಿರುವ 2616 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭಗೊಳ್ಳಲಿದ್ದು, ಸುಮಾರು 10 ಗಂಟೆ ವೇಳೆಗೆ ಮುಂದಿನ ಸರ್ಕಾರ ಯಾರು ರಚಿಸುತ್ತಾರೆ ಎಂಬ ಬಗ್ಗೆ ಮುನ್ನೋಟ ಸಿಗಲಿದೆ. ಈಗಾಗಲೇ 46 ಕೇಂದ್ರಗಳಲ್ಲಿ ಬಿಗಿಭದ್ರತೆ ನಡುವೆ ಮತ ಎಣಿಕೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

# ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್ ಅಸ್ಸಾಂನಲ್ಲಿ 15 ಮಂದಿ ಬಂಧನ

**ಗುವಾಹಟಿ:** ದೆಹಲಿ ಸ್ಫೋಟದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಿದ್ದ 15 ಮಂದಿಯನ್ನು ಅಸ್ಸಾಂನಲ್ಲಿ ಪೊಲೀಸರು ಬಂಧಿಸಿದ್ದಾರೆ. ಹಿಂಸಾಚಾರವನ್ನು ವೈಭವೀಕರಿಸುವವರ ವಿರುದ್ಧ ಅಸ್ಸಾಂ ಪೊಲೀಸರು ರಾಜಿಯಾಗುವುದಿಲ್ಲ ಕಳೆದ ರಾತ್ರಿ, ಒಂಬತ್ತು ಜನರನ್ನು ಬಂಧಿಸಲಾಗಿದ್ದು, ಈ ಸಂಬಂಧ ಒಟ್ಟು ಶಂಕಿತರ ಸಂಖ್ಯೆ 15ಕ್ಕೆ ತಲುಪಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.



ರಾತ್ರಿ ನಡೆದ ಆರು ಬಂಧನಗಳ ಜೊತೆಗೆ, ನಾವು ರಫಿಜುಲ್ ಅಲಿ, ಫೊರಿದ್ ಉದ್ದೀನ್ ಲಸ್ಕರ್, ಇನಾಮುಲ್ ಇಸ್ಲಾಂ, ಫಿರುಜ್ ಅಹ್ಮದ್ ಅಲಿಯಾಸ್ ಪಾಪೋನ್, ಶಾಹಿಲ್ ಶೋಮನ್ ಸಿಕ್ದರ್ ಅಲಿಯಾಸ್ ಶಾಹಿದುಲ್ ಇಸ್ಲಾಂ, ರಕಿಬುಲ್ ಸುಲ್ತಾನ್, ನಾಸಿಮ್ ಅಕ್ರಮ್, ತಸ್ಲಿಮ್ ಅಹ್ಮದ್, ಅಬ್ದುರ್ ರೋಹಿಮ್‌ಮೊಲ್ಲಾ ಅಲಿಯಾಸ್ ಬಪ್ಪಿ ಹುಸೇನ್ ಅವರನ್ನು ಬಂಧಿಸಿದ್ದೇವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಾಂಬ್ ಸ್ಫೋಟ ಎಲ್ಲಡೆ ಖಂಡನೆ ವ್ಯಕ್ತವಾದರೆ ಕೆಲವು ದುಷ್ಟರು ಸಂಭ್ರಮಿಸಿದ್ದರು ಈ ಸಂಬಂಧ ರಾಜ್ಯದ ವಿವಿಧ ಜಿಲ್ಲೆಗಳಿಂದ 35 ಜನರನ್ನು ಗುರುತಿಸಲಾಗಿದೆ ಎಂದು ಅವರು ಹೇಳಿದರು.

ನಾವು ಅವರ ಸಂಪರ್ಕಗಳ ಬಗ್ಗೆ ತನಿಖೆ ನಡೆಸುತ್ತೇವೆ ಮತ್ತು ಯಾರಾದರೂ ಬಾಂಗ್ಲಾದೇಶ ಅಥವಾ ಬೇರೆ ಯಾವುದೇ ದೇಶದೊಂದಿಗೆ ಸಂಪರ್ಕ ಹೊಂದಿದ್ದಾರೆಂದು ನಮಗೆ ಕಂಡುಬಂದರೆ, ನಾವು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಲವರು ಈಗ ತಮ ಪೋಸ್ಟ್‌ಗಳನ್ನು ಅಳಿಸುತ್ತಿದ್ದಾರೆ, ಆದರೆ ನಾವು ಸ್ಕ್ರೀನ್‌ಶಾಟ್‌ಗಳನ್ನು ತೆಗೆದುಕೊಂಡಿದ್ದೇವೆ, ಈ ವಿಷಯದಲ್ಲಿ ಕಠಿಣವಾಗಿರುತ್ತೇವೆ ಎಂದು ಅವರು ಸಿಎಂ ಹೇಳಿದ್ದಾರೆ.

## ಅಮೆರಿಕನ್ನರಿಗೆ ತರಬೇತಿ ನೀಡಿದ ಬಳಿಕ ವಿದೇಶಿಯರು ವಾಪಸಾಗಬೇಕು: ಸ್ಕಾಟ್ ಬೆಸೆಂಟ್

**ನ್ಯೂಯಾರ್ಕ್:** ಕೌಶಲ ಹೊಂದಿರುವ ವಿದೇಶಿ ಉದ್ಯೋಗಿಗಳನ್ನು ಕರೆತರುವುದು, ಅವರಿಂದ ಅಮೆರಿಕನ್ನರಿಗೆ ತರಬೇತಿ ಕೊಡಿಸುವುದು. ಆ ಬಳಿಕ ಅವರು ತಮ್ಮ ದೇಶಗಳಿಗೆ ಮರಳಬೇಕು. ಇದು ಎಚ್–1ಬಿ ವೀಸಾದ ಮುಖ್ಯ ಉದ್ದೇಶ ಎಂದು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ. ಫಾಕ್ಸ್ ನ್ಯೂಸ್‌ಗೆ ಸಂದರ್ಶನ ನೀಡಿರುವ ಅವರು, 'ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಉದ್ದೇಶವೂ ಇದೇ ಆಗಿದೆ' ಎನ್ನುವ ಮೂಲಕ ಎಚ್–1ಬಿ ವೀಸಾ ಯೋಜನೆಯನ್ನು ಸಮರ್ಥಿಸಿಕೊಂಡಿದ್ದಾರೆ.



ವಿದೇಶಗಳಿಂದ ಬರುವ ಉದ್ಯೋಗಿಗಳು ಮೂರು, ಐದು ಇಲ್ಲವೇ ಏಳು ವರ್ಷ ಇಲ್ಲಿ ಕೆಲಸ ಮಾಡಬೇಕು. ಈ ಅವಧಿಯಲ್ಲಿ ಅವರು ಅಮೆರಿಕನ್ ಉದ್ಯೋಗಿಗಳಿಗೆ ತರಬೇತಿ ನೀಡಿ ತಮ್ಮ ದೇಶಗಳಿಗೆ ಹಿಂತಿರುಗಬೇಕು. ನಂತರ, ಅಮೆರಿಕದ ನೌಕರರೇ ಎಲ್ಲ ಕೆಲಸಗಳನ್ನು ನಿರ್ವಹಣೆ ಮಾಡುವಂತಾಗಬೇಕು ಎಂಬುದು ಟ್ರಂಪ್ ಅವರ ಉದ್ದೇಶವಾಗಿದೆ' ಎಂದು ಸ್ಕಾಟ್ ಹೇಳಿದ್ದಾರೆ. ಕೆಲವು ಕೆಲಸಗಳನ್ನು ನಿರ್ವಹಿಸಬಲ್ಲಂತಹ ಪ್ರತಿಭಾವಂತರು ಅಮೆರಿಕದಲ್ಲಿ ಇಲ್ಲ' ಎಂಬ ಟ್ರಂಪ್ ಅವರ ಹೇಳಿಕೆ ಕುರಿತು ಪ್ರಶ್ನಿಸಿದಾಗ, ಕಳೆದ 20–30 ವರ್ಷಗಳವರೆಗೆ ಕೆಲ ನಿರ್ದಿಷ್ಟ ಕೆಲಸಗಳನ್ನು ಇತರ ದೇಶಗಳ ನುರಿತ ಕೆಲಸಗಾರರಿಂದಲೇ ಮಾಡಿಸಲಾಗಿದೆ. ಈಗ, ನೀವು ರಾತ್ರೋರಾತ್ರಿ ಹಡಗು ನಿರ್ಮಾಣ ಕಲಿಯಬೇಕು ಎಂದು ಸ್ಥಳೀಯ ಉದ್ಯೋಗಿಗಳಿಗೆ ಸೂಚನೆ ನೀಡಲು ಸಾಧ್ಯವೇ? ಎಂದು ಅವರು ಉತ್ತರಿಸಿದ್ದಾರೆ.

**ಕ್ರಿಸ್ಟಿ ಸಮರ್ಥನೆ:** ಅಮೆರಿಕವು ಎಚ್–1ಬಿ ವೀಸಾ ಕಾರ್ಯಕ್ರಮವನ್ನು ಮುಂದುವರಿಸಲಿದೆ. ಈ ವೀಸಾ ಸೌಲಭ್ಯ ಪಡೆದು ಇಲ್ಲಿ ಬಂದವರು ಭಯೋತ್ಪಾದಕರನ್ನು ಹಾಗೂ ಅಮೆರಿಕ ದ್ವೇಷಿಸುವವರನ್ನು ಬೆಂಬಲಿಗರಾಗಿರಬಾರದು' ಎಂದು ಆಂತರಿಕ ಭದ್ರತಾ ಇಲಾಖೆ ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ಹೇಳಿದ್ದಾರೆ.

ಫಾಕ್ಸ್ ನ್ಯೂಸ್ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಉದ್ಯೋಗ ಅರಸಿ ಅಮೆರಿಕಕ್ಕೆ ಬರುವ ವಿದೇಶಿಯರು ಒಳ್ಳೆಯ ಉದ್ದೇಶದೊಂದಿಗೆ ಇಲ್ಲಿ ಕೆಲಸ ಮಾಡುತ್ತಾರೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲಾಗುವುದು. ಇದಕ್ಕೆ ಪೂರಕವಾಗಿರುವ ಹಾಗೆ ವಲಸೆ ನೀತಿಗಳನ್ನು ರೂಪಿಸಲಾಗಿದೆ ಎಂದು ಹೇಳಿದ್ದಾರೆ.

## ರಫ್ತು, ಎಂಎಸ್‌ಎಂಇಗಳನ್ನು ಉತ್ತೇಜಿಸಲು 20,000 ಕೋಟಿ ರೂ.ಗಳ ಕ್ರೆಡಿಟ್ ಗ್ಯಾರಂಟಿ ಯೋಜನೆಗೆ ಸಂಪುಟ ಅನುಮೋದನೆ

**ನವದೆಹಲಿ:** ರಫ್ತಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಸಂಪುಟದ ನಿರ್ಧಾರಗಳು ಜಾಗತಿಕ ಸ್ಪರ್ಧಾತ್ಮಕತೆಯನ್ನು ಸುಧಾರಿಸುತ್ತವೆ, ಸ್ವಾವಲಂಬನೆಯ ಕನಸನ್ನು ನನಸಾಗಿಸಲು ಸಹಾಯ ಮಾಡುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ರಫ್ತು ಉತ್ತೇಜನ ಮಿಷನ್, ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಗೆ ಅನುಮೋದನೆ ನೀಡಲಾಯಿತು. ಭಾರತದಲ್ಲಿ ತಯಾರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ವಿಶ್ವ ಮಾರುಕಟ್ಟೆಯಲ್ಲಿ ಇನ್ನಷ್ಟು ಪ್ರತಿಧ್ವನಿಸುತ್ತದೆ.

ರಫ್ತು ಸ್ಪರ್ಧಾತ್ಮಕತೆಯನ್ನು ಸುಧಾರಿಸುವ, ಎಂಎಸ್‌ಎಂಇಗಳು, ಮೊದಲ ಬಾರಿಗೆ ರಫ್ತು ಮಾಡುವವರು, ಕಾರ್ಮಿಕ-ತೀವ್ರ ವಲಯಗಳಿಗೆ ಸಹಾಯ ಮಾಡುವ ರಫ್ತು ಉತ್ತೇಜನ ಮಿಷನ್ ಅನ್ನು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ ಎಂದು ಮೋದಿ Xನಲ್ಲಿ ಪೋಸ್ಟ್ ಮಾಡಿದ್ದಾರೆ. ಇದು ಫಲಿತಾಂಶ ಆಧಾರಿತ ಪರಿಣಾಮಕಾರಿಯಾದ ಕಾರ್ಯವಿಧಾನವನ್ನು ನಿರ್ಮಿಸಲು ಪ್ರಮುಖ ಪಾಲುದಾರರನ್ನು ಒಟ್ಟುಗೂಡಿಸುತ್ತದೆ ಎಂದು ಅವರು ಹೇಳಿದರು. ಗ್ರ್ಯಾಫೈಟ್, ಸೀಸಿಯಮ್, ರುಬಿಡಿಯಮ್ ಜಿರ್ಕೋನಿಯಂಗಳ ರಾಯಲ್ಟಿ ದರಗಳನ್ನು ತರ್ಕಬದ್ಧಗೊಳಿಸುವ ನಿರ್ಧಾರವು ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ, ಉದ್ಯೋಗ ಅಕಾಶಗಳನ್ನು ಸೃಷ್ಟಿಸುತ್ತದೆ ಎಂದು ಮೋದಿ ಹೇಳಿದರು. ಹಸಿರು ಇಂಧನಕ್ಕೆ ನಿರ್ಣಾಯಕವಾದ ಗ್ರ್ಯಾಫೈಟ್, ಸೀಸಿಯಮ್, ರುಬಿಡಿಯಮ್, ಜಿರ್ಕೋನಿಯಂ ಖನಿಜಗಳ ರಾಯಲ್ಟಿ ದರಗಳನ್ನು ತರ್ಕಬದ್ಧಗೊಳಿಸಲು ಸಂಪುಟವು ಅನುಮೋದನೆ ನೀಡಿದೆ.

ಈ ಸಂಪುಟದ ನಿರ್ಧಾರವು ಸುಸ್ಥಿರತೆ ಮತ್ತು ಸ್ವಾವಲಂಬನೆಯನ್ನು ಹೆಚ್ಚಿಸುತ್ತದೆ. ಇದು ಪೂರೈಕೆ ಸರಪಳಿಗಳನ್ನು ಬಲಪಡಿಸುತ್ತದೆ ಮತ್ತು ಉದ್ಯೋಗಾವಕಾಶಗಳನ್ನು ಸಹ ಸೃಷ್ಟಿಸುತ್ತದೆ ಎಂದು ಪ್ರಧಾನಿ ಹೇಳಿದರು.

**ಸಚಿವ ಸಂಪುಟದಿಂದ ಅನುಮೋದಿಸಲ್ಪಟ್ಟಿರುವ ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಯು ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ, ಸುಗಮ ವ್ಯಾಪಾರ ಕಾರ್ಯಾಚರಣೆಗಳನ್ನು ಖಚಿತಪಡಿಸುತ್ತದೆ, ಆತ್ಮನಿರ್ಭರ ಭಾರತದ ನಮ್ಮ ಕನಸನ್ನು ನನಸಾಗಿಸಲು ಸಹಾಯ ಮಾಡುತ್ತದೆ.**

**–ನರೇಂದ್ರ ಮೋದಿ**
**ಪ್ರಧಾನ ಮಂತ್ರಿ**




# ಇಸ್ಲಾಮಾಬಾದ್‌ನಲ್ಲಿ ನಡೆದ ಸ್ಫೋಟಕ್ಕೆ ಭಾರತವೇ ನೇರ ಹೊಣೆ

## ದೆಹಲಿ ಸ್ಫೋಟ ಬೆನ್ನಲ್ಲೇ ಭಾರತ ಜೊತೆ ನೇರ ಯುದ್ಧಕ್ಕೆ ಸಿದ್ಧ ಎಂದು ಘೋಷಿಸಿದ ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್

**ಇಸ್ಲಾಮಾಬಾದ್:** ಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ವೇಳೆ ಸೋತು ಸುಣ್ಣವಾಗಿದ್ದರೂ ಪಾಕಿಸ್ತಾನ ಮಾತ್ರ ಇನ್ನೂ ತನ್ನ ಹಳೆಯ ಬುದ್ಧಿಯನ್ನು ಬಿಟ್ಟಿಲ್ಲ. ಭಾರತದ ರಾಜಧಾನಿ ದೆಹಲಿಯಲ್ಲಿ ನಡೆದ ಕಾರ್ ಬಾಂಬ್ ಸ್ಫೋಟದ ಬೆನ್ನಲ್ಲೇ, ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಅವರು ಮತ್ತೊಮ್ಮೆ ಪ್ರಚೋದನಕಾರಿ ಹೇಳಿಕೆಯನ್ನು ನೀಡಿದ್ದು, ಪೂರ್ವ ಗಡಿಯಲ್ಲಿ ಭಾರತ, ಪಶ್ಚಿಮ ಗಡಿಯಲ್ಲಿ ಅಫ್ಘಾನ್ ತಾಲಿಬಾನ್ ವಿರುದ್ಧ ಎರಡು ಮುಂಚೂಣಿ ಯುದ್ಧಕ್ಕೆ ತಮ್ಮ ದೇಶವು ಸಿದ್ಧವಾಗಿದೆ ಎಂದು ಹೇಳಿಕೊಂಡಿದ್ದಾರೆ.

- **ಪೂರ್ವ ಗಡಿಯಲ್ಲಿ ಭಾರತ ಮತ್ತು ಪಶ್ಚಿಮ ಗಡಿಯಲ್ಲಿ ಅಫ್ಘಾನ್ ತಾಲಿಬಾನ್ ವಿರುದ್ಧ ಎರಡು ಮುಂಚೂಣಿ ಯುದ್ಧಕ್ಕೆ ಪಾಕ್ ಸಿದ್ಧತೆ**
- **ಭಾರತದ ಜೊತೆ ಮತ್ತೊಂದು ಯುದ್ಧಕ್ಕೆ ದೇಶ ಸಿದ್ಧವಾಗಿದೆ ಎಂದು ಘೋಷಿಸಿದ ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್**
- **ಇಸ್ಲಾಮಾಬಾದ್‌ನಲ್ಲಿ ನಡೆದ ಆತ್ಮಹತ್ಯಾ ಸ್ಫೋಟದಲ್ಲಿ ಭಾರತದ ಬೆಂಬಲಿತ ಗುಂಪುಗಳ ಕೈವಾಡವಿದೆ ಎಂದು ಆರೋಪಿಸಿದ ಪಾಕ್ ಪ್ರಧಾನಿ**

ಅಲ್ಲದೇ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆದ ಸ್ಫೋಟಕ್ಕೆ ಭಾರತವೇ ನೇರ ಹೊಣೆ ಎಂದು ಅವರು ಆರೋಪಿಸಿದ್ದಾರೆ. ಸಾರ್ವಜನಿಕ ಕಾರ್ಯಕ್ರಮ ಒಂದರಲ್ಲಿ ಮಾತನಾಡಿದ ಆಸಿಫ್, ನಾವು ಎರಡು ಕಡೆಯಲ್ಲಿ ಯುದ್ಧಕ್ಕೆ ಸಿದ್ಧರಿದ್ದೇವೆ. ಪೂರ್ವ, ಪಶ್ಚಿಮ ಗಡಿ ಎರಡನ್ನೂ ಎದುರಿಸಲು ನಾವು ಸಿದ್ಧರಿದ್ದೇವೆ. ಮೊದಲ ಸುತ್ತಿನಲ್ಲಿ ಅಲ್ಲಾಹನು ನಮಗೆ ಸಹಾಯ ಮಾಡಿದನು, ಎರಡನೇ ಸುತ್ತಿನಲ್ಲಿಯೂ ಅವನು ನಮಗೆ ಸಹಾಯ ಮಾಡುತ್ತಾನೆ ಎಂದು ಹೇಳಿದ್ದಾರೆ. ಭಾರತದ ನೆಲದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ಕೃತ್ಯವನ್ನು ಭಾರತದ ವಿರುದ್ಧದ ಯುದ್ಧ ಎಂದು ಪರಿಗಣಿಸುವುದಾಗಿ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಘೋಷಿಸಿದ್ದಾರೆ. ಹೀಗಾಗಿ ದೆಹಲಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಆಸಿಫ್ ಅವರ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಜೊತೆಗೆ ಭಾರತದ ಮಿತ್ರ ರಾಷ್ಟ್ರ ಅಫಘಾಸ್ತಾನವನ್ನೂ ಎದುರು ಹಾಕಿಕೊಳ್ಳುವುದಾಗಿ ಅವರು ಹೇಳಿದ್ದಾರೆ.



**ಯುದ್ಧಕ್ಕೆ ಪಾಕಿಸ್ತಾನ ಸಿದ್ಧ ಎಂದ ಆಸಿಫ್:** ಇಸ್ಲಾಮಾಬಾದ್‌ನಲ್ಲಿ ನಡೆದ ಆತ್ಮಹತ್ಯಾ ಸ್ಫೋಟದಲ್ಲಿ 12 ಜನರು ಸಾವನ್ನಪ್ಪಿ 36 ಜನರು ಗಾಯಗೊಂಡ ನಂತರ ಆಸಿಫ್ ಅವರ ಈ ಹೇಳಿಕೆಗಳು ಹೊರಬಿದ್ದಿವೆ. ಈ ಸ್ಫೋಟದ ಹೊಣೆಯನ್ನು ಪಾಕಿಸ್ತಾನಿ ತಾಲಿಬಾನ್ ಹೊತ್ತುಕೊಂಡಿದೆ. ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಹಬಾಜ್ ಷರೀಫ್ ಅವರು ಈ ದಾಳಿಯಲ್ಲಿ ಭಾರತದ ಬೆಂಬಲದೊಂದಿಗೆ ಸಕ್ರಿಯವಾಗಿರುವ ಗುಂಪುಗಳ ಕೈವಾಡವಿದೆ ಎಂದು ಆರೋಪಿಸಿದರೆ, ಖವಾಜಾ ಆಸಿಫ್ ಅವರು ಇದು ಅಫ್ಘಾನ್ ತಾಲಿಬಾನ್ ಕಡೆಯಿಂದ ಬಂದ ಸಂದೇಶ ಎಂದು ಹೇಳಿದ್ದಾರೆ. ಕಾಬೂಲ್‌ನ ಆಡಳಿತಗಾರರು ಪಾಕಿಸ್ತಾನದಲ್ಲಿ ಭಯೋತ್ಪಾದನೆಯನ್ನು ನಿಲ್ಲಿಸಬಹುದು, ಆದರೆ ಈ ಯುದ್ಧವನ್ನು ಇಸ್ಲಾಮಾಬಾದ್‌ವರೆಗೂ ತರುವುದು ಕಾಬೂಲ್‌ನಿಂದ ಬಂದಿರುವ ಸಂದೇಶವಾಗಿದೆ. ಇದಕ್ಕೆ ಪ್ರತಿಕ್ರಿಯಿಸಲು ಪಾಕಿಸ್ತಾನವು ಸಂಪೂರ್ಣ ಶಕ್ತಿಯನ್ನು ಹೊಂದಿದೆ ಎಂದು ಆಸಿಫ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸಂದೇಶ ನೀಡಿದ್ದಾರೆ. ಪಾಕಿಸ್ತಾನದ ಸಂಪನ್ಮೂಲಗಳು ಕುಸಿಯುತ್ತಿದ್ದರೂ, ರಾಜತಾಂತ್ರಿಕ ನಿಲುವು ಹದಗೆಡುತ್ತಿದ್ದರೂ, ಸಚಿವರ ಈ ಉದ್ಧಟತನದ ಹೇಳಿಕೆಯು ಮಿಲಿಟರಿ ಬಲವನ್ನು ಪ್ರದರ್ಶಿಸುವ ಹೊಸ ಪ್ರಯತ್ನವಾಗಿದೆ ಎಂದು ವಿಶ್ಲೇಷಿಸಲಾಗಿದೆ.

**ದೆಹಲಿ ಕಾರು ಸ್ಫೋಟದ ಕುರಿತು ವಿವಾದಾತ್ಮಕ ಹೇಳಿಕೆ:** ದೆಹಲಿಯ ರೆಡ್ ಫೋರ್ಟ್ ಬಳಿ 13 ಜನರನ್ನು ಬಲಿ ತೆಗೆದುಕೊಂಡ ಕಾರು ಸ್ಫೋಟದ ಕುರಿತ ಅವರ ವಿವಾದಾತ್ಮಕ ಹೇಳಿಕೆಗಳ ಬೆನ್ನಲ್ಲೇ ಆಸಿಫ್ ಮತ್ತೊಮ್ಮೆ ತಮ್ಮ ನಾಲಿಗೆ ಹರಿಬಿಟ್ಟಿದ್ದಾರೆ. ರೆಡ್ ಫೋರ್ಟ್ ಬಳಿಯ ಸ್ಫೋಟವನ್ನು ಅವರು ಕೇವಲ ಗ್ಯಾಸ್ ಸಿಲಿಂಡರ್ ಸ್ಫೋಟ ಎಂದು ಲಘುವಾಗಿ ಪರಿಗಣಿಸಿ, ಭಾರತವು ಘಟನೆಯನ್ನು ರಾಜಕೀಯಗೊಳಿಸುತ್ತಿದೆ ಎಂದು ಆರೋಪಿಸಿದ್ದರು. ನಿನ್ನೆ ಮೊನ್ನೆಯವರೆಗೆ ಅದು ಗ್ಯಾಸ್ ಸಿಲಿಂಡರ್ ಸ್ಫೋಟವಾಗಿತ್ತು. ಈಗ ಅವರು ಅದನ್ನು ವಿದೇಶಿ ಪಿತೂರಿ ಎಂದು ಹಣೆಪಟ್ಟಿ ಕಟ್ಟಲು ಪ್ರಯತ್ನಿಸುತ್ತಿದ್ದಾರೆ. ಭಾರತವು ಶೀಘ್ರದಲ್ಲೇ ಅದರ ಹೊಣೆಯನ್ನು ಪಾಕಿಸ್ತಾನದ ಮೇಲೆ ಹಾಕಬಹುದು ಎಂದು ಆಸಿಫ್ ಹೇಳಿದ್ದರು. ಭಾರತೀಯ ಅಧಿಕಾರಿಗಳು ಆಸಿಫ್ ಅವರ ಹೇಳಿಕೆಗಳನ್ನು ಗಮನವನ್ನು ಬೇರೆಡೆಗೆ ಸೆಳೆಯುವ ಹತಾಶ ಪ್ರಯತ್ನ ಎಂದು ತಳ್ಳಿಹಾಕಿದ್ದಾರೆ. ಇದೊಂದು ಭಯೋತ್ಪಾದಕ ಕೃತ್ಯ ಎಂದು ಘೋಷಿಸಿದೆ.

### ಪಾಕ್ ದೌರ್ಬಲ್ಯವನ್ನು ಮುಚ್ಚಿಕೊಳ್ಳುವ ಯತ್ನ

**ಪಾಕಿಸ್ತಾನದ ರಕ್ಷಣಾ ಸಚಿವರು ಭಾರತ ಮತ್ತು ಅಫ್ಘಾನಿಸ್ತಾನದ ವಿರುದ್ಧ ಎರಡು ಮುಂಚೂಣಿ ಯುದ್ಧಕ್ಕೆ ಸಿದ್ಧ ಎಂದು ಹೇಳಿದ್ದಾರೆ. ಇಸ್ಲಾಮಾಬಾದ್ ಸ್ಫೋಟಕ್ಕೆ ಭಾರತವೇ ಕಾರಣ ಎಂದೂ ಆರೋಪಿಸಿದ್ದಾರೆ. ದೆಹಲಿಯಲ್ಲಿ ನಡೆದ ಕಾರ್ ಬಾಂಬ್ ಸ್ಫೋಟದ ಬೆನ್ನಲ್ಲೇ ಈ ಹೇಳಿಕೆ ಹೊರಬಿದ್ದಿದೆ. ಭಾರತವು ಇಂತಹ ಭಯೋತ್ಪಾದಕ ಕೃತ್ಯಗಳನ್ನು ಯುದ್ಧವೆಂದು ಪರಿಗಣಿಸುವುದಾಗಿ ತಿಳಿಸಿದೆ. ಪಾಕಿಸ್ತಾನದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೂ, ಆಪರೇಷನ್ ಸಿಂಧೂರ್ ಕಾರ್ಯಾಚರಣೆ ವೇಳೆ ಸೋತು ಶರಣಾಗಿದ್ದರೂ ಸಚಿವರ ಈ ಹೇಳಿಕೆ ಪಾಕ್ ದೌರ್ಬಲ್ಯವನ್ನು ಮುಚ್ಚಿಕೊಳ್ಳುವ ಯತ್ನ ಎಂದೇ ಹೇಳಲಾಗುತ್ತಿದೆ.**

## ಮಿನಿ ನ್ಯೂಸ್

### ಸಣ್ಣ ಶಬ್ದಕ್ಕೂ ಬೆಚ್ಚಿ ಬೀಳುತ್ತಿದೆ ದೆಹಲಿ

**ನವದೆಹಲಿ:** ಕಾರ್ ಸ್ಫೋಟ ಪ್ರಕರಣದ ನಂತರ ರಾಷ್ಟ್ರ ರಾಜಧಾನಿ ದೆಹಲಿ ಜನ ಒಂದು ಸಣ್ಣ ಶಬ್ದಕ್ಕೂ ಬೆಚ್ಚಿ ಬೀಳುತ್ತಿದ್ದಾರೆ. ಇಂದು ಬೆಳಿಗ್ಗೆ ನೈಋತ್ಯ ದೆಹಲಿಯ ಮಹಿಪಾಲಪುರ ಪ್ರದೇಶದಲ್ಲಿ ಬಸ್ ಟೈರ್ ಸ್ಫೋಟದಿಂದ ಉಂಟಾದ ದೊಡ್ಡ ಶಬ್ದವು ಸ್ಥಳೀಯರಲ್ಲಿ ಭಯ ಸೃಷ್ಟಿಸಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಮಹಿಪಾಲಪುರದ ರಾಡಿಸನ್ ಬಳಿ ಸ್ಫೋಟದಂತಹ ದೊಡ್ಡ ಶಬ್ದ ಕೇಳಿಬಂದಿದೆ ಎಂದು ಬೆಳಿಗ್ಗೆ 9.19 ಕ್ಕೆ ತಮಗೆ ಕರೆ ಬಂದಿದೆ ಎಂದು ದೇಹಿ ಅಗ್ನಿಶಾಮಕ ಸೇವೆಗಳು ತಿಳಿಸಿವೆ, ನಂತರ ಅವರು ಸ್ಥಳಕ್ಕೆ ಮೂರು ಅಗ್ನಿಶಾಮಕ ವಾಹನಗಳನ್ನು ಕರೆಸಿದರು. ವ್ಯಾಪಕ ಪರಿಶೀಲನೆಯ ನಂತರವೂ ಅಧಿಕಾರಿಗಳಿಗೆ ಸ್ಥಳದಲ್ಲಿ ಏನೂ ಸಿಗಲಿಲ್ಲ ಎಂದು ಪೊಲೀಸ್ ಉಪ ಆಯುಕ್ತ ಅಮಿತ್ ಗೋಯೆಲ್ ತಿಳಿಸಿದ್ದಾರೆ. ಕರೆ ಮಾಡಿದವರನ್ನು ಸಂಪರ್ಕಿಸಲಾಯಿತು ಮತ್ತು ಅವರು ಗುರುಗ್ರಾಮ್‌ಗೆ ಹೋಗುವಾಗ ದೊಡ್ಡ ಶಬ್ದ ಕೇಳಿಬಂದಿದೆ ಎಂದು ತಿಳಿಸಿದರು. ನಾವು ಎಲ್ಲವನ್ನೂ ಪರಿಶೀಲಿಸಿದ್ದೇವೆ ಮತ್ತು ಏನೂ ಕಂಡುಬಂದಿಲ್ಲ ಎಂದಿದ್ದಾರೆ. ಸ್ಥಳೀಯ ವಿಚಾರಣೆಯ ಸಮಯದಲ್ಲಿ, ಧೌಲಾ ಕುವಾನ್ ಕಡೆಗೆ ಹೋಗುತ್ತಿದ್ದ ಡಿಟಿಸಿ ಬಸ್‌ನ ಹಿಂಭಾಗದ ಟೈರ್ ಸಿಡಿದಿದೆ ಮತ್ತು ಶಬ್ದ ಅಲ್ಲಿಂದ ಬಂದಿದೆ ಎಂದು ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು ಎಂದು ಡಿಸಿಪಿ ಹೇಳಿದರು. ಪರಿಸ್ಥಿತಿ ಸಾಮಾನ್ಯವಾಗಿದೆ ಮತ್ತು ಚಿಂತಿಸಲು ಏನೂ ಇಲ್ಲ ಎಂದು ಅವರು ಹೇಳಿದರು.

### ವೈಟ್ ಕಾಲರ್ ಉಗ್ರರಿಗಾಗಿ ಕಾಶ್ಮೀರದಲ್ಲಿ ಶೋಧ

**ಶ್ರೀನಗರ:** ವೈಟ್ ಕಾಲರ್ ಭಯೋತ್ಪಾದಕರ ಬಂಧನಕ್ಕೆ ಕಣಿವೆ ರಾಜ್ಯದಲ್ಲಿ ಶೋಧ ನಡೆಸಲಾಗುತ್ತಿದೆ. ವೈಟ್-ಕಾಲರ್ ಭಯೋತ್ಪಾದಕ ಮಾಡ್ಯೂಲ್ ಮತ್ತು ದೆಹಲಿಯ ಕೆಂಪು ಕೋಟೆ ಬಳಿ ಇತ್ತೀಚೆಗೆ ನಡೆದ ಸ್ಫೋಟಕ್ಕೆ ಸಂಬಂಧಿಸಿದಂತೆ ಜಮ್ಮು ಮತ್ತು ಕಾಶ್ಮೀರ ಪೊಲೀಸರ ಕೌಂಟರ್ ಇಂಟೆಲಿಜೆನ್ಸ್ ವಿಭಾಗವು ಇಂದು ಕಣಿವೆಯಾದ್ಯಂತ ಹಲವಾರು ಸ್ಥಳಗಳಲ್ಲಿ ದಾಳಿ ನಡೆಸಿದೆ. ಪ್ರಸ್ತುತ 13 ಸ್ಥಳಗಳಲ್ಲಿ ಕೌಂಟರ್ ಇಂಟೆಲಿಜೆನ್ಸ್ ಕಾಶ್ಮೀರ (ಸಿಐಕೆ) ದಾಳಿ ನಡೆಸುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸುಮಾರು 15 ಜನರನ್ನು ವಿಚಾರಣೆಗಾಗಿ ಬಂಧಿಸಲಾಗಿದೆ ಮತ್ತು ಹಲವಾರು ಡಿಜಿಟಲ್ ಸಾಧನಗಳು ಮತ್ತು ಅಪರಾಧಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಅವರು ಹೇಳಿದರು.

### ಕೆಂಪು ಕೋಟೆ ಸ್ಫೋಟ ಪ್ರಕರಣ ಮೂರನೇ ಕಾರಿಗಾಗಿ ಶೋಧ

**ನವದೆಹಲಿ:** ಕೆಂಪು ಕೋಟೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ಮೂರನೇ ಕಾರನ್ನು ಬಹು ಭದ್ರತಾ ಸಂಸ್ಥೆಗಳು ಹುಡುಕುತ್ತಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಂಜೆ ಕೆಂಪು ಕೋಟೆ ಬಳಿ ಬಿಳಿ ಬಣ್ಣದ ಹುಂಡೈ ಐ20 ಸ್ಫೋಟಗೊಂಡು 12 ಜನರು ಸಾವನ್ನಪ್ಪಿ 30 ಜನರು ಗಾಯಗೊಂಡಿದ್ದರೂ, ತನಿಖಾಧಿಕಾರಿಗಳು ನಂತರ ಎರಡನೇ ವಾಹನ ಕೆಂಪು ಫೋರ್ಡ್ ಇಕೋಸ್ಪೋರ್ಟ್ ಫರಿದಾಬಾದ್‌ನಲ್ಲಿ ಪತ್ತೆ ಹಚ್ಚಿದ್ದರು.

ಆದಾಗ್ಯೂ, ಮಾರುತಿ ಬ್ರೆಝಾ ಎಂದು ಶಂಕಿಸಲಾದ ಮೂರನೇ ಕಾರು ಪತ್ತೆಯಾಗಿಲ್ಲ. ಕಾಣೆಯಾದ ಮೂರನೇ ಕಾರನ್ನು ಆರೋಪಿಗಳು ವಿಚಕ್ಷಣ ಅಥವಾ ತಪ್ಪಿಸಿಕೊಳ್ಳಲು ಬಳಸಿದ್ದಾರೆಂದು ಶಂಕಿಸಲಾಗಿದೆ. ಮೂರನೇ ಕಾರನ್ನು ಬಹು ತಂಡಗಳು ಹುಡುಕುತ್ತಿವೆ ಎಂದು ಮೂಲಗಳು ತಿಳಿಸಿವೆ. ಮಾರುತಿ ಬ್ರೆಝಾವನ್ನು ಪತ್ತೆಹಚ್ಚಲು ದೆಹಲಿ–ಎನ್‌ಸಿಆರ್, ಪಕ್ಕದ ರಾಜ್ಯಗಳಲ್ಲಿ ಶೋಧ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು.

### ಸ್ಫೋಟದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಸಾವು, ಮೃತರ ಸಂಖ್ಯೆ 13ಕ್ಕೆ ಏರಿಕೆ

**ನವದೆಹಲಿ:** ದೆಹಲಿ ಕಾರ್ ಬಾಂಬ್ ಸ್ಫೋಟಕ್ಕೆ ಮತ್ತೊಂದು ಜೀವ ಬಲಿ ಆಗಿದೆ. ಕೆಂಪು ಕೋಟೆ ಬಳಿ ನಡೆದ ಸ್ಫೋಟದಲ್ಲಿ ಗಾಯಗೊಂಡಿದ್ದ ಮತ್ತೊಬ್ಬ ವ್ಯಕ್ತಿ ಇಲ್ಲಿನ ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ನಂತರ ಸಾವನ್ನಪ್ಪಿದವರ ಸಂಖ್ಯೆ 13ಕ್ಕೆ ಏರಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮೃತರನ್ನು ಬಿಲಾಲ್ ಎಂದು ಗುರುತಿಸಲಾಗಿದೆ ಎಂದು ಅವರು ಹೇಳಿದರು.



ದೆಹಲಿ ಪೊಲೀಸರ ಪ್ರಕಾರ, ಬಿಲಾಲ್ ಸಾವಿನ ಬಗ್ಗೆ ಇಂದು ಮುಂಜಾನೆ ಆಸ್ಪತ್ರೆಯಿಂದ ಮಾಹಿತಿ ಬಂದಿದೆ. ಮರಣೋತ್ತರ ಪರೀಕ್ಷೆಯನ್ನು ಮಧ್ಯಾಹ್ನದ ನಂತರ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಲಾಲ್ ಸಾವಿನೊಂದಿಗೆ, ಸಂಜೆ ನಡೆದ ತೀವ್ರತರವಾದ ಸ್ಫೋಟದಲ್ಲಿ ಒಟ್ಟು ಸಾವನ್ನಪ್ಪಿದವರ ಸಂಖ್ಯೆ 13ಕ್ಕೆ ಏರಿದೆ, ಆದರೆ ಇನ್ನೂ ಹಲವರು ಚಿಕಿತ್ಸೆ ಪಡೆಯುತ್ತಿದ್ದಾರೆ.



# ಲಂಡನ್ ಕೆಫೆಯಲ್ಲಿ ಮೇಘಾ ಮಿಂಚಿಂಗ್!

ಇದೇ ನವೆಂಬರ್ 28 ಕ್ಕೆ ಕನ್ನಡ ಮರಾಠಿ ಮತ್ತು ಹಿಂದಿ ಮೂರೂ ಭಾಷೆಗಳಲ್ಲಿ ಏಕಕಾಲಕ್ಕೆ ಬಿಡುಗಡೆಯ ಸಂಭ್ರಮ ಕಾಣುತ್ತಿರುವ 'ಅಪರೇಷನ್ ಲಂಡನ್ ಕೆಫೆ' (ಓ. ಎಲ್. ಸಿ) ಚಿತ್ರದ ಮೊದಲ ಹಾಡು ಬಿಡುಗಡೆಗೊಂಡು ಸೋಷಿಯಲ್ ಮೀಡಿಯಾದಲ್ಲಿ ಧೂಳೆಬ್ಬಿಸುತ್ತಿದೆ!

ತರ್ಲೆ ತುಂಟ ಲಂಗದಾವಣಿ ತೊಟ್ಟ ಅಪ್ಪಟ ಬಜಾರಿ ಬಾಯಿ ಬಡಕಿ ಹಳ್ಳಿ ಹುಡುಗಿಯಂತೆ ಮೇಘಾ ಶೆಟ್ಟಿ ಹಿಂದೆಂದಿಗಿಂತಲೂ ಲವಲವಿಕೆಯಿಂದ ಕಾಣಿಸಿಕೊಂಡು 'ರೈ ರೈ ರೈ ಈ ಪ್ರೀತಿ ಶ್ಯಾನೆ ಮಜವಾಗುತ್ತೈತಿ, ಮನಸಾಗ ಎಲಿಯಡಿಕಿ ಆಗಿಯಾಕತ್ತೈತಿ' ಎನ್ನುತ್ತಾ ತನ್ನ ಅಭಿಮಾನಿಗಳಿಗೆ ಮತ್ತು ಸಿನಿಪ್ರಿಯರಿಗೆ ರಸಗವಳ ಬಡಿಸಿದ್ದಾರೆ. ನಕ್ಸಲೈಟ್ ಗೆಟಪ್ಪಿನಲ್ಲಿ ಮೀಸೆ ತಿರುವುತ್ತಾ ಖದರ್ರಾಗಿ ಕಾಣುವ ನಾಯಕ ಕವೀಶ್ ಶೆಟ್ಟಿಯ ಸಿದ್ಧಾಂತ ಬದ್ಧ ಬಿಗುಮಾನವನ್ನು ಅಣಕಿಸಿ, ಗೋಳು ಹುಯ್ದುಕೊಳ್ಳುತ್ತಾ ಪ್ರಕೃತಿ ಮತ್ತು ಮಾನವ ಸಹಜ ಪ್ರೀತಿ ಸಂಬಂಧಗಳ ಬಗ್ಗೆ ಸುಂದರವಾಗಿ ವರ್ಣಿಸುತ್ತಾ ಚಿತ್ರದ ತುಂಬಾ ಇಂತದ್ದೇ ತರಲೇ ತಂಟೆ ತಕರಾರು ಮಾಡುತ್ತಾ ಪ್ರೇಕ್ಷಕರನ್ನು ರಂಜಿಸುವ ಮೇಘಾ ಶೆಟ್ಟಿ ಇದೇ ಮೊದಲ ಬಾರಿಗೆ ಈ ಚಿತ್ರದ ಮೂಲಕ ಮರಾಠಿ ಚಿತ್ರರಂಗಕ್ಕೂ ಲಗ್ಗೆಯಿಟ್ಟಿದ್ದಾರೆ. ಕನ್ನಡ ಮತ್ತು ಮರಾಠಿ ಎರಡೂ ಭಾಷೆಯಲ್ಲಿ ನೇರವಾಗಿ ಚಿತ್ರೀಕರಣಗೊಂಡಿರುವ ಈ ಚಿತ್ರವನ್ನು ಸಡಗರ ರಾಘವೇಂದ್ರ ನಿರ್ದೇಶಿಸಿ ಈ ಹಾಡಿಗೆ ಸಾಹಿತ್ಯವನ್ನೂ ಬರೆದಿದ್ದಾರೆ. ಛಾಯಾಗ್ರಾಹಕ ಆರ್. ಡಿ. ನಾಗಾರ್ಜುನ್ ಹಾಡಿಗೆ ತಕ್ಕ ಹಾಗೆ ಪ್ರಕೃತಿಯ ಸುಂದರ ದೃಶ್ಯಗಳನ್ನು ತನ್ನ ಕ್ಯಾಮೆರಾದಲ್ಲಿ ಅದ್ಭುತವಾಗಿ ಸೆರೆ ಹಿಡಿದಿದ್ದಾರೆ. ವಿನಾದ್ ಮ್ಯೂಸಿಕ್ ಲೇಬಲ್ನ ಅಡಿಯಲ್ಲಿ ಮೂರೂ ಭಾಷೆಯಲ್ಲಿ ಬಿಡುಗಡೆಗೊಂಡ ಈ ಹಾಡಿಗೆ ಸಂಗೀತ ನಿರ್ದೇಶಕ ಪ್ರಾಂಶು ಝಾ ಜಿಲ್ಕಾ ಚಿತ್ರದ ನಂತರ ಎರಡನೆಯ ಬಾರಿ ತಮ್ಮ ವಿಶೇಷ ವಿಶಿಷ್ಟ ಸಂಗೀತ ಸಂಯೋಜನೆಯ ಮೂಲಕ ಮತ್ತೊಮ್ಮೆ ಕನ್ನಡಕ್ಕೂ ಜೈ ಎಲ್ಲದಕ್ಕೂ ಸೈ ಎನ್ನಿಸಿಕೊಂಡಿದ್ದಾರೆ. ತನ್ನ ಮಾದಕ ಮತ್ತು ಮೋಹಕ ಧ್ವನಿಯಿಂದ ಈಗಾಗಲೇ ಕನ್ನಡಿಗರ ಮನ ಸೂರೆಗೊಳಿಸಿದ ಗಾಯಕಿ ಐಶ್ವರ್ಯ ರಂಗರಾಜನ್ ಈ ಮೂಲಕ ಮತ್ತೊಂದು ಹಿಟ್ ಹಾಡನ್ನು ತನ್ನ ಬತ್ತಳಿಕೆಗೆ ಸೇರಿಸಿಕೊಂಡಿದ್ದಾರೆ. ಇಂಡಿಯನ್ ಫಿಲಂ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲಂಸ್ ಸಂಸ್ಥೆಯಿಂದ ಅದ್ಧೂರಿಯಾಗಿ ನಿರ್ಮಾಣವಾಗಿರುವ ಈ ಚಿತ್ರವನ್ನು ವಿಜಯ್ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ, ದೀಪಕ್ ರಾಣೆ ಮತ್ತು ವಿಜಯ್ ಪ್ರಕಾಶ್ ನಿರ್ಮಾಣ ಮಾಡಿದ್ದಾರೆ.

**ರೈ ರೈ ರೈ ರೈಮಿಂಗ್! ಆಪರೇಷನ್**

# ಕನ್ನಡದೊಂದಿಗೆ ಇತರ ಭಾಷೆಯಲ್ಲಿ ಚಿತ್ರೀಕರಣ



**19ರಿಂದ ಚಿತ್ರೀಕರಣ ಪ್ರಾರಂಭ**

ತಿರು ವೀರ್, ಐಶ್ವರ್ಯಾ ರಾಜೇಶ್ ನಟನೆಯ ಗಂಗಾ ಎಂಟರ್‌ಟೈನ್‌ಮೆಂಟ್ಸ್ ಪ್ರೊಡಕ್ಷನ್ ನಂ. 2 ಚಿತ್ರಕ್ಕೆ ಅದ್ದೂರಿ ಚಾಲನೆ ಸಿಕ್ಕಿದೆ. ಈ ಮೂಲಕ ಬ್ಲಾಕ್‌ಬಸ್ಟರ್ 'ಪ್ರಿ ವೆಡ್ಡಿಂಗ್ ಶೋ' ಚಿತ್ರದ ಭರ್ಜರಿ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವ ಯುವ ನಾಯಕ ತಿರು ವೀರ್, ತಮ್ಮ ಮುಂದಿನ ಪ್ರಾಜೆಕ್ಟ್ ಅನ್ನು ಅಧಿಕೃತವಾಗಿ ಘೋಷಿಸಿದ್ದಾರೆ. ಸಂಕ್ರಾಂತಿಗೆ ಬಂದ 'ಸಂಕ್ರಾಂತಿಕಿ ವಸ್ತುನ್ನಾಂ' ಚಿತ್ರದ ಯಶಸ್ಸಿನ ನಂತರ ನಾಯಕಿ ಐಶ್ವರ್ಯಾ ರಾಜೇಶ್ ಅವರು ಈ ಹೊಸ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರದ ಮೂಲಕ ಭರತ್ ದರ್ಶನ್ ನಿರ್ದೇಶಕರಾಗಿ ಪಾದಾರ್ಪಣೆ ಮಾಡುತ್ತಿದ್ದಾರೆ. ಮಹೇಶ್ವರ ರೆಡ್ಡಿ ಮೂಲಿ ಅವರು ಗಂಗಾ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಇದು ಅವರ ಎರಡನೇ ಪ್ರಾಜೆಕ್ಟ್ ಆಗಿದೆ. 'ಶಿವಂ ಭಜೆ' ಚಿತ್ರದಿಂದ ವಿಮರ್ಶಕರ ಮೆಚ್ಚುಗೆ ಗಳಿಸಿದ್ದ, ಗಂಗಾ ಎಂಟರ್‌ಟೈನ್‌ಮೆಂಟ್ಸ್ ಸಂಸ್ಥೆ, ಇದೀಗ ನಿರ್ದೇಶಕ ಭರತ್ ದರ್ಶನ್ ಅವರ ಕಥೆಗೆ ಬಂಡವಾಳ ಹೂಡುತ್ತಿದೆ.

ಅಂದಹಾಗೆ, ಚಿತ್ರದ ಪಾತ್ರ ಮತ್ತು ತಾಂತ್ರಿಕ ಬಳಗದ ಸಮ್ಮುಖದಲ್ಲಿ ಹೈದರಾಬಾದ್‌ನಲ್ಲಿ ಮುಹೂರ್ತ ನೆರವೇರಿತು.

ತಮ್ಮ ಗಟ್ಟಿ ಕಂಟೆಂಟ್ ಮೂಲಕವೇ ಹೆಸರುವಾಸಿಯಾದ ತಿರು ವೀರ್ ಅವರು, ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ 'ಮಸೂದ' ದಿಂದ ಇತ್ತೀಚಿನ 'ಪ್ರಿ ವೆಡ್ಡಿಂಗ್ ಶೋ' ವರೆಗೆ ಬಗೆಬಗೆ ಕಥೆಗಳ ಮೂಲಕ ಜಗಮೆಚ್ಚಿಸಿದ್ದಾರೆ. ಈ ಚಿತ್ರದಲ್ಲಿ ಪ್ರತಿಭಾವಂತ ತಂತ್ರಜ್ಞರ ತಂಡವಿದೆ. 'ರಜಾಕಾರ್' ಮತ್ತು 'ಪೋಲಿಮೇರ' ಚಿತ್ರಗಳಿಗೆ ಕೆಲಸ ಮಾಡಿದ ಛಾಯಾಗ್ರಾಹಕ ಸಿ ಎಚ್ ಕುಶೇಂದರ್ ಇಲ್ಲಿಯೂ ಕ್ಯಾಮರಾ ನಿರ್ವಹಿಸಲಿದ್ದಾರೆ. ಭರತ್ ಮಂಚಿರಾಜು ಸಂಗೀತ ಸಂಯೋಜನೆ ಮಾಡಲಿದ್ದಾರೆ.

# ಜಿಎಸ್‌ಟಿ ಟ್ರೇಲರ್ ಬಿಡುಗಡೆ



ಖ್ಯಾತ ನಟ ಸೃಜನ್ ಲೋಕೇಶ್ ನಟನಾಗಿ, ನಿರ್ಮಾಪಕನಾಗಿ ಜನಪ್ರಿಯ. ಈಗ ಜಿಎಸ್‌ಟಿ ಚಿತ್ರದ ಮೂಲಕ ನಿರ್ದೇಶಕನ ಕ್ಯಾಪ್ ತೊಟ್ಟಿದ್ದಾರೆ.

ಈ ಚಿತ್ರವನ್ನು ಪ್ರತಿಷ್ಠಿತ ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆ ಲಾಂಛನದಲ್ಲಿ ಸಂದೇಶ್ ಎನ್ ನಿರ್ಮಾಣ ಮಾಡಿದ್ದಾರೆ. ಹಿರಿಯ ನಿರ್ಮಾಪಕ ಸಂದೇಶ್ ನಾಗರಾಜ್ ಅವರು ಅರ್ಪಿಸುತ್ತಿದ್ದಾರೆ. ಚಿತ್ರ ಇದೇ ತಿಂಗಳ 28ರಂದು ತೆರೆಗೆ ಬರುತ್ತಿದೆ. ಅದಕ್ಕೆ ಪೂರ್ವಭಾವಿಯಾಗಿ ಟ್ರೇಲರ್ ಬಿಡುಗಡೆಯಾಗಿದೆ. ರಿಯಲ್ ಸ್ಟಾರ್ ಉಪೇಂದ್ರ, ಟ್ರೇಲರ್ ತಮ್ಮದೇ ಆದ ರೀತಿಯಲ್ಲಿ ಆಕ್ಷನ್ ಹೇಳುವ ಮೂಲಕ ಟ್ರೇಲರ್ ಅನಾವರಣ ಮಾಡಿದರು. ಪ್ರಿಯಾಂಕಾ ಉಪೇಂದ್ರ, ನವೆಂಬರ್ 14 ರಂದು ಬಿಡುಗಡೆಯಾಗಲಿರುವ ಚಿತ್ರದ ಹಾಡಿನ ಪ್ರೊಮೊ ರಿಲೀಸ್ ಮಾಡಿದರು.

ಉಪೇಂದ್ರ, ದಂಪತಿ ಹಾಗೂ ನಟಿ ತಾರಾ ಅನುರಾಧ ಮುಖ್ಯ ಅತಿಥಿಗಳಾಗಿ ಆಗಮಿಸಿ, ಜಿಎಸ್‌ಟಿ ಗೆ ಶುಭ ಕೋರಿದರು. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ಜಿಎಸ್‌ಟಿ ಎಂದರೆ ಘೋಸ್ಟ್ ಇನ್ ಟ್ರಬಲ್ ಎಂದು. ಜಿಎಸ್‌ಟಿನಾನು ಕಂಡ ಕನಸು. ಅದನ್ನು ನನಸು ಮಾಡಿದವರು ನಿರ್ಮಪಕ ಸಂದೇಶ್. ನಾನು ಈ ಚಿತ್ರದ ಮೂಲಕ ನಿರ್ದೇಶಕನಾಗಿ ಅಡಿ ಇಟ್ಟಿದ್ದೇನೆ. ಚಿತ್ರದ ಮತ್ತೊಂದು ವಿಶೇಷ ಅಂದರೆ ನಮ್ಮ ತಾತಾ ಸುಬ್ಬಯ್ಯ ನಾಯ್ಡು ಅವರು ಭಕ್ತ ಪ್ರಹ್ಲಾದ ಚಿತ್ರದಲ್ಲಿ ನಮ್ಮ ತಂದೆ ಲೋಕೇಶ್ ಅವರನ್ನು ಬಾಲನಟನಾಗಿ ತೆರೆಗೆ ತಂದರು.

**ಸಿನಿ ವಾಹಿನಿ**

# ನೆಟ್ಟಿಗ್ಗೆ ಟ್ವಿಸ್ಟ್ ಕೊಟ್ಟ ರಾಜಮೌಳಿ




**ಪ್ರಿಯಾಂಕಾ ಮಂದಾಕಿನಿ ಪೋಸ್ಟರ್ ರಿವೀಲ್!**

ಎಸ್‌ಎಸ್ ರಾಜಮೌಳಿ ಮತ್ತು ಮಹೇಶ್ ಬಾಬು ನಟನೆಯ ಬಹುನಿರೀಕ್ಷಿತ ಸಿನಿಮಾ ದಿನದಿಂದ ದಿನಕ್ಕೆ ಕುತೂಹಲ ಕೆರಳಿಸುತ್ತಿದೆ. ಇದೀಗ ಇದೇ ಸಿನಿಮಾದಿಂದ ಮತ್ತೊಂದು ಬಿಗ್ ಅಪ್‌ಡೇಟ್ ಹೊರಬಿದ್ದಿದೆ. ನವೆಂಬರ್ 15 ರಂದು ನಡೆಯಲಿರುವ ಗ್ರ್ಯಾಂಡ್ ಗ್ಲೋಬ್ ಟ್ರಾಟರ್ ಕಾರ್ಯಕ್ರಮಕ್ಕೂ ಮುನ್ನವೇ ಮಂದಾಕಿನಿಯಾಗಿ ಪ್ರಿಯಾಂಕಾ ಚೋಪ್ರಾ ಜೋನಸ್ ಅವರನ್ನು ಪರಿಚಯಿಸಿದ್ದಾರೆ ನಿರ್ದೇಶಕ ರಾಜಮೌಳಿ. ಗ್ರ್ಯಾಂಡ್ ಗ್ಲೋಬ್ ಟ್ರಾಟರ್ ಇವೆಂಟ್ ಘೋಷಿಸಿದಾಗಿನಿಂದಲೂ, ಭಾರತವಷ್ಟೇ ಅಲ್ಲದೆ, ಇಡೀ ಜಗತ್ತು ಬೆರಗುಗಣ್ಣಿನಿಂದ ನೋಡುತ್ತಿದೆ. ಈಗಾಗಲೇ ಇದೇ ಚಿತ್ರದಲ್ಲಿ ಮಲಯಾಳಂ ನಟ ಪೃಥ್ವಿರಾಜ್ ಸುಕುಮಾರನ್ 'ಕುಂಭ'ನಾಗಿ ಕಾಣಿಸಿಕೊಳ್ಳಲಿದ್ದು, ಅವರ ಫಸ್ಟ್ ಲುಕ್ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ರಾಜಮೌಳಿ ನವೆಂಬರ್ 15ರಂದು ಅದ್ಯಾವ ಕುತೂಹಲವನ್ನು ಬಿಚ್ಚಿಡಲಿದ್ದಾರೆ ಎನ್ನುತ್ತಿರುವಾಗಲೇ, ಪ್ರಿಯಾಂಕಾ ಚೋಪ್ರಾ ಜೋನಸ್ ಅವರ ಪವರ್‌ಫುಲ್ ಲುಕ್ ಅನಾವರಣ ಮಾಡಿ, ಕುತೂಹಲಕ್ಕೆ ಒಗ್ಗರಣೆ ಹಾಕಿದ್ದಾರೆ. 'ಮಂದಾಕಿನಿ'ಯಾಗಿ ಎದುರಾಗಿದ್ದಾರೆ. ಪೋಸ್ಟರ್‌ನಲ್ಲಿ ಹಳದಿ ಸೀರೆ ಧರಿಸಿ, ಕೈಯಲ್ಲಿ ಗನ್ ಹಿಡಿದಿರುವ ಪ್ರಿಯಾಂಕಾ, ಮಂದಾಕಿನಿಯಾಗಿ ಆಕ್ಷನ್ ಅವತಾರದಲ್ಲಿ ಕಂಡಿದ್ದಾರೆ.

ರಾಮೋಜಿ ಫಿಲ್ಮ್ ಸಿಟಿಯಲ್ಲಿ ನವೆಂಬರ್ 15ರಂದು ನಡೆಯಲಿರುವ ಬೃಹತ್ ಕಾರ್ಯಕ್ರಮವನ್ನು ಈ ಒಂದು ಪೀಳಿಗೆಯಲ್ಲಿ ಒಮ್ಮೆ ಮಾತ್ರ ನಡೆಯುವ ಅದ್ಭುತ ಎಂದು ಬಣ್ಣಿಸಲಾಗುತ್ತಿದೆ. ನಿರ್ದೇಶಕ ಎಸ್.ಎಸ್. ರಾಜಮೌಳಿ ಮತ್ತು ಸೂಪರ್ ಸ್ಟಾರ್ ಮಹೇಶ್ ಬಾಬು ಅವರ ಈ ಕೌತುಕವನ್ನು 50,ಸಾವಿರಕ್ಕೂ ಹೆಚ್ಚು ಅಭಿಮಾನಿಗಳ ಆಗಮನವಾಗುವ ಸಾಧ್ಯತೆ ಇದೆ. ಇದು ಭಾರತೀಯ ಮನರಂಜನೆ ಜಗತ್ತಿನಲ್ಲಿ ಅತಿದೊಡ್ಡ ಲೈವ್ ಫ್ಯಾನ್ ಸಮಾಗಮಗಳಲ್ಲಿ ಒಂದಾಗಲಿದೆ.

# ಸೆ–21 ಪೋಸ್ಟರ್ ಬಂತು



ಪ್ರಿಯಾಂಕಾ ಉಪೇಂದ್ರ, ನಟಿಸಿರುವ ಸೆಪ್ಟೆಂಬರ್ 21. ಚಿತ್ರ ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿದೆ. ಸೆಪ್ಟೆಂಬರ್ 21 ಹಿಂದಿ ಮತ್ತು ಕನ್ನಡ ಭಾಷೆಯಲ್ಲಿ ಚಿತ್ರೀಕರಣಗೊಂಡಿದ್ದು, 2026ರಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ. ಚಿತ್ರದ ನಿರ್ದೇಶನವನ್ನು 21 ವರ್ಷದ ಕರೆನ್ ಕ್ರಿಷ್ಟಿ ಸುವರ್ಣ ಮಾಡಿದ್ದಾರೆ. ಇದು ಅವರ ನಿರ್ದೇಶನದ ಮೊದಲ ಚಿತ್ರ.ಹಾಗೆ ಇದೇ ನವಂಬರ್ 20 ರಿಂದ ನವಂಬರ್ 24ರ ವರೆಗೆ ನಡೆಯುವ 56ನೇ ಗೋವಾ ಅಂತರಾಷ್ಟ್ರೀಯ ಚಿತ್ರೋತ್ಸವದಲ್ಲಿ ಈ ಚಿತ್ರ ಪ್ರದರ್ಶನಗೊಳ್ಳಲಿದೆ. ಪ್ರಿಯಾಂಕ ಉಪೇಂದ್ರಹುಟ್ಟು ಹಬ್ಬದ ಪ್ರಯುಕ್ತ ಚಿತ್ರತಂಡ ಚಿತ್ರದ ಮೊದಲ ಪೋಸ್ಟರ್ ಬಿಡುಗಡೆ ಮಾಡಲು ತೀರ್ಮಾನಿಸಿದೆ. ಈ ಚಿತ್ರದಲ್ಲಿ ಪ್ರಿಯಾಂಕ ಉಪೇಂದ್ರ ಮೊದಲ ಬಾರಿಗೆ ಮಧ್ಯಮ ವರ್ಗದ ಮಹಿಳೆಯ ಪಾತ್ರ ಮಾಡಿದ್ದಾರೆ. ಇದು ನನ್ನ ವೃತ್ತಿ ಜೀವನದ ಅತ್ಯಂತ ಸವಾಲಿನ ಪಾತ್ರ ಇದಾಗಿದ್ದು,ಅದನ್ನ ಅಷ್ಟೇ ಸೊಗಸಾಗಿ ಯುವ ನಿರ್ದೇಶಕಿ ಚಿತ್ರಿಕರಿಸಿದ್ದಾರೆ ಎಂದು ಪ್ರಿಯಾಂಕ ಉಪೇಂದ್ರ ಹೇಳಿದ್ದಾರೆ. ಪ್ರಿಯಾಂಕ ಉಪೇಂದ್ರ ಅಲ್ಲದೇ ಅನೇಕ ಬಾಲಿವುಡ್ ನಟ ನಟಿಯರ ದಂಡೆ ಈ ಚಿತ್ರದಲ್ಲಿ ಇದೆ. ಮುಖ್ಯ ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿ ಯ, ಝುರಿನ ವಾಹಬ್, ಅಮಿತ್ ಬೇಲ್, ಅಜಿತ್ ಶಿದಾಯೆ,ಸಚಿನ್ ಪಾಟೆಕರ್ ನಟಿಸಿದ್ದಾರೆ. ಆಲ್ಝೈಮರ್ ಕಾಯಿಲೆಸುತ್ತ ನಡೆಯುವ ಕಥೆ ಇದಾಗಿದ್ದು, ರೋಗಿಗಿಂತ ಅವನ ಪಾಲನೆ ಮಾಡುವವರು ತೆಗೆದುಕೊಳ್ಳುವ ನಿರ್ಧಾರ ತುಂಬಾ ಮುಖ್ಯ ಎಂಬುದು ಚಿತ್ರದ ಅಡಿಬರಹವಾಗಿದೆ. ರಾಜಶೇಖರ್ ಕಥೆಗೆ, ವಿನಯ್ ಚಂದ್ರ ಸಂಗೀತವಿದ್ದು, ಅನಿಲ್ ಕುಮಾರ್ ಛಾಯಾಗ್ರಹಣ ಮಾಡಿದ್ದಾರೆ. ಈ ಚಿತ್ರವನ್ನು ಬಾಲಿವುಡ್ ನಿರ್ದೇಶಕ ಇಮ್ತಿಯಜ್ ಆಲಿ ಪತ್ನಿ ಪ್ರೀತಿ ಆಲಿತಮ್ಮ ಹಮಾರಾ ಮೂವಿ ಸಹಭಾಗಿತ್ವದಲ್ಲಿ ಎಫ್‌ಎಂಡಿ ವಿಸಿಕ ಫಿಲಂಸ್ ಮತ್ತು ಫಿಲಂ ಮ್ಯಾಕ್ಸ್ ಪ್ರೊಡಕ್ಷನ್ ಜಂಟಿಯಾಗಿ ನಿರ್ಮಿಸುತ್ತಿದೆ.

# ಕೆಕೆಆರ್ ತಂಡಕ್ಕೆ ಆರ್‌ಸಿಬಿ ಮಾಜಿ ಆಟಗಾರ ಕೋಚ್

ಐಪಿಎಲ್ 2026 ರ ಆಟಗಾರರ ಹರಾಜಿಗೂ ಮುನ್ನ ಎಲ್ಲಾ ಫ್ರಾಂಚೈಸಿಗಳು ತಮ್ಮ ತಮ್ಮ ತಂಡಗಳ ನ್ಯೂನತೆಗಳನ್ನು ಸರಿದೂಗಿಸುವ ಕೆಲಸಕ್ಕೆ ಕೈಹಾಕಿವೆ. ಆ ಪ್ರಕಾರ ಕೆಲವು ಫ್ರಾಂಚೈಸಿಗಳು ಇತರ ಫ್ರಾಂಚೈಸಿಗಳಿಂದ ತಮಗೆ ಬೇಕಾದ ಆಟಗಾರರನ್ನು ಟ್ರೇಡಿಂಗ್ ಮಾಡಿಕೊಳ್ಳುತ್ತಿದ್ದರೆ, ಇನ್ನು ಕೆಲವು ಫ್ರಾಂಚೈಸಿಗಳು ತಮ್ಮ ತಂಡದ ಕೋಚಿಂಗ್ ವಿಭಾಗಕ್ಕೆ ಹೊಸಬರನ್ನು ಕರೆತರುತ್ತಿವೆ. ಅಂತಹ ಫ್ರಾಂಚೈಸಿಗಳಲ್ಲಿ ಶಾರುಖ್ ಖಾನ್ ಒಡೆತನದ ಕೋಲ್ಕತ್ತಾ ನೈಟ್ ರೈಡರ್ಸ್ ಕೂಡ ಒಂದಾಗಿದೆ.

ಐಪಿಎಲ್‌ನಲ್ಲಿ ಮೂರು ಬಾರಿಯ ಚಾಂಪಿಯನ್ ಆಗಿರುವ ಕೋಲ್ಕತ್ತಾ ನೈಟ್ ರೈಡರ್ಸ್ , ತಮ್ಮ ಕೋಚಿಂಗ್ ಸಿಬ್ಬಂದಿಯ ನವೀಕರಣವನ್ನು ಮುಂದುವರೆಸಿದ್ದು, ಆಸ್ಟ್ರೇಲಿಯಾದ ಪ್ರಸಿದ್ಧ ಆಲ್‌ರೌಂಡರ್ ಹಾಗೂ ಆರ್ ಸಿಬಿ ತಂಡದ ಮಾಜಿ ಆಟಗಾರ ಶೇನ್ ವ್ಯಾಟ್ಸನ್ ಅವರನ್ನು ತಂಡದ ಹೊಸ ಸಹಾಯಕ ಕೋಚ್ ಆಗಿ ನೇಮಿಸಿದೆ.



2024ರಲ್ಲಿ ಐಪಿಎಲ್ ಪ್ರಶಸ್ತಿಯನ್ನು ಗೆಲ್ಲುವ ಗುರಿಯನ್ನು ಹೊಂದಿರುವ ಕೋಲ್ಕತ್ತಾ, ನವೆಂಬರ್ 13 ರ ಗುರುವಾರ ವ್ಯಾಟ್ಸನ್ ಅವರನ್ನು ಸಹಾಯಕ ಕೋಚ್ ಆಗಿ ನೇಮಕ ಮಾಡಿರುವುದಾಗಿ ಘೋಷಿಸಿದೆ. ವ್ಯಾಟ್ಸನ್ ಅವರನ್ನು ಕೆಕೆಆರ್‌ಗೆ ಸ್ವಾಗತಿಸುತ್ತಾ, ಫ್ರಾಂಚೈಸಿ ಸಿಇಒ ವೆಂಕಿ ಮೈಸೂರು, ಆಸ್ಟ್ರೇಲಿಯಾದ ದಂತಕಥೆ ಆಟಗಾರ ಮತ್ತು ತರಬೇತುದಾರರಾಗಿ ಟಿ20 ಕ್ರಿಕೆಟ್‌ನ ಜ್ಞಾನವು ಕೋಲ್ಕತ್ತಾಗೆ ತುಂಬಾ ಉಪಯುಕ್ತವಾಗಲಿದೆ ಎಂದಿದ್ದಾರೆ.



ಐಪಿಎಲ್ ಇತಿಹಾಸದಲ್ಲಿ ಅತ್ಯುತ್ತಮ ವಿದೇಶಿ ಆಟಗಾರರಲ್ಲಿ ಒಬ್ಬರಾದ ಶೇನ್ ವ್ಯಾಟ್ಸನ್ ತಮ್ಮ ವೃತ್ತಿಜೀವನದುದ್ದಕ್ಕೂ ಅಸಾಧಾರಣ ಪ್ರದರ್ಶನ ನೀಡಿದ್ದಾರೆ. ರಾಜಸ್ಥಾನ್ ರಾಯಲ್ಸ್ ತಂಡವು ಚೊಚ್ಚಲ ಐಪಿಎಲ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶೇನ್ ವಾಟ್ಸನ್ ಟೂರ್ನಮೆಂಟ್ ಆಫ್ ದಿ ಪ್ಲೇಯರ್ ಪ್ರಶಸ್ತಿಯನ್ನು ಗೆದ್ದಿದ್ದರು.

2018 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೇರುವ ಮೊದಲು ಶೇನ್ ವಾಟ್ಸನ್ 2016 ಮತ್ತು 2017 ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡಿದ್ದರು. ತಮ್ಮ ಚೊಚ್ಚಲ ಸೀಸನ್ ನಲ್ಲಿ 555 ರನ್ ಬಾರಿಸುವ ಮೂಲಕ ತಂಡವು ಪ್ರಶಸ್ತಿಯನ್ನು ಗೆಲ್ಲುವಲ್ಲಿ ವಾಟ್ಸನ್ ಪ್ರಮುಖ ಪಾತ್ರವಹಿಸಿದ್ದರು.

ಒಟ್ಟಾರೆಯಾಗಿ, ವ್ಯಾಟ್ಸನ್ 145 ಐಪಿಎಲ್ ಪಂದ್ಯಗಳನ್ನು ಆಡಿದ್ದು, 3,874 ರನ್ ಮತ್ತು 92 ವಿಕೆಟ್‌ಗಳನ್ನು ಪಡೆದಿದ್ದಾರೆ.

ಕೋಲ್ಕತ್ತಾದ ಕೋಚಿಂಗ್ ಸಿಬ್ಬಂದಿಗೆ ವ್ಯಾಟ್ಸನ್ ಎರಡನೇ ಪ್ರಮುಖ ಸೇರ್ಪಡೆ. ಕೆಲವೇ ದಿನಗಳ ಹಿಂದೆ, ಕೆಕೆಆರ್ ಅಭಿಷೇಕ್ ನಾಯರ್ ಅವರನ್ನು ತಮ್ಮ ಹೊಸ ಮುಖ್ಯ ಕೋಚ್ ಆಗಿ ನೇಮಿಸಿತು. ಕಳೆದ ಆವೃತ್ತಿಯ ನಂತರ ರಾಜೀನಾಮೆ ನೀಡಿದ ಚಂದ್ರಕಾಂತ್ ಪಂಡಿತ್ ಅವರ ಬದಲಿಗೆ ನಾಯರ್ ನೇಮಕಗೊಂಡರು.

ಅಭಿಷೇಕ್ ನಾಯರ್ ಈ ಹಿಂದೆ ಕೆಕೆಆರ್ ತಂಡದಲ್ಲಿ ಚಂದ್ರಕಾಂತ್ ಪಂಡಿತ್ ಅವರೊಂದಿಗೆ ಸಹಾಯಕ ಕೋಚ್ ಆಗಿ ಸೇವೆ ಸಲ್ಲಿಸಿದ್ದರು. ನಂತರ ಅವರು ಟೀಂ ಇಂಡಿಯಾದ ಸಹಾಯಕ ಕೋಚ್ ಆಗಿ ನೇಮಕಗೊಂಡಿದ್ದರು. ಆದಾಗ್ಯೂ, ಕೇವಲ ಎಂಟು ತಿಂಗಳ ನಂತರ ಅವರನ್ನು ಭಾರತೀಯ ತಂಡದಿಂದ ವಜಾಗೊಳಿಸಲಾಯಿತು.

# ರೋಹಿತ್ ರೌದ್ರಾವತಾರಕ್ಕೆ ಭರ್ತಿ 11 ವರ್ಷ

ನವೆಂಬರ್ 13, 2014 ಅಂದರೆ ಬರೋಬ್ಬರಿ 11 ವರ್ಷಗಳ ಹಿಂದೆ ಇದೇ ದಿನ ರೋಹಿತ್ ಶರ್ಮಾ ಎಂಬ ಬಿರುಗಾಳಿಯ ಆರ್ಭಟಕ್ಕೆ ಕ್ರಿಕೆಟ್ ಲೋಕ ಹುಚ್ಚೆದ್ದು ಕುಣಿದಿತ್ತು. ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಶ್ರೀಲಂಕಾ ವಿರುದ್ಧ ನಡೆದಿದ್ದ ಏಕದಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಏಕದಿನ ಇತಿಹಾಸದಲ್ಲಿಯೇ ಅತಿದೊಡ್ಡ ಇನ್ನಿಂಗ್ಸ್ ಆಡಿ ವಿಶ್ವದಾಖಲೆ ನಿರ್ಮಿಸಿದ್ದರು.

ಅಂದಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಮೂರನೇ ವಿಕೆಟ್‌ಗೆ 202 ರನ್‌ಗಳ ಅದ್ಭುತ ಜೊತೆಯಾಟವಾಡಿದರು. ಕೊಹ್ಲಿ 66 ರನ್ ಗಳಿಸಿ ಔಟಾದರೆ, ರೋಹಿತ್ ಶರ್ಮಾ 50 ನೇ ಓವರ್‌ನ ಕೊನೆಯ ಎಸೆತದಲ್ಲಿ ಔಟಾದರು. ಅಷ್ಟರಲ್ಲಾಗಲೇ ಇತಿಹಾಸ ಸೃಷ್ಟಿಸಿದ್ದ ಹಿಟ್ ಮ್ಯಾನ್ ಬರೋಬ್ಬರಿ 264 ರನ್ ಬಾರಿಸಿ ತಂಡವನ್ನು 404 ರನ್‌ಗಳ ಬೃಹತ್ ಮೊತ್ತಕ್ಕೆ ಕೊಂಡೊಯ್ದಿದ್ದರು. ರೋಹಿತ್ ಶರ್ಮಾ ತಮ್ಮ ಇನ್ನಿಂಗ್ಸ್ ನಲ್ಲಿ 173 ಎಸೆತಗಳನ್ನು ಎದುರಿಸಿ 264 ರನ್ ಬಾರಿಸಿದರು. 152.60 ರ ಸ್ಟ್ರೈಕ್ ರೇಟ್ ನಲ್ಲಿ ಬ್ಯಾಟ್ ಬೀಸಿದ ರೋಹಿತ್ ಅವರ ಇನ್ನಿಂಗ್ಸ್‌ನಲ್ಲಿ 33 ಬೌಂಡರಿಗಳು ಮತ್ತು 9 ಸಿಕ್ಸರ್ ಗಳು ಸೇರಿದ್ದವು.

ವಾಸ್ತವವಾಗಿ ಈ ಪಂದ್ಯದಲ್ಲಿ ರೋಹಿತ್ 4 ರನ್ ಗಳಿಗೆ ಕ್ಯಾಚ್ ನೀಡಿದ್ದರು. ಆದರೆ ಲಂಕಾ ಆಟಗಾರ ತಿಸಾರ ಪೆರೆರಾ ಸುಲಭ ಕ್ಯಾಚ್ ಕೈಚೆಲ್ಲಿದರು. ಈ ಜೀವದಾನವನ್ನು ಸಂಪೂರ್ಣವಾಗಿ ಬಳಿಸಿಕೊಂಡ ಹಿಟ್ ಮ್ಯಾನ್ 72 ಎಸೆತಗಳಲ್ಲಿ 39 ಡಾಟ್ ಬಾಲ್ ಗಳನ್ನು ಎದುರಿಸಿ ಅರ್ಧಶತಕ ಪೂರೈಸಿದರು. ಮುಂದಿನ 50 ರನ್ ಗಳನ್ನು ಕೇವಲ 28 ಎಸೆತಗಳನ್ನು ಪೂರೈಸಿದರು. ನಂತರ 100 ರಿಂದ 150 ರನ್ ಪೂರೈಸಲು 25 ಎಸೆತ ಮತ್ತು 150 ರಿಂದ 200 ರನ್ ಪೂರೈಸಲು 26 ಎಸೆತಗಳನ್ನು ತೆಗೆದುಕೊಂಡಿದ್ದರಯ. ಹಾಗೆಯೇ 200 ರಿಂದ 250 ರನ್ ಪೂರೈಸಲು ರೋಹಿತ್ ಶರ್ಮಾ ಕೇವಲ 15 ಎಸೆತಗಳನ್ನು ಎದುರಿಸಿದ್ದರು.







# ಮುಂಬೈ ಸೇರಿದ ಶಾರ್ದೂಲ್

**2 ಕೋಟಿ ಮೊತ್ತಕ್ಕೆ ಖರೀದಿ**

2025ರ ಐಪಿಎಲ್‌ನಲ್ಲಿ ಲಕ್ನೋ ಸೂಪರ್‌ಜೈಂಟ್ ತಂಡದ ಪರ ಆಡಿದ್ದ ಟೀಂ ಇಂಡಿಯಾದ ಅನುಭವಿ ಬೌಲರ್ ಶಾರ್ದೂಲ್ ಠಾಕೂರ್ ಮುಂಬರುವ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡದ ಪರ ಆಡಲು ಸಜ್ಜಾಗಿದ್ದಾರೆ. ಶಾರ್ದೂಲ್ ಅವರನ್ನು ಟ್ರೇಡಿಂಗ್ ವಿಂಡೋದಡಿಯಲ್ಲಿ ಮುಂಬೈ ಫ್ರಾಂಚೈಸಿ ಹಣ ನೀಡಿ ಖರೀದಿಸಿದೆ.

ಮೇಲೆ ಹೇಳಿದಂತೆ ಮುಂಬೈ, ಶಾರ್ದೂಲ್ ಠಾಕೂರ್ ಅವರನ್ನು ನಗದು ಒಪ್ಪಂದದ ಮೂಲಕ ಖರೀದಿಸಿದೆ. ಇದರರ್ಥ ಎರಡೂ ತಂಡಗಳ ನಡುವೆ ಯಾವುದೇ ಆಟಗಾರರ ವಿನಿಮಯ ನಡೆದಿಲ್ಲ, ಬದಲಿಗೆ ಶಾರ್ದೂಲ್ ಅವರನ್ನು 2 ಕೋಟಿ ರೂ. ನಗದು ಮೊತ್ತಕ್ಕೆ ಖರೀದಿಸಿದೆ. ಲಕ್ನೋ ಸೂಪರ್ ಜೈಂಟ್ಸ್ ಕಳೆದ ವರ್ಷ ಶಾರ್ದೂಲ್ ಠಾಕೂರ್ ಅವರನ್ನು 2 ಕೋಟಿ ನೀಡಿ ಬದಲಿ ಆಟಗಾರನಾಗಿ ಖರೀದಿಸಿತ್ತು. ಐಪಿಎಲ್ ಪತ್ರಿಕಾ ಪ್ರಕಟಣೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದು, 'ಎರಡು ಫ್ರಾಂಚೈಸಿಗಳ ನಡುವಿನ ಒಪ್ಪಂದದ ಪ್ರಕಾರ, ಲಕ್ನೋ ಸೂಪರ್ ಜೈಂಟ್ಸ್ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಮುಂಬೈ ಇಂಡಿಯನ್ಸ್ ಪರ ಆಡಲು ಸಜ್ಜಾಗಿದ್ದಾರೆ. ಶಾರ್ದೂಲ್ ಅವರನ್ನು 2 ಕೋಟಿ ಮೊತ್ತಕ್ಕೆ ಮುಂಬೈ ಇಂಡಿಯನ್ಸ್‌ಗೆ ವಿನಿಮಯ ಮಾಡಿಕೊಳ್ಳಲಾಗಿದೆ' ಎಂದು ಹೇಳಿದೆ. ಐಪಿಎಲ್ ಇತಿಹಾಸದಲ್ಲಿ ಶಾರ್ದೂಲ್ ಠಾಕೂರ್ ಅವರನ್ನು ಮೂರನೇ ಬಾರಿಗೆ ವಿನಿಮಯ ಮಾಡಿಕೊಳ್ಳಲಾಗಿದೆ ಎಂಬುದು ಗಮನಿಸಬೇಕಾದ ಸಂಗತಿ. ಇದಕ್ಕೂ ಮೊದಲು, 2017 ರಲ್ಲಿ, ರೈಸಿಂಗ್ ಪುಣೆ ಸೂಪರ್‌ಜೈಂಟ್ ಅವರನ್ನು ಕಿಂಗ್ಸ್ ಇಲೆವೆನ್ ಪಂಜಾಬ್ (ಈಗ ಪಂಜಾಬ್ ಕಿಂಗ್ಸ್) ನಿಂದ ಖರೀದಿಸಿತ್ತು. ನಂತರ, 2023 ರ ಸೀಸನ್‌ಗೆ ಮುಂಚಿತವಾಗಿ, ಕೋಲ್ಕತ್ತಾ ನೈಟ್ ರೈಡರ್ಸ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್‌ನಿಂದ ಖರೀದಿಸಿತ್ತು. ಈ ಎರಡೂ ಒಪ್ಪಂದಗಳು ಸಂಪೂರ್ಣ ನಗದು ವ್ಯವಹಾರಗಳಾಗಿದ್ದವು. ಇದೀಗ ಮುಂಬೈ ಇಂಡಿಯನ್ಸ್‌ಗೆ ಸೇರುವುದು ಠಾಕೂರ್‌ಗೆ ಒಂದು ಹೊಸ ತಂಡವಾಗಿದೆ. ಅವರು 2010–12 ರವರೆಗೆ ಮುಂಬೈ ಇಂಡಿಯನ್ಸ್ ತಂಡದಲ್ಲಿ ನೆಟ್ಸ್ ಬೌಲರ್ ಆಗಿದ್ದರು. ಶಾರ್ದೂಲ್ ಠಾಕೂರ್ ಇದುವರೆಗೆ ಐಪಿಎಲ್‌ನಲ್ಲಿ 105 ಪಂದ್ಯಗಳನ್ನು ಆಡಿದ್ದು, 9.40 ರ ಎಕಾನಮಿ ದರದಲ್ಲಿ 107 ವಿಕೆಟ್ ಗಳನ್ನು ಪಡೆದಿದ್ದಾರೆ.

# ಸಿಎಸ್‌ಕೆ ತೊರೆದ ಜಡೇಜಾ

**ಶತಕೋಟಿಗೂ ಅಧಿಕ ಸಂಪಾದನೆ**

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಚಾಂಪಿಯನ್ ಆಟಗಾರ ರವೀಂದ್ರ ಜಡೇಜಾ ಎಲ್ಲವೂ ಅಂದುಕೊಂಡಂತೆ ನಡೆದರೆ ಮುಂದಿನ ಆವೃತ್ತಿಯಲ್ಲಿ ಹೊಸ ತಂಡದ ಪರ ಆಡುವುದನ್ನು ಕಾಣಬಹುದು. ಹರಿದಾಡುತ್ತಿರುವ ಮಾಹಿತಿಯ ಪ್ರಕಾರ, ರವೀಂದ್ರ ಜಡೇಜಾರನ್ನು ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ಟ್ರೇಡಿಂಗ್ ಮೂಲಕ ತಂಡಕ್ಕೆ ಸೇರಿಸಿಕೊಂಡಿದೆ ಎನ್ನಲಾಗುತ್ತಿದೆ.

ವಾಸ್ತವವಾಗಿ ರಾಜಸ್ಥಾನ್ ರಾಯಲ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಸಂಜು ಸ್ಯಾಮ್ಸನ್ ಮತ್ತು ರವೀಂದ್ರ ಜಡೇಜಾ ಅವರನ್ನು ಟ್ರೇಡಿಂಗ್ ಮೂಲಕ ತಮ್ಮ ತಂಡಗಳಿಗೆ ಸೇರಿಸಿಕೊಳ್ಳುತ್ತಿವೆ ಎಂಬ ಸುದ್ದಿ ಕೆಲವು ದಿನಗಳಿಂದ ಹರಿದಾಡುತ್ತಿದೆ.

ಈ ಸುದ್ದಿ ಇದುವರೆಗೂ ಗಾಳಿ ಸುದ್ದಿಯಾಗಿದ್ದರೂ, ಉಭಯ ಫ್ರಾಂಚೈಸಿಗಳು ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡಿದ್ದು, ಇಬ್ಬರು ಆಟಗಾರರು ಮುಂದಿನ ವರ್ಷದಿಂದ ಬೇರೆ ಬೇರೆ ತಂಡದಲ್ಲಿ ಆಡುವುದನ್ನು ಕಾಣಬಹುದು.

ಒಂದು ವೇಳೆ ರವೀಂದ್ರ ಜಡೇಜಾ ರಾಜಸ್ಥಾನ್ ರಾಯಲ್ಸ್ ತಂಡವನ್ನು ಸೇರಿಕೊಂಡರೆ, ಚೆನ್ನೈ ಸೂಪರ್ ಕಿಂಗ್ಸ್ ಜೊತೆಗಿನ ಅವರ 12 ವರ್ಷಗಳ ಪ್ರಯಾಣ ಅಂತ್ಯವಾಗಲಿದೆ. ಸಿಎಸ್ ಕೆ ತಂಡದ ಆಲ್‌ರೌಂಡರ್ ವಿಭಾಗದ ಜೀವಾಳ ಎನಿಸಿಕೊಂಡಿರುವ ಜಡೇಜಾ, ಈ 12 ವರ್ಷಗಳಲ್ಲಿ ತಂಡವು ಮೂರು ಪ್ರಶಸ್ತಿಗಳನ್ನು (2018, 2021, ಮತ್ತು 2023) ಗೆಲ್ಲಲು ಸಹಾಯ ಮಾಡಿದ್ದು ಮಾತ್ರವಲ್ಲದೆ, ಫ್ರಾಂಚೈಸಿಯ ಅತಿ ಹೆಚ್ಚು ಸಂಭಾವನೆ ಪಡೆಯುವ ಆಟಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

2012 ರಲ್ಲಿ ಜಡೇಜಾ ಫ್ರಾಂಚೈಸಿ ಸೇರಿದಾಗ, ಅವರನ್ನು 9.2 ಕೋಟಿಗೆ ಖರೀದಿಸಲಾಯಿತು. ನಂತರ ಅವರ ಸಂಬಳವನ್ನು 2014 ರಲ್ಲಿ 5.5 ಕೋಟಿಗೆ ಇಳಿಸಲಾಯಿತು. 2018 ರಲ್ಲಿ 7 ಕೋಟಿ ರೂ.ಗೆ ಮತ್ತೆ ತಂಡಕ್ಕೆ ಮರಳಿದ ಜಡೇಜಾರನ್ನು 2022 ರಲ್ಲಿ 16 ಕೋಟಿ ರೂ. ನೀಡಿ ತಂಡದಲ್ಲಿ ಉಳಿಸಿಕೊಳ್ಳಲಾಯಿತು. ಹಾಗೆಯೇ 2025 ರಲ್ಲಿಯೂ ಜಡೇಜಾ ಅವರಿಗೆ 18 ಕೋಟಿ ರೂ. ನೀಡಿ ತಂಡದಲ್ಲೇ ಉಳಿಸಿಕೊಳ್ಳಲಾಗಿತ್ತು. ಒಟ್ಟಾರೆಯಾಗಿ, ಜಡೇಜಾ ಫ್ರಾಂಚೈಸಿಯೊಂದಿಗೆ 12 ಆವೃತ್ತಿಗಳನ್ನು ಕಳೆದಿದ್ದು, ಈ 12 ವರ್ಷಗಳ ಪ್ರಯಾಣದಲ್ಲಿ ಜಡೇಜಾ ಅವರ ಖಜಾನೆಗೆ ಕೋಟಿ ಕೋಟಿ ರೂ. ಬಂದು ಬಿದ್ದಿದೆ. ಒಟ್ಟಾರೆಯಾಗಿ ಸಿಎಸ್‌ಕೆ ಜೊತೆಗಿನ ಪ್ರಯಾಣದಲ್ಲಿ ಜಡೇಜಾ ಒಟ್ಟು 123.4 ಕೋಟಿ ರೂಗಳನ್ನು ಸಂಪಾಧನೆ ಮಾಡಿದ್ದಾರೆ.





Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966